೫೩

ಸಂಕ್ರಮಣ

ಸಂಕ್ರಮಣ - ೫೩

ಚಂದ್ರಶೇಖರ ಪಾಟೀಲ
ಗಿರಡ್ಡಿ ಗೋವಿಂದರಾಜ
ಸಿದ್ಧಲಿಂಗ ಪಟ್ಟಣಶೆಟ್ಟಿ

ಸಂಕ್ರಮಣ ಪ್ರಕಾಶನ
ಧಾರವಾಡ – ೪

ಸಂಕ್ರಮಣ - ೫೩

ವರ್ಷದ ಆರು ಪ್ರಕಟನೆಗಳಿಗೆ ಆರು ರೂಪಾಯಿ

ವಿಳಾಸ : ‘ ಸಂಕ್ರಮಣ ’, ಧಾರವಾಡ : ೫೮೦೦೦೪

ಮನೋಹರ ಮುದ್ರಣಾಲಯ, ಧಾರವಾಡ : ೫೮೦೦೦೧

ಮುಖಪುಟ : ಚಂದ್ರಕಾಂತ ಕುಸನೂರ

ಈ ಸಂಚಿಕೆಯಲ್ಲಿ

ರಾಮಚಂದ್ರ ಕಿತ್ತೂರ ೫ ಪಾಂಡವ : ಸಣ್ಣಕತೆ

●

ರಾಮದಾಸ್ ೧೯ ಬೆದರುಬೊಂಬೆ : ನಾಟಕ

●

ಟಿ. ವಿ. ಹೆಗಡೆ ೪೨ ಕೆಂಪುಸೇನೆ : ಕವನ

●

ಎಚ್. ವಿ. ಶ್ರೀನಿವಾಸ ಶರ್ಮ ೪೩ ಎಂ. ಜಿ. ಕೃಷ್ಣಮೂರ್ತಿಯವರ 'ಐದು ವಚನಗಳು' : ಪ್ರತಿಕ್ರಿಯೆ

●

ರಾಮಚಂದ್ರ ಶರ್ಮ ೫೦ ಪ್ರೀತಿ : ಕವನ

●

ಚಂದ್ರಶೇಖರ ಪಾಟೀಲ ೫೧ ಸಮಕಾಲೀನ ವಿಮರ್ಶೆ, ಹೊಟ್ಟೆಕಿಚ್ಚು, ಪರಸ್ಪರ ಗೌರವ ಇತ್ಯಾದಿ : ದಿನಚರಿ

●

ಡಿ. ವಿ. ಗುರುಪ್ರಸಾದ್ ೬೦ ಗ್ರಹಣ : ಕವನ

●

ಮುರಳೀಧರ ಉಪಾಧ್ಯ ೬೧ ಬಿ. ವಿ. ಕಾರಂತ, ನಾಟಕ ತಾಲೀಮು, ಅಲ್ಕಾಜಿ ಸಂದರ್ಶನ, ಜೈನ್ ಭಾಷಣ ಇತ್ಯಾದಿ : ನಾಟ್ಯಾಲಾಪ

●

ಎಚ್. ಎಸ್. ಭೀಮನಗೌಡರ ೭೧ ಹೆಣ್ಣು : ಕವನ

ಈ ಸಂಚಿಕೆಯ ಲೇಖಕರು

ರಾಮಚಂದ್ರ ಕಿತ್ತೂರ

ಸಿಂಡಿಕೇಟ್ ಬ್ಯಾಂಕ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

●

ರಾಮದಾಸ್

ಕನ್ನಡ ಅಧ್ಯಾಪಕರು, ಶ್ರೀ ಪೂರ್ಣಪ್ರಜ್ಞ ಕಾಲೇಜು, ಉಡುಪಿ

●

ಟಿ. ವಿ. ಹೆಗಡೆ

ಇಂಗ್ಲಿಷ್ ಅಧ್ಯಾಪಕರು, ಡಿ. ವಿ. ಎಸ್. ಕಾಲೇಜು, ಶಿವಮೊಗ್ಗ

●

ಎಚ್. ವಿ. ಶ್ರೀನಿವಾಸ ಶರ್ಮ

ಕನ್ನಡ ಅಧ್ಯಾಪಕರು, ಎಂ. ಇ. ಎಸ್. ಕಾಲೇಜು, ಮಲ್ಲೇಶ್ವರ, ಬೆಂಗಳೂರು-೩

●

DR R. SHARMA
HEAD, PSYCHOLOGICAL SERVICE
MINISTRY OF EDUCATION, P. O BOX RW 93
LUSAKA, ZAMBIA

●

CHANDRASHEKHAR PATIL
F 8 MARY MORRIS RESIDENCE
24 SHIRE OAK ROAD
LEEDS LS 6 2DE
UNITED KINGDOM

●

ಡಿ. ವಿ. ಗುರುಪ್ರಸಾದ್

ಇಂಗ್ಲಿಷ್ ಎಂ. ಎ. ವಿದ್ಯಾರ್ಥಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

●

ಮುರಳೀಧರ ಉಪಾಧ್ಯ

ಕನ್ನಡ ಅಧ್ಯಾಪಕರು, ಮಣಿಪಾಲ ಜ್ಯೂನಿಯರ್ ಕಾಲೇಜು, ಮಣಿಪಾಲ (ದ.ಕ.)

●

ಎಚ್. ಎಸ್. ಭೀಮನಗೌಡರ

ಇಂಗ್ಲಿಷ್ ಅಧ್ಯಾಪಕರು, ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಸಂಕೇಶ್ವರ

ಸಣ್ಣ ಕತೆ

ರಾಮಚಂದ್ರ ಕಿತ್ತೂರ

•

ಪಾಂಡವ

'ಅವನು' ಹಾಗೆಯೇ ಕುಳಿತಿದ್ದ.... ಎಷ್ಟೋ ಹೊತ್ತಿನವರೆಗೆ ಶೂನ್ಯ ದೃಷ್ಟಿ....ಕಣ್ಣುಗುಡ್ಡೆಗಳು ಅತ್ತಿತ್ತ ಚಲಿಸುತ್ತವೆ....ಎಡಗೈ ಸುತ್ತಲಿನ ಹುಲ್ಲನ್ನು ಕಿತ್ತಿ ಕಿತ್ತಿ ಎಸೆಯುತ್ತಿದೆ.... ಬೇರು ಸಹಿತ ಹುಲ್ಲನ್ನು ಕಿತ್ತುವ ಸಾಹಸ ಅದಕ್ಕೆ ಸಾಧ್ಯವಾಗುತ್ತಿಲ್ಲ. ಬಂದಷ್ಟೇ ಹುಲ್ಲನ್ನು ಕಿತ್ತು ದೂರ ಎಸೆಯುವ ಪ್ರಯತ್ನ. ಮೋರೆಯ ಮೇಲೆಲ್ಲ ಬೇಸರಿಕೆ. ಮನಸ್ಸು ಏನನ್ನೋ ಮೆಲಕು ಹಾಕುತ್ತಿದೆ. ಎಮ್ಮೆಯ ಬಾಯಿಯ ಹಾಗೆ.... ಎಮ್ಮೆಯ ಹಾಗೆ ಕೊರಡು ಪ್ರಾಣಿಯಾಗಿದ್ದರೆ ? ಬಿಸಿಲೂ ಅಷ್ಟೇ, ಮಳೆಯೂ ಅಷ್ಟೇ.... ನೀರಿನಲ್ಲಿ ಬಿದ್ದು ಬಿಟ್ಟರೆ ಮುಗಿಯಿತು ! ಅದೆಂಥ ದಾರ್ಶನಿಕ ಪ್ರಾಣಿ ! ಓಹ್, ಅದರ ಸುಖವೇ ಸುಖ ! ಅದು ಮೆಲಕು ಹಾಕುವಾಗ ಬಾಯಿಯಿಂದ ಸೋರುವ ಲಾಲಾರಸದ ನೆನಪು.... ತುಸು ಹೇಸಿಕೆಯ ಅನುಭವ. 'ಅವನು' ಎದುರಿನಲ್ಲಿಯೇ ಹೋಗುತ್ತಿದ್ದ ಇರುವೆಗಳ ಸಾಲಿನ ಕಡೆಗೆ ನೋಡುತ್ತಾನೆ.... ಸಣ್ಣ ಸಣ್ಣ ಇರುವೆಗಳು.... ಕೆಂಪು ಇರುವೆಗಳು....ತಮ್ಮಷ್ಟಕ್ಕೆ ತಾವು ಚಲಿಸುತ್ತಿವೆ. ಜಗತ್ತಿನ ಪರಿವೆಯೇ ಇಲ್ಲ ಅವಕ್ಕೆ, ಹೊರಟಿವೆ. ಹಾಗೆಯೇ ಹೊರಟಿವೆ ಒಂದರ ಹಿಂದೆ ಒಂದು ಎಲ್ಲಿಗೋ ಏನೋ ದೇವರೇ ಬಲ್ಲ ! ಈ ಇರುವೆಗಳಂತಾದರೆ ? ಅವನು ಒಂದು ಕ್ಷಣ ಯೋಚಿಸುತ್ತಾನೆ. ಮೋರೆಯ ಮೇಲೆ ತಿಳಿನಗೆ ತೇಲುತ್ತದೆ. ಬಾಯಲ್ಲಿಯ ಹುಲ್ಲುಕಡ್ಡಿಯನ್ನು ಅಗಿಯುವುದನ್ನು ನಿಲ್ಲಿಸುತ್ತಾನೆ. ಕಣ್ಣುಗಳು ಎದುರಿನ ಬಾವಿಯ ಕಡೆಗೆ ಹರಿಯುತ್ತವೆ. ಅದರ ಗೋಡೆ....ಕಲ್ಲುಗಳಿಂದ ಕಟ್ಟಿದ್ದರೂ ಅಲ್ಲಲ್ಲಿ ಬಿದ್ದು ಏರುಪೇರಾಗಿದೆ.... ನವ್ಯ ಕಲಾಕೃತಿಯ ಹಾಗೆ. ಕಲ್ಲುಗಳ ನಡುವೆ ಬೆಳೆದಿರುವ ಸಣ್ಣ ಸಣ್ಣ ಗಿಡಗಳು; ಕಲ್ಲುಗಳನ್ನು ಸೀಳಿಕೊಂಡು ಬಂದಿರುವ ಆಲದ ಮರದ ಬೇರುಗಳು....ಬದಿಯಲ್ಲಿ ಬಿದ್ದಿದ್ದ ಕಲ್ಲೊಂದನ್ನು ಎತ್ತಿಕೊಂಡು ಕುಳಿತಲ್ಲಿಂದಲೇ ಬೀಸಿ ಬಾವಿಯಲ್ಲಿ ಒಗೆಯುತ್ತಾನೆ. ಕುತೂಹಲದಿಂದ ಸಪ್ಪಳವನ್ನು ಆಲಿಸಲು ಪ್ರಯತ್ನಿಸುತ್ತಾನೆ.... ಕಲ್ಲು ನೀರಲ್ಲಿ ಮುಳುಗಿ

ಹೋಯಿತೆಂದು ಕಾಣುತ್ತದೆ. ಸಪ್ಪಳವಾಗಲೇ ಇಲ್ಲ. ಅವನಿಗೆ ನಿರಾಶೆಯಾಯಿತು.

ನೆನಪುಗಳು....ಬರೀ ನೆನಪುಗಳು........ ಗೂಡಿನಲ್ಲಿಯ ಜೇನ್ನೊಣಗಳ ಹಾಗೆ ಅವನ ಮನಸ್ಸನ್ನು ತಿನ್ನುತ್ತಿವೆ. ಬಾವಿಯಲ್ಲಿಯ ಆಮೆಯ ನೆನಪು: ಸ್ವಲ್ಪ ಸಪ್ಪಳಕ್ಕೂ ಕುತ್ತಿಗೆಯನ್ನು ಒಳಗೆ ಎಳೆದುಕೊಂಡು ಅವಿತಿಟ್ಟುಕೊಳ್ಳುವ ಜೀವ. ಮೂಲೆಯಲ್ಲಿ ಕುಳಿತ ಅಜ್ಜಿಯ ನೆನಪು. ಅದೇ ಮಾಸಿದ ಹಾಸಿಗೆ, ಕೊಳಕು ಬಟ್ಟೆ, ಗೂರಲು ಕೆಮ್ಮು, ಇಳಿಬಿದ್ದ ಮುಖ, ಒಳನೆಟ್ಟ ಕಣ್ಣು, ಬಚ್ಚ ಬಾಯಿ. ಅದೂ ಒಂದು ವಿಚಿತ್ರ ಮುದುಕಿಯೇ, ಬೇಸರವಾದಾಗ ವೆಂಕಪ್ಪನಿಂದ ಶಿವರಾಯನಿಂದ ತಪ್ಪಿಸಿಕೊಳ್ಳಬೇಕೆಂದಾಗ ಅವಳ ಹತ್ತಿರ ಹೋಗುವನು....ಅವಳ ತೊಡೆಯಲ್ಲಿ ಮುಖವಿಟ್ಟು ಅಳಬೇಕೆಂದರೆ, ಅವಳೇ ಮುಂದಾಗಿ ಇವನನ್ನು ಪೂಸಿ ಅತ್ತುಬಿಡುವಳು, ಅವನಿಗೋ ಎಲ್ಲಿಲ್ಲದ ಸಿಟ್ಟು! 'ಅಜ್ಜಿ ನಾನು ಅಳಬೇಕೆಂದರೆ ನೀನೇ ಅಳುವೆಯಲ್ಲ ?' ಎಂದು ಕೇಳಬೇಕೆನಿಸುವದು. ಅಷ್ಟರಲ್ಲಿ ಅವಳು ದ್ರಾಕ್ಷಿ, ಗೋಡಂಬಿಗಳನ್ನು ಅವನ ಕೈಯಲ್ಲಿ ತುರುಕುವಳು. ಅವನು ದೂರ ದೂರ ಓಡಲು ಪ್ರಯತ್ನಿಸುವ. ನೆನಪುಗಳು........ಅವೇ ನೆನಪುಗಳು ಕಣೆಯಿಂದ ಹೊಡೆದ ಕಲ್ಲುಗಳಂತೆ ಗಿಮಿ ಗಿಮಿ ತಿರುಗುತ್ತ ಬಂದು ಬಡೆಯುತ್ತವೆ. ಕಪ್ಪಲಿ ನೀರಿನ ಹಾಗೆ ಮೇಲಿನಿಂದ ಕೆಳತನಕ ತೋಯಿಸಿ ಬಿಡುತ್ತವೆ. ಸುತ್ತಲಿನ ಹುಲ್ಲಿಗಾಗಿ ಮತ್ತೆ ಕೈ ತಡಕಾಡಿತು. ನೆಲವೆಲ್ಲ ಬರಿಯದು. ಸಿಟ್ಟಿನಿಂದ ಒಮ್ಮೆ 'ಥತ್' ಎಂದು ಕ್ಯಾಕರಿಸಿ ಉಗುಳಿದ. ಏಳಬೇಕೆಂದು ಮನಸ್ಸು ಮಾಡಿದವ ಮತ್ತೆ ಅಲ್ಲಿಯೇ ಕುಳಿತ. 'ನಾನೇ ಇರದಿದ್ದರೆ? ತಲೆಯ ಮೇಲೆ ಏನೋ ಬಿದ್ದಂತಾಯಿತು, ತಲೆಯೆತ್ತಿ ನೋಡಿದ ಮೇಲೆ ಗೂಡಿನಲ್ಲಿ ಕುಳಿತ ಕಾಗೆ, 'ಥೂ' ಎಂದು ತಲೆಯನ್ನು ಕೈಯಿಂದಲೇ ಸವರಿದ. ಅದನ್ನು ಮತ್ತೆ ನೆಲಕ್ಕೆ ತಿಕ್ಕಿದ, ಮತ್ತೊಮ್ಮೆ ತಲೆ ಎತ್ತಿ ನೋಡಿದ. 'ಹುಶ್' ಎಂದು ಓಡಿಸಬೇಕೆನ್ನುವ ವಿಚಾರ....ಅದು ತನ್ನ ಮರಿಗೆ ಗುಟುಕು ಕೊಡುವದನ್ನು ನೋಡುವದರಲ್ಲಿ ಮರೆತ. ಅವನ ದೃಷ್ಟಿ ಆಲದ ಮರಕ್ಕೆ ಹರಿಯಿತು. ಯಾವ ಕಾಲದ್ದೋ ಏನೋ ಈ ಮರ? ಗೋಮಟೇಶ್ವರನಂತೆ ನಿಶ್ಚಲವಾಗಿ ನಿಂತಿದೆ. ಅದರ ಬೇರುಗಳನ್ನು ಹಿಡಿದುಕೊಂಡು ಜೋಕಾಲಿಯಾಡಿದ ನೆನಪು. ಆ ತುದಿಯಿಂದ ಈ ತುದಿಯ ವರೆಗೆ ಜಮ್ಮನೆ ತೂಗುವ ಬಾಲ್ಯ....

ಅವನಿಗೆ ಬಚ್ಚಬಾಯಿ ಮಾಸ್ತರರ ನೆನಪು. ಅವನು ಮೈಯ್ಯೆಲ್ಲ ದ್ವೇಷಿಸುವ ವಸ್ತು ಎಂದರೆ ಆ ಮಾಸ್ತರರ ಬಚ್ಚ ಬಾಯಿಯ ತಂಬಾಕಯುಕ್ತ ಪ್ರೇಮ ಸಿಂಚನ. ಆ ಪ್ರೇಮದ ಮಳೆ ಇವನೊಬ್ಬನಿಗೆ ಮಾತ್ರ ಸೀಮಿತವಾಗಿದ್ದಿತು. ಶಾಲೆಯಲ್ಲಿ ಆ ವಿಶಿಷ್ಟ ಅಧಿಕಾರ ಇವನೊಬ್ಬನಿಗೇ. ಏಕೆಂದರೆ 'ಅವನು' ಯಂಕಪ್ಪನ ಮಗ. ಉಳಿದವರಿಗೆ ಬೆತ್ತ ಭರಮಪ್ಪನಾದರೆ ಅವನಿಗೆ ತಂಬಾಕಯುಕ್ತ ಮಳೆ. ಅವರ ಎದುರಿಗೆ ಕೂತು ಕವಲಿತ್ತಿನ ಹಾಗೆ ಬಲವಂತವಾಗಿ ಗೋಣು ಹಾಕಲೇಬೇಕು. ಅವನು ಅಂಗೈಯನ್ನು ಮತ್ತೆ ನೋಡಿಕೊಂಡ. ಕೈಗೆ ಹತ್ತಿದ ಹೊಲಸು ಪೂರ್ತಿ ಹೋಗಿರಲಿಲ್ಲವೆಂದು ತೋರುತ್ತದೆ. ಮತ್ತೆ ಮತ್ತೆ ನೆಲಕ್ಕೆ ತಿಕ್ಕಿದ. ಆಲದ ಬೇರಿಗೆ ಇನ್ನೊಮ್ಮೆ ತೂಗುವಾ ಎನಿಸಿತು. ಎದ್ದು ನಿಂತ. ಆ ಉದ್ದಕ್ಕೂ ಅವನ ನೆರಳು ಚಾಚಿತ್ತು ಅದನ್ನು ನೋಡಿದ. ತನ್ನನ್ನು ನೋಡಿಕೊಂಡ. 'ಅಡ್ಡಿಯಿಲ್ಲ' ಎನಿಸಿತು. 'ಅಂತೂ ತುಂಬ ದೊಡ್ಡವನಾಗಿರುವೆ' ಎಂದುಕೊಂಡ. 'ಇನ್ನು ಮೇಲೆ ತೂಗಾಡಿದರೆ ಜನ ನಗುವರು' ಎಂಬ ವಿಚಾರದ ಸುಳಿ ಎದ್ದು ನಿಂತವನು ಹಾಗೇ ನಿಂತ. ಕೂಡಲೂ ಬೇಸರಿಕೆ ಕಾಲುಗಳನ್ನು ಎಳೆಯುತ್ತ ಬಾವಿಯ ಕಟ್ಟೆಯ ವರೆಗೆ ಬಂದ. ಗಡಗಡೆಯನ್ನು ಹಿಡಿದು, ಬಗ್ಗಿ ನೀರನ್ನು ನೋಡಿದ. ನಿಂತ ನೀರಿನಲ್ಲಿ ಆಮೆ ಕಾಣಿಸಿತು. 'ಒಂದು ಸಲ ಕೇಸು ನಿನ್ನಂತಾಗಲಿ ಆಮೇಲೆ ಈ ಎಲ್ಲದಕ್ಕೂ ನೀನೇ ಧಣಿ' ಆದರೆ....ಆದರೆ ಅವಳು ? ಅವ್ವ....ಅಲ್ಲಲ್ಲ........ಕೇವಲ ರಾಧಾಬಾಯಿ........ ಅಲ್ಲಲ್ಲ....ಅವ್ವ.... ನಾನೇನು ಮಾಡಲಿ ? ನನ್ನ ತಪ್ಪೇನೂ ಇಲ್ಲವಲ್ಲ ಇದರಲ್ಲಿ! ಅವನಿಗೆ ರೋಷ ಉಕ್ಕೇರಿ ಬಂದಿತು. ಬೀಸಿ ಕಲ್ಲೆತ್ತಿ ನೀರಿಗೆ ಎಸೆದ. ಆಮೆ ಪಳಕ್ಕನೆ ಹೋಯಿತು 'ಘಂ' ಎಂದು ಶಬ್ದವಾಯಿತು. ಒಂದು ಕಲ್ಲು ಸುತ್ತಲೂ ಅಲೆಗಳು, ಒಂದರ ಹಿಂದೆ ಒಂದು....ವೃತ್ತಾಕಾರವಾಗಿ ತಿರುಗುತ್ತಲೇ ಇವೆ. ಕಲ್ಲು ಪಾತಾಳ ಕಂಡರೂ ಅಲೆಗಳು ಮಾತ್ರ ನಿಂತೇ ಇಲ್ಲ. ಹರಡುತ್ತಲೇ ಇವೆ. ದಡಗಳಿಗೆ ಅಪ್ಪಳಿಸುತ್ತಲೇ ಇವೆ. ಅಲೆಗಳನ್ನು ಎಣಿಸಹತ್ತಿದ, ಒಂದು, ಎರಡು, ಮೂರು, ಎಂಟು, ಹತ್ತು....ಅವನು ಬೇಸತ್ತ. ಏನೋ ಹೊಳೆದಂತವನಾಗಿ ಬರಿಯ ದಿಬ್ಬದ ಬಳಿ ಹೋಗಿ ಕುಕ್ಕರುಗಾಲಿನಲ್ಲಿ ಕುಳಿತ. ಸರಿಯೆನಿಸಲಿಲ್ಲವೆಂದು ತೋರುತ್ತದೆ........ಏರಿಸಿದ ಪಾಯಿಜಾಮಾ ಇಳಿ ಬಿಟ್ಟು ನಿಂತೇ ಆರಂಭಿಸಿದ. ಅದನ್ನು ನೋಡಿ ನನಗೆ ನೆನಪಾಯಿತು. "I piss on

thee with a great height" "ಶಾಮರಾಯ ಯಂಕಪ್ಪನ ಮೇಲೆ ವ್ಯಭಿಚಾರವನ್ನು ಹೊರಿಸಿದನಲ್ಲವೇ ? ಎಷ್ಟು ಸತ್ಯವೋ ಏನೋ ?" ಅವನು ತಲೆಯಾಡಿಸಿದ.

ತಿರುಗಿ ಬಂದವನು ಒಂದೊಂದಾಗಿ ಅರಿವೆಗಳನ್ನು ಬಿಚ್ಚತೊಡಗಿದ. ಕಟ್ಟೆಯ ಮೇಲೆ ಇಟ್ಟ ಚಡ್ಡಿಯೊಂದನ್ನು ಬಿಟ್ಟು, ಜನಿವಾರವನ್ನೂ ತೆಗೆದಿಟ್ಟ. ಕೈಗಳು ಯಾಂತ್ರಿಕವಾಗಿ ತೊಡೆಗಳನ್ನೂ ತೋಳುಗಳನ್ನೂ ತಟ್ಟುತ್ತಿದ್ದವು. ಸೂರ್ಯನ ಕಿರಣಗಳಲ್ಲಿ ಮಿರಿಮಿರಿ ಮಿಂಚುವ ತನ್ನ ಬರಿಮೈಯನ್ನು ನೋಡಿಕೊಂಡ.

'ವ್ಯಭಿಚಾರ, ! ಛೇ ಹಾಗಿರಲಾರದು', ಗಡಗಡೆಯನ್ನು ಹಿಡಿದುಕೊಂಡು 'ದುಢುಂ' ಎಂದು ನೀರಿನಲ್ಲಿ ಜಿಗಿದ. ಒಮ್ಮೆಲೇ ಕತ್ತಲೆ........ಕೆಳಗೆ....ಕೆಳಗೆ ಇನ್ನೂ ಕೆಳಗೆ....ಪಾತಾಳ....ನೀರು....ನೀರು....ಎಲ್ಲೆಲ್ಲೂ ನೀರು....ಮೈತುಂಬ ನೀರು.... ಕೈಗಳನ್ನು ಬಡೆದ. ನಿಧಾನವಾಗಿ ಮೇಲಕ್ಕೆ ಬಂದ. ನೀರಿನಲ್ಲಿ ಎದ್ದು ನಿಂತು ತಲೆ ಕೊಡವಿದ. ನೀಳವಾಗಿ ಉಸಿರೆಳೆದ. ಸುತ್ತಲಿನ ನೀರನ್ನು ಬದಿಗೆ ತಳ್ಳಿದ. 'ಢಂ' ಎಂದು ವಿಶಿಷ್ಟ ಪ್ರಕಾರವಾಗಿ ಬಡಿದು ಸಪ್ಪಳ ಮಾಡಿದ. ಬಾವಿಯೆಲ್ಲವೂ ಪ್ರತಿಧ್ವನಿತವಾಯಿತು. ಮತ್ತೆ ಮತ್ತೆ ಹಾಗೆಯೇ ಹಿಂದಕ್ಕೆ ಚಾಚಿದ. ಅನಾಮತ್ತಾಗಿ ಅಂಗಾತ ಬಿದ್ದ. ಸಾವಕಾಶವಾಗಿ ಕೈಗಳನ್ನು ಬೀಸತೊಡಗಿದ ಮನಸ್ಸಿಗೆ ಆರಾಮೆನಿಸಿತು. ಮತ್ತೆ ಮತ್ತೆ ಇನ್ನೂ ಜೋರಾಗಿ ಹಿಂದಕ್ಕೆ ಬೀಸತೊಡಗಿದ. ಮೇಲೆ ನೀಲಿ ಆಕಾಶ. ನೀಲಿ ಬಣ್ಣ ಬಿಟ್ಟು ಮತ್ತೇನೂ ಇಲ್ಲ. ಹೆಸರಿಗೆ ಮಾತ್ರ ಅಲ್ಲೊಂದು ಇಲ್ಲೊಂದು ಚಿತ್ರ ವಿಚಿತ್ರ ಮೋಡಗಳು. ಇಡೀ ಆಕಾಶವೆಲ್ಲ ಬರಿದೋ ಬರಿದು.... ಸುಡುತ್ತಿರುವ ಬಿಸಿಲು ಮೇಲೆ ಕೆಳಗೆ ತಂಪು ನೀರು. ಅವನಿಗೆ ಬಹಳ ಹಾಯೆನಿಸಿತು. ಹೀಗೇಯೇ ಬಾವಿಯಲ್ಲಿ ಇದ್ದು ಬಿಡೋಣವೆನಿಸಿತು. ಜಗತ್ತಿನಿಂದ ಕೆಳಗೆ.... ಕೆಳಗೆ....ಬಹಳ....ಕೆಳಗೆ. ಯಾರಿಗೂ ಕಾಣದ ಹಾಗೆ, ಮುಖಕ್ಕೆ ಚಿಮ್ಮುವ ನೀರನ್ನು ಬಾಯಲ್ಲಿ ಹಿಡಿದುಕೊಂಡು ಆಕಾಶದ ಕಡೆಗೆ ಉಗುಳುತ್ತ ಈಜುವ ದೆಂದರೆ 'ಅವನು' ಎಲ್ಲವನ್ನೂ ಮರೆಯುತ್ತಾನೆ. ಮತ್ತೆ ಮತ್ತೆ ಸೂರ್ಯನಿಗೆ ಮುಟ್ಟುವ ಹಾಗೆ ನೀರನ್ನು ಉಗುಳುವ ವ್ಯರ್ಥ ಸಾಹಸ ಮಾಡುತ್ತಾನೆ. ಎಲ್ಲವನ್ನೂ ಮರೆಯುತ್ತಾನೆ. ಅವನು.... ಆ ಬಾವಿ.... ಆ ನೀರು ....ಆ

ಅಲೆಗಳು.... ಅವನು ಏಕಾಕಿ....ಇದೇ ಪ್ರಪಂಚದಲ್ಲಿ....ಇದೇ ಕೋರ್ಟಿನಲ್ಲಿ.... ಮತ್ತೆ ಯಾರೂ ಇಲ್ಲ. ಎದುರಿಗೆ ನ್ಯಾಯಾಧೀಶ.... ಅವನನ್ನೇ ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದಾನೆ. ನೀರವ ಮೌನ ಸಹಿಸಲು ಅಸಾಧ್ಯ.... ಅವನು ಚೀರುತ್ತಾನೆ.

"Your honourರೇ, ನಾನು ಇರುವುದೇ ಸುಳ್ಳು....ನನಗೆ ಯಾವುದೂ ಬೇಡ.... ನಾನೇ ಓಡಿ ಹೋಗುತ್ತೇನೆ.... ನೀವು ನನಗಾಗಿ ಮತ್ತೊಂದು ವಾರಂಟು ತೆಗೆಯುವುದಿಲ್ಲವಷ್ಟೇ? ನೋಡಿರಿ, ನಿಮಗೂ ಸುಲಭ.... ನಾನೇ ಇಲ್ಲದಿದ್ದ ಮೇಲೆ....ಎಲ್ಲರಿಗೂ ಸುಲಭ....ಈ ಅಲೆಗಳೂ ಏಳುವುದಿಲ್ಲ....ದಂಡೆಗಳಿಗೂ ಅಪ್ಪಳಿಸುವುದಿಲ್ಲ.... ಈ ದಂಡೆಗಳಿಗಿದ್ದ ಬಂಧ ನನಗಿಲ್ಲ. ಅವು ಎಲ್ಲವನ್ನೂ ನುಂಗಿಕೊಳ್ಳುತ್ತವೆ. ನನಗೋ, ಈ ತೆರೆಗಳೆಂದರೆ ದ್ವೇಷ!"

"ನೀನು ಇಲ್ಲಿ ಇದ್ದೀಯಾ? ನಾನು ಹುಡುಕಾಡಿದೆ. ಹಾಗೆಯೇ ನೋಡೋಣವೆಂದು ಬಗ್ಗಿದರೆ ನೀನು ಇಲ್ಲಿ ಇರಬೇಕೆ?"

ಅವನ ಗೆಳೆಯ ಗುರುಸಿದ್ಧ ಮೇಲಿನಿಂದ ಬಗ್ಗಿ ಒದರುತ್ತಿದ್ದ. ಅವನ ಸಮಾಧಿ ಭಂಗವಾಯಿತು. ಕಣ್ಣುಬಿಟ್ಟ, ಮುಚ್ಚಿದ. 'ಛೇ' ಎಂದವನೇ ಮತ್ತೆ ಕಣ್ಣು ತೆಗೆದ.

'ನಿನ್ನ ಸಲುವಾಗಿ ಎಷ್ಟು ಹಾದಿ ನೋಡಬೇಕೋ ಮಹಾರಾಯ! ಯಾಕ ಇಷ್ಟು ತಡಾಮಾಡಿದಿ? ಕಡೀಕ ನಾ ಬಿಟ್ಟವನs ಇನ್ನು ಬಿಟ್ಟೆನೋಡು ನೀರಾಗ.'

'ತಡಿ, ತಡೀ, ನಾನೂ ಬಂದೆ' ಎಂದವನೇ ಗುರುಸಿದ್ಧನೂ ಅರಿವೆಗಳನ್ನು ಕಳಚಿ ನೀರಿನಲ್ಲಿ ಹಾರಿದ.

'ಗುರುಸಿದ್ಧ, ಬ್ಯಾಸರ ಬಡಾಳ ಬಂದದ ನೋಡು. ನಿನ್ನ ಸಲುವಾಗಿ ಕಾದೂ ಕಾದೂ ಮತ್ತಿಷ್ಟು ಹೆಚ್ಚಾತು ನೋಡು.'

'ನಿನ್ನ ಬ್ಯಾಸರದ ಕಾರಣ ಬ್ಯಾರೇ ಏನು ಅದ? ಆದ ಕೋರ್ಟಿನದs ಹೌದಲ್ಲೋ. ಇವತ್ತು, ನಾಳೆ ಇಷ್ಟರೊಳಗ ಏನು ಅಂಬೋದು ತಿಳಿಬಹುದು. ನಿನಗ ಯಾಕ ಅದರ ಕಾಳಜಿ? ಎಲ್ಲಾ ಬರೋಬರಿನ ಆಗತದ.'

'ಏನೋಪಾ, ನನಗಂತೂ ಇದೊಂದೂ ಬ್ಯಾಡಾಗೇದ. ಕೋರ್ಟಿನ ಕಟ್ಟಿ ಹತ್ತಿದ ಮ್ಯಾಲ ಯಾರ ಮರ್ಯಾದಿ ಉಳೀತದ? ಜಗತ್ತಿನೊಳಗ ಎಲ್ಲಾ ವಿಷಯಗಳನ್ನು ಕೋರ್ಟಿನೊಳಗs ಸಾಧಿಸಲಿಕ್ಕೆ ಸಾಧ್ಯ ಅದ ಏನು?'

ಗುರುತಿಸಿದ್ದ ಮುಂದೆ ಮಾತಾಡಲಿಲ್ಲ. ಅವನೂ ಮಾತು ಬೆಳೆಸಲಿಲ್ಲ. ಇಬ್ಬರೂ ಪ್ರಾಣ ಕೂಡುತ್ತಿದ್ದರು. [illegible]—

೨

ಎಲ್ಲರಿಗೂ 'ಅವನು' ಒಂದು ಸಮಸ್ಯೆಯೇ ಆಗಿದ್ದನು. ನ್ಯಾಯಾಧೀಶರಿಗೆ, ವಕೀಲರಿಗೆ, ಕಾಯ್ದೆಗೆ ದೇಸಾಯಿ ಮನೆತನದ ಆಸ್ತಿಗೆ, ಯಂಕಪ್ಪನಿಗೆ, ರಾಧಾಬಾಯಿಗೆ-ಮೂಲತಃ ಅವನಿಗೇ ಅವನು ಒಂದು ಸಮಸ್ಯೆ. ನ್ಯಾಯಾಲಯ ಗೀತೆಯನ್ನು ಮುಟ್ಟಿ ದೇವರಾಣೆ ಮಾಡಿ ಸಾಕ್ಷಿ ಹೇಳಿದ– ತಂಗಿ ರಾಧಾಬಾಯಿಯ ಲಗ್ನವಾದಾಗ ಶಿವರಾಯ– ಯಂಕಪ್ಪ ಇವರ ಸ್ನೇಹ ಸಲುಗೆಯಾಗಿರಲಿಲ್ಲ. ಯಂಕಪ್ಪನು ಇವರನ್ನು ನಾಟಕದ ಗೀಳಿಗೆ ಎಳೆದನು. ನಾಟಕ ಕಂಪನಿಯ ನೆಪದಲ್ಲಿ ಇವರ ಆಸ್ತಿಯನ್ನೆಲ್ಲ ಕೊಳ್ಳೆ ಹೊಡೆದನು. ನಾಟಕದಿಂದಾಗಿ ಶಿವರಾಯರ ಲಕ್ಷ್ಯ ಮನೆಯ ಕಡೆಗೆ ಇರುತ್ತಿರಲೇ ಇಲ್ಲ. ರಾಧಾಬಾಯಿ ಒಂದು ಗೋಳಿಟ್ಟಾಗ ನಾನು ತಂಗಿಯ ಸಲುವಾಗಿ ಶಿವರಾಯರೊಂದಿಗೆ ಮಾತನಾಡಬೇಕಾಯಿತು. ಅವರು ನನ್ನನ್ನು ಉಪೇಕ್ಷಿಸಿದರು. ಆದರೆ ತಂಗಿಯ ಆಸ್ತಿಯ ರಕ್ಷಣೆಗಾಗಿ ನಾನು ಪ್ರಯತ್ನಗಳನ್ನು ಮುಂದುವರೆಸಬೇಕಾಗಿತ್ತು. ಮುಖ್ಯವಾಗಿ ಅವರಿಬ್ಬರ ಅಭ್ಯಾಸವನ್ನು ಕುರಿತು ವಿಚಾರಿಸತೊಡಗಿದೆ. ಇವರ ನಾಟಕದ ಗದ್ದಲದ ಹಿಂದೆ ತುಳಸಾ ಎಂಬ ನಾಯಕಿಯೂ ಇರುವಳೆಂದು ನನಗೆ ತಿಳಿಯಿತು. ದಿನಗಳು ಕಳೆದಂತೆ ಯಂಕಪ್ಪನ ಜಾಲ ನಾನು ಹೆದರಿದ ಮಟ್ಟಕ್ಕೇ ಬಂದಿತು. ನಾಟಕ ಕಂಪನಿಯ ಆರ್ಥಿಕ ಮುಗ್ಗಟ್ಟನ್ನು ಸುಧಾರಿಸುವ ಯತ್ನದಲ್ಲಿದ್ದ ಶಿವರಾಯರನ್ನು ಆ ಗದ್ದಲದಿಂದ ಬಿಡಿಸಲು ಪ್ರಯತ್ನಿಸಿದೆ. 'ಮಕ್ಕಳಿಲ್ಲವೆಂದ, ಮಾತ್ರಕ್ಕೇ, ಎಲ್ಲ ಆಸ್ತಿಯನ್ನು ಹೀಗೆ ಹಾಳು ಮಾಡಬಾರದೆಂದು' ಶಿವರಾಯರಿಗೆ ಹೇಳಲು ಪ್ರಯತ್ನಪಟ್ಟೆ. ಆದರೆ ಯಂಕಪ್ಪ ಹಚ್ಚಿದ್ದ ಅಂಜನದಲ್ಲಿ ಶಿವರಾಯರಿಗೆ ನನ್ನ ಮಾತು ರುಚಿಸಲಿಲ್ಲ. ಕೊನೆಗೆ ಯಂಕಪ್ಪ ಆ ಕಂಪನಿಗೇ ಕೊಳ್ಳಿಯಿರಿಸಿದ. ಈ ಎಲ್ಲದಕ್ಕೂ ಕಳಸವಿಟ್ಟಂತೆ, ತನ್ನ ಮಗನನ್ನೇ ಶಿವರಾಯರಿಗೆ ದತ್ತಕ ಕೊಟ್ಟಿದ್ದನು. ಅದೂ ಕೂಡ ಗುಟ್ಟಾಗಿ, ಯಾರಿಗೂ ತಿಳಿಯದಂತೆ ರಾಧಾಬಾಯಿಯನ್ನು ಅವನು ಗದರಿಸಿ, ಹೆದರಿಸಿದನಷ್ಟೇ ಅಲ್ಲ, ಅವಳ ಸರ್ವಸ್ವವನ್ನು ಎತ್ತಿಹಾಕಿ, ಅವಳನ್ನು ಗತಿಗೇಡು

ಮಾನವತ್ತಿರುವನು. ಆದ್ದರಿಂದ ಕೋರ್ಟಿನವರು ಈ ದತ್ತಕವನ್ನು ರದ್ದು ಪಡಿಸಿ ತಂಗಿಯನ್ನು ಉಳಿಸಬೇಕು ಎಂದು ನನ್ನ ಪ್ರಾರ್ಥನೆ.

ರಾಧಾಬಾಯಿಯೂ ತನ್ನ ಸಾಕ್ಷಿಯನ್ನು ನುಡಿದಿದ್ದಳು. 'ಅವರ' ನಾಟಕದ ಗೀಳಿನಿಂದ ನಾನು ತುಂಬ ಬೇಸರಗೊಂಡಿದ್ದೆ. ಊರಿನ ಸುತ್ತ ಮುತ್ತಲೂ ಎಲ್ಲಿಯಾದರೂ ನಾಟಕ ಕಂಪನಿ ಬಂದಿದೆಯೆಂದರೆ ಸಾಕು, ಇಲ್ಲಿಯೂ ಡಕ್ಕೆಯಿ ಕಟ್ಟಿಸುವವರೇ. ಯಂಕಣ್ಣ, ನಾಟಕ ಎಂದರೆ ಇವರಿಗೆ ಮನೆ–ಮಠ ಇವ್ಯಾವುಗಳ ಪರಿವೆಯೇ ಇಲ್ಲ. ಹೀಗಾಗಿ ನಮ್ಮಿಬ್ಬರಲ್ಲಿ ಮನಸ್ತಾಪ ಸುಮಾರಾಗಿ ಹಿಂದೇ ಬೆಳೆದಿತ್ತು. ಅಂಥದರಲ್ಲಿ ಒಂದು ದಿನ ನನ್ನನ್ನು ಕರೆದರು.— 'ನನ್ನ ಭವಿಷ್ಯಕ್ಕಾಗಿ ಎಲ್ಲ ಅನುಕೂಲಗಳನ್ನು ಮಾಡಬೇಕೆಂದು ವಿಚಾರ ಮಾಡಿರುವೆ. ದೇವರು ನಮಗಂತೂ ಮಕ್ಕಳ ಭಾಗ್ಯವನ್ನು ಕರುಣಿಸಲಿಲ್ಲ. ಯಾರನ್ನಾದರೂ ದತ್ತಕ ತೆಗೆದುಕೊಳ್ಳೋಣ'— ಹೀಗೆ ಹೇಳುತ್ತ ನನ್ನ ಹಳೆಯ ಗುರುತುಗಳನ್ನು ತೆಗೆದುಕೊಂಡರು. ನನಗೂ ಆನಂದವಾಯಿತು. 'ನಮ್ಮ ತಮ್ಮಣ್ಣನ ಮಗನನ್ನೇ ತೆಗೆದುಕೊಂಡರಾಯಿತು' ಎಂದು ಹೇಳಿದೆ. 'ಯಾವುದಕ್ಕೂ ವಿಚಾರಿಸೋಣ' ಎಂದು ಮಾತ್ರ ಹೇಳಿದರು. ಮಾತು ಅಷ್ಟಕ್ಕೆ ನಿಂತಿತು. ಕೊನೆಗೆ ಒಂದು ದಿನ ಯಂಕಣ್ಣನ ಮಗನನ್ನು ಕರೆದುಕೊಂಡು ಮನೆಗೆ ಬಂದರು. 'ಬಂದ್ ನೋಡು ರಾಧಾ. ಯಾರನ್ನು ಕರೆದುಕೊಂಡು ಬಂದಿರುವೆ ನೋಡು ....ನಿನ್ನ ಮಗನನ್ನು........ದತ್ತಕ ಮಗನನ್ನು.' ನನಗೆ ದಿಗಿಲಾಯಿತು. ಅಂದು ಅವರ ಕೂಡ ಜಗಳವಾಡಿದೆ. 'ವಿಚಾರಿಸೋಣ ಎಂದು ಹೇಳಿದವರು ಈಗ ಹೀಗೆ ಮೋಸ ಮಾಡಿದಿರಿ' ಎಂದು ಒದರಾಡಿದೆ. 'ನಿನಗೆ ತಿಳಿಯುವದಿಲ್ಲ ರಾಧಾ, ನಿನ್ನ ಹಿತಕ್ಕಾಗಿಯೇ ಮಾಡಿರುವೆ. ನೀನು ಆದಷ್ಟು ಮಾತೃತ್ವದ ಜವಾಬ್ದಾರಿ ನೋಡು.'

ನಮ್ಮ ನಡುವಿನ ಕಗ್ಗಂಟು ಬಿಗಿಯೇ ಉಳಿಯಿತು. ಇದೆಲ್ಲವೂ ಆ ಯಂಕಣ್ಣನದೇ ಕಾರಸ್ಥಾನ. ಯಾವ ಜನ್ಮದ ಋಣ ತೀರಿಸುವುದಕ್ಕೋ ಏನೋ, ಈಗ ಆತನು ನನಗೆ ಹೊರೆಯಾಗಿ ಗಂಟುಬಿದ್ದಿರುವನು. ಆದ್ದರಿಂದ ದತ್ತಕ ವನ್ನು ರದ್ದುಪಡಿಸಿ, ನನ್ನ ಆಸ್ತಿಯನ್ನು ನನಗೆ ಉಳಿಸಿಕೊಡಬೇಕು ಎಂದು ಕೋರ್ಟಿನಲ್ಲಿ ನನ್ನ ಪ್ರಾರ್ಥನೆ.

ಕುಲಕರ್ಣಿ ಯಂಕಪ್ಪನ ಸಾಕ್ಷಿಯೂ ಆಗಿತ್ತು. ಅದೇ ಕೋರ್ಟಿನಲ್ಲಿ–ನಾನೂ ಶಿವರಾಯರು ಭೆಟ್ಟಿಯಾದದ್ದು ಒಂದು ಆಕಸ್ಮಿಕ. ಗೆಳೆತನಕ್ಕಾಗಿ ನಾನು ಅವರಿಗೆ ಏನೂ ಮಾಡಲೂ ಸಿದ್ಧ. ಶಿವರಾಯ ಮತ್ತು ಅವರ ಹೆಂಡತಿಯಲ್ಲಿ ಬಹಳ ದಿನದಿಂದ ವಿರಸವಿತ್ತು. ಲಗ್ನವಾಗಿ ವರ್ಷಗಳು ಕಳೆದರೂ ಮಕ್ಕಳ ಭಾಗ್ಯವನ್ನು ನೋಡುವದಾಗಲಿಲ್ಲ. ಅದೇ ಅವರಿಗೆ ದೊಡ್ಡ ಚಿಂತೆ. ಇನ್ನು ಶ್ಯಾಮರಾಯನಿಗೂ, ಅವರಿಗೂ ಮೊದಲಿನಿಂದಲೂ ಅಷ್ಟಕ್ಕಷ್ಟೇ. ಅವನು ನಾಟಕ–ಕಂಪನಿಗೆ ಕೊಳ್ಳಿ ಇಡಿಸಿದಾಗಲಂತೂ ಅದು ಪೂರ್ಣ ಮುರಿದೇ ಹೋಯಿತು. ಬಂಜೆ ರಾಧಾಬಾಯಿಯ ಹೆಸರಿನಲ್ಲಿ ಶ್ಯಾಮರಾಯನ ಕಾರಭಾರ ಅವರಿಗೆ ಎಳ್ಳಷ್ಟೂ ಬೇಡವಾಗಿತ್ತು. ಅಂತೆಯೇ ದತ್ತಕ ವಿಷಯದಲ್ಲಿ ಅವರು ಶ್ಯಾಮರಾಯನಿಗೆ ಹೇಳಲೂ ಇಲ್ಲ. ಇದಲ್ಲದೇ, ಶ್ಯಾಮರಾಯ ತನ್ನ ಮಗನನ್ನೇ ದತ್ತಕ ಕೊಡಬೇಕೆಂದು ತಜವಿಜ ನಡೆಯಿಸಿದ್ದ. ಶಿವರಾಯರು ನನ್ನ ಹಾಗೂ ತುಳಸಾಳ ಮುಂದೆ ಮಾತ್ರ ಹೇಳಿದ್ದರು– "ರಾಧಾಬಾಯಿಗೆ ನಾನು ತಿಳಿಸಿ ಹೇಳಿರುವೆ. ಅವಳು ಸಮ್ಮತಿಸಿರುವಳು. ಅಂತೆಯೇ ಸಹಿ ನೀಡಿರುವಳು."–ತುಳಸಾ ಮುಂದೆ ವರ್ಷದಲ್ಲಿಯೇ ತೀರಿಹೋದದ್ದರಿಂದ ನಾನೊಬ್ಬನೇ ಇದಕ್ಕೆ ಸಾಕ್ಷಿ. ರಾಧಾಬಾಯಿ ಈಗ ಕೇವಲ ದುರ್ಬೋಧನೆಯಿಂದ, ಎಲ್ಲವನ್ನೂ ನಿರಾಕರಿಸುತ್ತಿರುವಳು. ಶಿವರಾಯರು ಸಾಯುವ ಮುಂಚೆ 'ದೇಸಾಯಿ ಮನೆತನ ಮುಂದುವರೆಸುವ ಹೊಣೆ ನಿನ್ನದೇ. ಮಗ ಮತ್ತು ರಾಧಾಬಾಯಿಯನ್ನು ನೀನೇ ಸಂಭಾಳಿಸಬೇಕು' ಎಂದು ನನ್ನಿಂದ ವಚನ ತೆಗೆದುಕೊಂಡಿರುವರು. ಇದರ ಹೊರತಾಗಿ ದೇಸಾಯಿ ಮನೆತನದ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶ ನನಗಿಲ್ಲ. ಅದು ಶ್ಯಾಮರಾಯನದು. ಈ ದತ್ತಕ ಶಿವರಾಯ–ರಾಧಾಬಾಯಿ ಇವರ ಆತ್ಮಸಂತೋಷದಿಂದ ಅಕ್ಕಲ ಹುಷಾರಿಯಿಂದ ಆಗಿದೆ. ಆದ್ದರಿಂದ ದತ್ತಕವನ್ನು ರದ್ದುಗೊಳಿಸದೇ, ಕಾಯ್ದೆ ಪ್ರಕಾರ ಬಜಾವಣೆ ಮಾಡಬೇಕೆಂದು ನನ್ನ ಪ್ರಾರ್ಥನೆ.

೩

ಜೇಡರಹುಳವು ತನ್ನ ಬಲೆಯನ್ನು ನೇಯುತ್ತಿತ್ತು. ಬಲು ನಾಜೂಕಾಗಿ.... ಬಲು ಸುಂದರವಾಗಿ....ತನ್ನ ಸುತ್ತಲೂ........ ತಾನೇ ಅದರ ಕೇಂದ್ರಬಿಂದು....

ಅದರ ರೇಖಾವಿನ್ಯಾಸಗಳು, ಗೋಳಾಕಾರವಾಗಿ ಹರಡಿನಿಂತ ನಿಲುವು, ಎಂಥವನನ್ನೂ ಆಕರ್ಷಿಸುತ್ತಿತ್ತು. ಮಂಚದಲ್ಲಿ ಮಲಗಿದಲ್ಲಿಂದಲೇ 'ಅವನು' ಅದನ್ನೇ ನೋಡುತ್ತಿದ್ದ. ದೊಡ್ಡ ದೊಡ್ಡ ಕಂಬಗಳ ಭಾರದ ಮೇಲೆ ನಿಂತ ಕೋಣೆಯ ಜಗಲಿ. ಮೂಲೆಗಳಲ್ಲಿ ಕಪ್ಪು ತುಂಬಿದೆ. ಪ್ರಕಾಶ ಒಳ ಬರುವುದಕ್ಕೆಂದು ಇದ್ದ ಒಂದೇ ಒಂದು ಬಾಗಿಲು. ಕಪ್ಪು ಕಪ್ಪು ಬಣ್ಣದ ಮಂಚ, ಗೋಡೆಯ ಮೇಲಿದ್ದ ಅಜ್ಜ ಅಪ್ಪನ ಫೋಟೋಗಳು........

'ಅವನು' ಆಗ ಆ ಊರಲ್ಲಿ ಇರಲಿಲ್ಲ. ದೊಡ್ಡಪ್ಪ ಅವನನ್ನು ಮುದ್ದಾಂ ಶಿವರಾಯರ ಊರಿಗೆ ಕಳುಹಿಸಿದ್ದ. ದಿನಗಳು ಕಳೆಯುತ್ತಿದ್ದವು. ಸೂರ್ಯ ಹುಟ್ಟಿ ಸಾಯುತ್ತಿದ್ದ....ಚಂದ್ರ ಸತ್ತು ಹುಟ್ಟುತ್ತಿದ್ದ.... ಅವನ ಬೆನ್ನು ಹತ್ತಿದ್ದ ರೋಹಿಣಿಯೂ ಕೂಡ ಸಾಕಾಗಿ ಬೇಸತ್ತು ಅವನಿಂದ ದೂರ ಸರಿಯುತ್ತಿದ್ದಳು. 'ಅವನ' ದೃಷ್ಟಿ ಗೋಡೆಯ ಮೇಲಿನ ಹಲ್ಲಿಯ ಕಡೆಗೇ ಇತ್ತು. ಅದು ಜಪ್ಪಿಸಿ ಕುಳಿತಿತ್ತು. ಧ್ಯೇಯವೆಲ್ಲವೂ ಕಣ್ಣುಗಳಲ್ಲಿ ಕೇಂದ್ರೀಕೃತವಾಗಿತ್ತು. ಎದುರಿನಲ್ಲಿಯೇ ಕೀಟವೊಂದು ಬಹಳ ಮೋಜಿನಿಂದ ಹಾರಾಡುತ್ತಿತ್ತು. 'ನಾನು ಹಕ್ಕಿಯಂತೆ ಹಾರುತ್ತಿದ್ದರೆ!' ಎಂಬ ಶಾಲೆಯಲ್ಲಿಯ ಪಾಠದ ನೆನಪು ಅವನಿಗೆ. ಹಲ್ಲಿಯ ಗಮನವೆಲ್ಲ ತನ್ನ ಆಹುತಿಯ ಕಡೆಗೆ. ಹುಳುವೋ ಕುಣಿಯುತ್ತದೆ. ಅಳವಿನಲ್ಲಿ ಬಂದ ಕೂಡಲೇ ಹಲ್ಲಿ ತನ್ನ ಬಾಲವನ್ನು ಮೇಲಕ್ಕೆತ್ತಿತು. ಇಡೀ ದೇಹವೇ ಸೆಟೆದು ನಿಂತಿತು..... ಈಗ ಹುಳ ಅದರ ನೇರಕ್ಕೆ ಬರುತ್ತಲಿದೆ. ಅವನಿಗೆ ಹುಳದ ಬಗ್ಗೆ ಕನಿಕರ. ಮುಂದಾಗುವುದನ್ನು ನೋಡಲಾರ. ಹೇಗಾದರೂ ಮಾಡಿ ಆ ಹಲ್ಲಿಯನ್ನು ಓಡಿಸಬೇಕು, ತನ್ನ ಕೈಯಿಂದ ಸಪ್ಪಳ ಮಾಡಿ ಅದರ ಗಮನವನ್ನು ಬೇರೆ ಹೊರಳಿಸಬೇಕು.......ಆದರೆ ಇದೇನಿದು ? ತನ್ನ ಕೈಯೇ ಏಳಲೊಲ್ಲದು ! ಬದಿಗೆ ಹೊರಳಬೇಕೆಂದರೆ ಎಲ್ಲವೂ ನಿಶ್ಚೇಷ್ಟಿತ. ಅಸಹಾಯನಾದ ಅವನು ಎದುರಿನ ಹಲ್ಲಿಯತ್ತ ನೋಡಿದ. ಹಲ್ಲಿಯೂ ಇವನತ್ತ ನೋಡಿತು.. ಬಾಯಿಯಲ್ಲಿದ್ದ ಹುಳವನ್ನು ಬಿಟ್ಟು ಇವನೆಡೆಗೆ ಹೊರಳಿತು. ಇವನಿಗೆ 'ಹುಶ್' ಎಂದು ಹೆದರಿಸಲೂ ಆಗಲೊಲ್ಲದು. ನೋಡುನೋಡುವಷ್ಟರಲ್ಲಿ ಅದು ಬೆಳೆಯತೊಡಗಿತು.... ಇವನಿಗೆ ಗಾಬರಿ.... ನೋಡುನೋಡುವುದರಲ್ಲಿಯೇ ಅಲ್ಲಿ ಒಂದು ಭಯಾನಕ.... ಇದೇ ಕೊನೆಯ ದಿನ! ಇದ್ದ ಬಿದ್ದ ಶಕ್ತಿಯನ್ನೆಲ್ಲ ಕೇಂದ್ರೀಕರಿಸಿ ಅವನು ಓಡುವ ಪ್ರಯತ್ನ ಮಾಡತೊಡಗಿದ. ಆದರೆ ಅದು

ಕೂಡ ಬೆನ್ನು ಹತ್ತಬೇಕೆ? ಮನೆಯಲ್ಲಿ ಅಂಗಳದಲ್ಲಿ ತೋಟದಲ್ಲಿ ಮುಂದೆ ಮುಂದೆ ಹಾಗೆಯೇ ರಸ್ತೆಯಲ್ಲಿ.... ಎಲ್ಲೆಂದರಲ್ಲಿ. ಅದು ಅವನ ಬೆನ್ನು ಬಿಡಲೊಲ್ಲದು. ಅವನು ಓಡಿಯೇ ಓಡಿದ. ದೇಕು ಹತ್ತಿತು. ವಿಪರೀತ ಆಯಾಸ. ಮೂಗು ಉರಿಯುತ್ತಿದೆ....ಕಣ್ಣುಗಳಲ್ಲಿ ಗುಂಜು ಗುಂಜು....ಬಾಯಿ ಆರತೊಡಗಿತು. ಮುಖದ ಮೇಲೆಲ್ಲ ಬೆವರು....ಒರೆಯಿಸಿಕೊಂಡರೆ ಬೆವರಲ್ಲಿ ರಕ್ತದ ಹನಿಗಳು! ಅವನು ನೇರವಾಗಿ ಹೊಲದಲ್ಲಿಯ ಬಿದಿರು-ಬೊಂಬೆಗೆ ಹಾಯ್ದ. ದೊಪ್ಪನೆ ಬಿದ್ದ. ಎಚ್ಚರ ತಪ್ಪಿತು. ಎಲ್ಲವೂ ಸ್ತಬ್ಧ....ನಿಶ್ಚಲ.... ನೀರವ.... ನಿಮಿಷಗಳು ಸೆಕೆಂದುಗಳಾದಂತೆ.... ಸೆಕೆಂದುಗಳು ಸತ್ತಂತೆ....ಟಿಕ್ ಟಿಕ್ ಗಡಿಯಾರ ಸತ್ತು ಹೋದಂತೆ!

ಅವನು ಕಣ್ಣು ತೆರೆದಾಗ ಗೋಡೆಯ ಮೇಲಿನ ಗಡಿಯಾರದ ಟಿಕ್ ಟಿಕ್ ಇಡೀ ಕೋಣೆಯಲ್ಲಿ ಧ್ವನಿಸುತ್ತಿತ್ತು. ಅದರ ಕೆಳಕ್ಕೆ ನೇರವಾಗಿ ಕಪ್ಪು ಬಟ್ಟೆ ಧರಿಸಿದ ನ್ಯಾಯಾಧೀಶ. ನೀರಿಗೆ ಬಿದ್ದ ಹಣೆ. ನಿಮಿಷ ನಿಮಿಷಕ್ಕೂ ಕೆಳಗೆ ಬೀಳುವ ದಪ್ಪ ಕನ್ನಡಕವನ್ನು ಮೂಗಿನ ಮೇಲೆ ಏರಿಸುವ ವ್ಯಕ್ತಿ. ಮೇಲಿಂದ ಮೇಲೆ ಉಸಿರುಗರೆಯುತ್ತಾನೆ. ಕಣ್ಣುಗಳು ಮೀನುಗಳ ಹಾಗೆ ಪುಸ್ತಕದಲ್ಲಿ ಚಲಿಸುತ್ತಿವೆ. ಅವನ ಮೇಲೆ ಭರದಿಂದ ತಿರುಗುವ ಫ್ಯಾನು. ಲ್ಯಾಟಿನ ಬೆಳಕಿನಲ್ಲಿ ಬಿದ್ದ ಅದರ ಛಾಯೆ ನ್ಯಾಯಾಧೀಶನನ್ನೂ ದಾಟಿ ಇಡೀ ಕೋಣೆಯ ಸುತ್ತಲೂ ತಿರುಗುತ್ತಿದೆ. 'ಮಂಗ್ಯಾ ಮಂಗ್ಯಾ' ಗೂಪ್ ಗೂಪ್ ಕೋಣೆಯೆಲ್ಲಾ ಗಡಚಿಕ್ಕಿದಂತಾಯಿತು. ಆ ವ್ಯಕ್ತಿ ತಲೆಯೆತ್ತಿ ನೋಡುತ್ತಾನೆ. ಹುಶ್ ಹುಶ್ ಎಂದು ಓಡಿಸಲು ಪ್ರಯತ್ನಿಸುತ್ತಾನೆ. ಟೇಬಲ್ಲಿನಿಂದ ಕುರ್ಚಿಗೆ ಕುರ್ಚಿಯಿಂದ ಟೇಬಲ್ಲಿಗೆ ಅದು ಜಿಗಿದಾಡುತ್ತದೆ....ಬದಿಯಲ್ಲಿದ್ದ ಪುಸ್ತಕಗಳಿಂದ ಅದನ್ನು ಹೆದರಿಸಲು ಪ್ರಯತ್ನ. ಅದು ಮತ್ತೆ ಮತ್ತೆ ಅಣಕಿಸುತ್ತದೆ. ನ್ಯಾಯಾಧೀಶನಿಗೆ ದಣಿವಾಯಿತು. ಬೆವರು ಒರೆಸಿಕೊಂಡ. ಚಾಳೀಸು ತೆಗೆದು ಮೇಜಿನ ಮೇಲಿಟ್ಟ. ಆ ಮಂಗ ಕೂಡಲೇ ಅದನ್ನು ತೆಗೆದುಕೊಂಡು ಓಡಲು ಯತ್ನಿಸಿತು. ಕಿಡಕಿಯಿಂದ ಕಿಡಕಿಗೆ.... ಬಾಗಿಲಿನಿಂದ ಬಾಗಿಲಿಗೆ .... ಎಲ್ಲಿ ಬೇಕೆಂದರಲ್ಲಿ.... ಆದರೆ ಎಲ್ಲವೂ ಭದ್ರವಾಗಿ ಮುಚ್ಚಿವೆ. ಅದು ಕುಣಿಯಿತು. ಕುಪ್ಪಳಿಸಿತು. ಚೀರಿತು.... ಸಿಟ್ಟಿನಿಂದ ಚಾಳೀಸನ್ನು ಎತ್ತಿ ನೆಲಕ್ಕೆ ಒಗೆಯಿತು. ಮೇಜಿನ ಮೇಲಿನ ಪುಸ್ತಕಗಳನ್ನು ಸುತ್ತ ಕಡೆಗೆ ಬೀಸಾಡಿತು.

'ಫಟ್' ಎಂಬ ಜೋರು ಶಬ್ದ.... ಗಡಿಯಾರದಲ್ಲಿ ಒಂದು ಗಂಟೆ. ಅವನು ಕಣ್ಣು ಬಿಟ್ಟ. ಆಗಡಿಯಾರದತ್ತ ನೋಡಿದ ಯಾವ ಹಳೆಯ ಕಾಲದ್ದೋ ಏನೋ! ಅವನ ಸಮಾಧಿಯನ್ನು ಭಂಗಗೊಳಿಸಿದ್ದಕ್ಕೆ ಅವನಿಗೆ ಅದರ ಮೇಲೆ ವಿಪರೀತ ಕೋಪ. ತಲೆ ಭಾರವಾದಂತೆ ಅನಿಸಿಕೆ, ಕಣ್ಣುಗಳಲ್ಲಿ ವಿಪರೀತ ನೋವು. ಹಾಗೆಯೇ ಮಂಚದ ಮೇಲೆ ಮಗ್ಗಲು ಬದಲಿಸಿದ. ಕಿರ್ ಕಿರ್ ಎಂದು ಸಪ್ಪಳ ಮಾಡಿತು ಅದು, 'ಹಳೆಯ ಕಾಲದ ಮಂಚ ಎಂದೇ ಎಷ್ಟು ದಿನ ತಾಳಿದೆ ನೋಡು' ಎಂಬ ಶಿವರಾಯರ ಮಾತು. ಅದೇ ಮಂಚ. ಶಿವರಾಯರು ಏದುಸಿರು ಬಿಡುತ್ತಿದ್ದಾರೆ. ಯಂಕಪ್ಪ ಮತ್ತು 'ಅವನು' ಅವರ ಬದಿಯಲ್ಲಿ. 'ಯಂಕಪ್ಪ, ಈ ಹುಡುಗನ್ನ ನಿನ್ನ ಉಡಿಯೊಳಗ ಹಾಕೇನಿ. ದೇಸಾಯಿ ಮನೆತನ ಮುಂದುವರೆಯುವದು ನಿನ್ನ ಕೂಡೇದ.' ಯಂಕಪ್ಪ ಕೈಮೇಲೆ ಕೈ ಹಾಕಿ ವಚನವಿತ್ತ. ತುಸು ಜೊಂಪು....ಮಂಪರು ಕವಿದಂತೆ.... ಡಾಕ್ಟರರೆಲ್ಲ 'ಅವನ'ನ್ನು ಸುತ್ತುವರೆಯುತ್ತಾರೆ.... ಅವನನ್ನು ಅಳೆಯಲು ಪ್ರಯತ್ನಿಸುತ್ತಾರೆ.... ಅವನ ಶ್ವಾಸ–ಉಚ್ಛ್ವಾಸಗಳಿಗೆ ಮೀಟರು ಹಚ್ಚುತ್ತಾರೆ ರಕ್ತನಾಳಗಳಲ್ಲಿ ಟ್ಯೂಬ ಹಾಕಿ ರಕ್ತವನ್ನು ಪರೀಕ್ಷಿಸುತ್ತಾರೆ.... ಅಯ್ಯೊಯ್ಯೋ, ಅವನ ರಕ್ತದಿಂದ ಅವರೆಲ್ಲ ಓಕುಳಿಯಾಡುತ್ತಾರೆ....

'ಅವನೇ' ಗೆದ್ದ ಕೊನೆಗೂ. 'ಅವನ' ವಕೀಲ ಬಹಳ ಸಾಧಿಸಿದ.... ನ್ಯಾಯಾಧೀಶ 'ಅವನ' ಮೇಲೆ ಕರುಣೆದೋರಿದ. 'ಅವನು' ದೇಸಾಯಿ ಮನೆತನಕ್ಕೇ ಮೀಸಲು ಎಂದು ತೀರ್ಪು ಬರೆದ. ಕಾಗದ ಪತ್ರಗಳೆಲ್ಲವೂ ಅವನ ಇರುವಿಕೆಯನ್ನು ಸಮರ್ಥಿಸುತ್ತವೆ ಎಂದು ಸಾರಿದ. ಅವನು ಇದ್ದಾನೆ, ಇನ್ನೂ ಇದ್ದಾನೆ.... ಕಾಯ್ದೆಶೀರ ಇದ್ದಾನೆ.... ಎಲ್ಲದರ ಮಡುವಿನ ಕೇಂದ್ರ ಬಿಂದುವಾಗಿ ಇದ್ದಾನೆ. ಎಲ್ಲರನ್ನೂ ತಿರುಗಿಸುತ್ತಾನೆ .... ಏನೇ ಇರಲಿ, ಅವರೆಲ್ಲರೂ ತಿರುಗುತ್ತಿದ್ದಾರೆ ಎಂದ ಮೇಲೆ 'ಅವನು' ಇರಲೇಬೇಕು. ಇದ್ದೇ ಇರುವ. ಅವನ ಅಸ್ತಿತ್ವವನ್ನು ಇನ್ನು ಯಾರೂ ಅಲ್ಲಗಳೆಯಲಾರರು.

'ಏಯ್, ನಾನು ಯಾರನ್ನು ಕರೆದುಕೊಂಡು ಬಂದಿರುವೆ ನೋಡು.' ಶಿವರಾಯರು ಕೂಗಿ ಹೇಳಿದರು. ಒಳಗಿನಿಂದ ರಾಧಾಬಾಯಿ ಬಂದು ನಡುವಿನ ಕಂಬಕ್ಕೆ ಆತುಗೊಂಡು ನಿಂತು 'ಏನು, ? ಎಲ್ಲಿದೆ ?' ಎಂದು ಕೇಳಿದಳು. 'ನಿನಗೆ ಇನ್ನೂ ಕಾಣಿಸಲಿಲ್ಲವೇ ? ಇವನೇ! ಇವನನ್ನು ನೋಡು.' ಎಂದು

ನನ್ನನ್ನು ತೋರಿಸಿದರು. ಅವಳ ಕಣ್ಣುಗೊಂಬೆಗಳು ನನ್ನ ಮೈಮೇಲೆಲ್ಲ ಹರಿದಾಡಿದವು. ನಾನೂ ಬೆರಗಿನಿಂದ ಅವಳನ್ನು ನೋಡಿದೆ. 'ಯಾರಿವನು ?' ಅವಳ ಪ್ರಶ್ನೆ. 'ಇವನು ನಮ್ಮ ಮಗ. ಅಂದು ಹೇಳಿದ್ದಿಲ್ಲವೇ ? ನೀನು ಸಹಿ ಮಾಡಿಕೊಡಲಿಲ್ಲವೇ ? ಎಲ್ಲವನ್ನೂ ವಿಚಾರ ಮಾಡಿಯೇ ಯಂಕಪ್ಪನ ಮಗನನ್ನು ದತ್ತಕ ತೆಗೆದುಕೊಂಡಿರುವೆ. ಮೊನ್ನೆಯೇ ಕಾಗದ ಪತ್ರಗಳೆಲ್ಲವೂ ರಜಿಸ್ಟರ ಆದವು.' ಅವಳು ಅವಡುಗಚ್ಚಿದಳು....ಕಣ್ಣು ಕೆಂಪಾದವು....ಕೈಯನ್ನು ತಿವಿಯುತ್ತ ಈರ್ಷೆಯಿಂದ 'ಯಾವನೋ ಬಿಕನಾಸಿಯನ್ನು ಮನೆಗೆ ತಂದು ನನ್ನನ್ನು ಅಪಮಾನಿಸುವಿರಾ ? ನನಗೆ ಮೊದಲೇ ಏಕೆ ಹೇಳಲಿಲ್ಲ ? ನನಗೆ ಮೋಸ ಮಾಡಿದಿರಿ....' ಅಕ್ಕಸದಿಂದ ಅವಳು....ನನ್ನ ಅವ್ವ....ಅಂದರೆ ನನ್ನ ತಂದೆಯ ಹೆಂಡತಿ ಒಳಗೆ ಓಡಿದಳು.

ಶಿವರಾಯರ ಮೋರೆ ಕುಂದಿತು. ಕ್ಷಣಹೊತ್ತು ಏನೂ ಮಾತಾಡಲಿಲ್ಲ.... ಆಮೇಲೆ 'ನನ್ನನ್ನು' ಎತ್ತಿಕೊಂಡು ಮೈದಡವುತ್ತ 'ನಡಿ, ಹೋಗೋಣ' ಎಂದು ತಮ್ಮ ಕೋಣೆಗೆ ಕರೆದುಕೊಂಡು ಹೋದರು. ಹಣ್ಣುಗಳು....ಹಂಪಲಗಳು.... ಹೊಸ ಹೊಸ ಅರಿವೆಗಳು.... ಅಲ್ಲಿ ನನ್ನ ಕಣ್ಣು ಕುಕ್ಕುತ್ತಿದ್ದವು....ಶಿವರಾಯರ ಉಕ್ಕಿನ ಹಿಡಿತದಿಂದ ಬಿಡಿಸಿಕೊಳ್ಳಬೇಕೆಂದು ಪ್ರಯತ್ನಿಸಿದೆ....ಸಾಧಿಸಲಿಲ್ಲ.... ಕೊನೆಗೂ ಸಾಧಿಸಲೇ ಇಲ್ಲ....ಇನ್ನು ಎಂದೆಂದಿಗೂ ಬಂದಿಯೇ.

'ಅವನಿಗೆ' ಬೀಜ ತಿಕ್ಕಿಸಿಕೊಂಡ ಹೋರಿಯ ನೆನಪು. ಮೈಯಲ್ಲಿ ಶಕ್ತಿಯಿರುವ ವರೆಗೂ ನೊಗವನ್ನು ಹೊತ್ತು ಎಳೆಯುವದೊಂದೇ ಕೆಲಸ....ಅದೂ ಆಗದೇ ಮುಪ್ಪಾದಾಗ ಉಳಿಯುವ ಒಂದೇ ದಾರಿ.... ಕಟುಕರ ಮನೆ.

* * *

ಮರುದಿನ ಅವನು ಎದ್ದಾಗ ಹೊಸ ಸುದ್ದಿ ಕಾದು ನಿಂತಿತ್ತು.... ಗುರುಸಿದ್ಧ ಯಂಕಪ್ಪನ ಊರಿನಿಂದ ಓಡುತ್ತ ಬಂದಿದ್ದ....ಕೋರ್ಟಿನಲ್ಲಿ 'ಅವನು' ದೇಸಾಯಿ ಆಗುವ ಹೊತ್ತಿಗೆ 'ಅವನ' ಪ್ರಕರಣ ರಕ್ತತರ್ಪಣವನ್ನು ಬೇಡಿತ್ತು ! ಅವನು ಆಗ ಊರಲ್ಲಿ ಇರಲಿಲ್ಲ.... ಅದು ಒಳ್ಳೆಯದೇ ಆಗಿತ್ತು....ಇಲ್ಲವಾದರೆ ಶ್ಯಾಮರಾಯನ ಕುದುಗೋಲಿಗೆ ಅವನೇನು ? ಯಂಕಪ್ಪನೇನು ? 'ಅವನು' ಅಲ್ಲಿರಲಿಲ್ಲವೆಂದೇ ಯಂಕಪ್ಪನನ್ನು ಮಾತ್ರ ಆಹುತಿ ತೆಗೆದುಕೊಂಡಿತ್ತು. ಯಂಕಪ್ಪನ ಕೊಲೆಯಾದರೂ ದೇಸಾಯಿ ಮನೆತನ ಮುಂದುವರೆದಿತ್ತು. ಶ್ಯಾಂ

ತೆತ್ತಾದರೂ ಯಂಕಪ್ಪ ತನ್ನ ಮಾನ ಪ್ರತೈಸಿದ.

ಅವನು ಕೂಡಲೇ ಆ ಊರಿಗೆ ಹೋದ. ಯೋಗಿ ಗುರುಸಿದ್ದ. "ಅಲ್ಲಿ ಆ ತ್ಯಾಮರಾಯನ ಕುತಂತ್ರ. ಆಹಾ ಏನು ಮಾನವನ ಹೇಸಿಗೆ!"

'ಯಾಕೆ? ಇಷ್ಟೆಲ್ಲ ಯಾಕೆ?' ಜೇಡನ ಬಲೆಯಲ್ಲಿ ಸಿಕ್ಕ ನೊಣದ ಹಾಗೆ ಅವನು ಪಿಳಿಪಿಳಿ ಒದ್ದಾಡುತ್ತಿದ್ದ. 'ನನಗೆ ಅಷ್ಟು ಬೇಡ.... ನನ್ನನ್ನು ಬಿಟ್ಟು ಬಿಡಿರಿ.... ರಾಧಾಬಾಯಿ, ನೀನು ನನ್ನ ಅಪ್ಪ, ತಾಯಿ, ಕೃಷ್ಣನ ಜಾಗದಲ್ಲಿ ಪ್ರತ್ಯಕ್ಷ ಕಂಡ ಯೋಗಿಯಾದ. ನನ್ನಷ್ಟಕ್ಕೆ ಸ್ವರ್ಗಗಳನ್ನು ನರಕಗಳನ್ನು ಕಾಣ ಬೇಕು. ನೀನು ಬೇಡವೆಂದರೂ ಬಿಡೆ....ನನಗೆ ಬೇಕಾದರೂ ಬಿಡೆ....ಕಾಗದ ಪತ್ರಗಳಲ್ಲಿ ನಾವು ನಾವೇ. ನೀನು ಕಾಯ್ದುಕೊಂಡ ನನ್ನ ತಾಯಿ. ಅಪ್ಪಾ ನನ್ನನ್ನು ಮುಕ್ತಗೊಳಿಸು....ನಿನ್ನ ಪ್ರೀತಿಯ ಔದಾರ್ಯದಲ್ಲಿ ಕೊಚ್ಚಿಕೊಂಡು ಹೋಗುತ್ತಲಿರುವೆ....ನೀರು ಕುಡಿದು ಬಾಯಿ ಬಾಯಿ ಬಿಡುತ್ತಿರುವೆ....ಚಿತ್ರ ಸಿರಿನಲ್ಲಿ ಈಜುವುದು....ಅದರ ನೆರಳಲ್ಲ? ಮುಳುಗಲ್ಲ? ಓ, ನ್ಯಾಯಾಧೀಶರೇ, ನಾನು ನಿಮಗೆ ತುಂಬ ಅಭಾರಿಯಾಗಿರುವೆ, ಜಗತ್ತಿನಲ್ಲಿಯೇ ಮಹೋನ್ನತ ಕಾರ್ಯವನ್ನು ಮಾಡಿರುವಿರಿ, ನನ್ನಂಥ ತಬ್ಬಲಿಗೆ ತಾಯಿಯನ್ನು ದೊರಕಿಸಿಕೊಟ್ಟಿರುವಿರಿ. ನೀವು ನೇರವಾಗಿ ಸ್ವರ್ಗಕ್ಕೆ ಹೋಗುವಿರಿ.... ಆದರೆ ಯಂಕಪ್ಪ ನಿಮ್ಮ ಬೆನ್ನು ಬಿಡಲಾರ........'

"ಈ ತರಹದ ಸಂಶಯ ಯಂಕಪ್ಪನಿಗೆ ಮೊದಲಿನಿಂದಲೂ ಇತ್ತು. ಅಂತೆಯೇ ನನ್ನನ್ನು ಈ ಊರಿಗೆ ಕಳುಹಿದ್ದ.... ನನಗೂ ಹೇಳಿದ್ದ.... 'ನನ್ನನ್ನು ಯಾವಾಗಲೂ ಕಾಯುತ್ತಿರು' ಎಂದು."

'ಏ ಗುರುಸಿದ್ದಾ, ಸುಮ್ಮನೆ ಕೂಡುತ್ತೀಯೋ ಇಲ್ಲವೋ?' ಅವನು ಗದರಿದ. ಅವನ ಮನಸ್ಸು ಉಲ್ಲೋಲ ಕಲ್ಲೋಲವಾಗಿತ್ತು. ಅವನು ಪಿಳಿಪಿಳಿ ಕಣ್ಣುಬಿಟ್ಟು.... ಏನೆ, ನಾನು ನೋಡುತ್ತಿರುವದೇನು? ನೀನು? ನನ್ನ ಅಜ್ಜ ಯಲ್ಲವೇ? ಆದರೆ ಇಲ್ಲೇಕೆ ಕುಳಿತಿರುವೆ? ತಾಯಿಯ ಮುಂದೆ ಠಿಂಗಣ ಮಾಡಲು ಬಿನ್ನಾಗಿದೆ ನಿನಗೆ? ಅದೇ ಕೋಲು ಉರವುರಿ, ಖಾರ....ಆದರೆ ಅಜ್ಜ, ನನಗೆ ಕೊಡು ... ಆ ಮಾಸ್ತರನ ಕಣ್ಣು ತಪ್ಪಿಸಿ ಬಂದಿರುವೆ.... ಇಲ್ಲವಾದರೆ ಅವನ ಬೆತ್ತದಾಯಿಯ ರುಚಿಕಿನ ಮಳೆ.... ಬೇಗ ಕೊಡು ಅಜ್ಜ! ಇಲ್ಲಿಯೇ ನನ್ನ ಅಂಗಿಯಲ್ಲಿ ಕಟ್ಟು. ಬೇಗ ತಿನ್ನುವೆ.... ಆಹಾ, ಖಾರವುರಿ. ಏನು ಅದರ ಸವಿ!

ಆದರೆ ಅಯ್ಯೋ, ಅವನು ಬಂದೇ ಬಿಟ್ಟ! ಅವನೇ,.... ಅವನೇ.... ಎಲ್ಲಿ ಹೋದರೂ ಬಿಡಲೊಲ್ಲ....ನನ್ನ ಬೆನ್ನಿಗೇ ಅಂಟಿಕೊಂಡಿವೆ ಅವನ ಕಣ್ಣುಗಳು.... ರೆಪ್ಪೆಯಿಲ್ಲದ ಕಣ್ಣುಗಳು.... ತಂಬಾಕವನ್ನು ಉಗ್ಗಬೇಕು.... ಅವು ಉರಿಯ ಬೇಕು ಆ ಕಣ್ಣುಗಳಿಂದ ರಕ್ತ ಸೋರಬೇಕು....

ಅವನು ಆ ಊರಿಗೆ ಬಂದಾಗ ಸೂರ್ಯ ನೆತ್ತಿಯ ಮೇಲೇರಿ ಸುಡುತ್ತಿದ್ದ. ನಿಗಿ ನಿಗಿ ಕೆಂಡಗಳನ್ನು ಉಗುಳುತ್ತಿದ್ದ. ಮನೆಯಲ್ಲಿ ಸ್ಮಶಾನಮೌನ ಎದುರಿಗೇ ತೂಗುಹಾಕಿದ್ದ ಯಂಕಪ್ಪನ ಫೋಟೊ ಅವನನ್ನು ಅಣಕಿಸಿತು....'ಗೂಬೆ, ಗೂಬೆ'. ಅವನು ನೇರವಾಗಿ ಅಜ್ಜಿಯ ಬಳಿಗೆ ಹೋದ. ಈ ಸಲ ಮಾತ್ರ ಅಜ್ಜಿ ಅವನನ್ನು ಪೂಸಲಿಲ್ಲ, ಅವನನ್ನು ತಬ್ಬಿಕೊಂಡು ಅಳಲಿಲ್ಲ, ಸುಮ್ಮನೆ ನೋಡಿದಳು ಅಷ್ಟೇ. ಅವನು ಚೀರಿದ.

"ಅಜ್ಜಿ ನನಗೆ ಏನೂ ಬೇಡ....ಈ ಎಲ್ಲದರ ಬದಿರು ಬೊಂಬೆ ನಾನು ಆಗಲಾರೆ. ಸೂಜಿಯ ಮೊನೆಯ ಮೇಲಿನ ಆಸ್ತಿಗಾಗಿ ಮಾತ್ರ ತಾಯಿ ಬೇಡ.... ಕೇವಲ ಕಾಯ್ದೆ ಬಲವಿದ್ದ, ಕೋರ್ಟಿನಿಂದ ಮಂಜೂರಾದ ತಾಯಿ ಬೇಡವೇ ಬೇಡ."

"ಮಗೂ ಬೇಡವೆಂದರೆ ಹೇಗೆ? ನಿನ್ನಲ್ಲಿ ದೇಸಾಯಿ ರಕ್ತವೇ ಹರಿಯು-ತ್ತಿದೆ....ಯಂಕಪ್ಪ ಇಷ್ಟೆಲ್ಲ ಯಾಕೆ ಮಾಡಿದ ಗೊತ್ತೆ? ನೀನು ಶಿವರಾಯರ ಮಗ. ತುಳಸಾನ ಮಗ........

ಅಜ್ಜಿಯ ಕೆನ್ನೆಗೆ ಫಟಾರನೆ ಹೊಡೆಯುವಷ್ಟು ಸಿಟ್ಟು ಅವನಿಗೆ. ಮೋಸ! ಒಂದರ ಮೇಲೆ ಒಂದು ಮೋಸ!! ತುಳಸಾ........! ರಾಧಾಬಾಯಿ....ಅವ್ವ.... ತಾಯಿ.... ಅವ್ವ.... ಯಶೋದಾ........ ಬ್ರಹ್ಮಾಂಡ........ಬಾವಿ........ಅದೇ ನೀರು....ಕೀಟ....... ಹುಳ....ನೊಣ....ಹುಳ....ನೊಣ ....

ಮರುದಿನ ಅವನ ಹೆಣ ಊರ ಹೊರಗಿನ ಆಲದ ಮರದ ಬಿಳಲುಗಳಿಗೆ ನೇತಾಡುತ್ತಿತ್ತು.

■

ನಾಟಕ

ರಾಮದಾಸ್

ಬಿದಿರು ಬೊಂಬೆ

ಪಾತ್ರಗಳು :

ನಾಟಕಕಾರ
ಮುದುಕ
ಪ್ರೇಕ್ಷಕರಲ್ಲೊಬ್ಬ–ಸತ್ಯ
ಇನ್ನೊಬ್ಬ ಪ್ರೇಕ್ಷಕ
ಶಾಂತಿ–ಸತ್ಯನ ಹೆಂಡತಿ
ಪ್ರೊಫೆಸರ್
ಶಾಸ್ತ್ರಿ, ಹೆಗ್ಡೆ, ಸೋಮು } ಶಿಕ್ಷಕ – ವಿದ್ಯಾರ್ಥಿಗಳು
ವಾಚಮನ್

[ನಾಟಕಕಾರ ಬರೆಯಲು ಕೂತಿದ್ದಾನೆ. ಮುದುಕ ಪ್ರವೇಶಿಸಿ ಅವನು ಬರೆಯುವಲ್ಲಿ ಹೋಗಿ ಇಣುಕುತ್ತಾನೆ. ತಲೆ ನೇವರಿಸಿಕೊಳ್ಳುತ್ತ ನಗುತ್ತಾನೆ. ನಾಟಕಕಾರನ ಸುತ್ತ ಒಮ್ಮೆ ನಿಧಾನವಾಗಿ ನಡೆದು ಹೊರಟು ಹೋಗುತ್ತಾನೆ. ನಾಟಕಕಾರನ ಬರೆಯುವಂತೆ ನಟಿಸಿ, ಹಲವಾರು ಬಾರಿ ಮುದುಕ ಹೋದ ಕಡೆ ನೋಡಿ, ಮತ್ತೆ ಬರೆಯತೊಡಗಿ, ಬರೆಯಲಾಗದ ವಿಫಲತೆಯಿಂದ ಪೆನ್ನು ಬಿಸಾಡಿ, ಮೇಲೆದ್ದು ಶತಪಥ ಹಾಕುತ್ತಾನೆ. ಒಂದು ಕ್ಷಣ ನಿಂತು ಮತ್ತೆ ಪೆನ್ನು ಕಯ್ಗೆತ್ತಿಕೊಳ್ಳುವಾಗ ಮುಗುಳು ನಗುತ್ತ ಮುದುಕ ಪ್ರವೇಶಿಸುತ್ತಾನೆ. ಬೆಚ್ಚಿಬಿದ್ದ ನಾಟಕಕಾರ ತಡೆಯಲಾರದಂತೆ ತಲೆ ಝಾಡಿಸುತ್ತ ರಂಗದ ಮೇಲೆಲ್ಲ ಸಂಚರಿಸುತ್ತಾನೆ. ಮುದುಕ ಅವನ ಹಿಂದೆಯೆ ಅವನು ಹೋದಲ್ಲಿ ಹೋಗುತ್ತಾನೆ. ನಾಟಕಕಾರ ರಂಗದ ನಡುವೆ ಸ್ತಬ್ಧನಾಗಿ ನಿಲ್ಲುತ್ತಾನೆ. ಮುದುಕ, ಅವನ ಸುತ್ತ ದೂರದಿಂದ ಹತ್ತಿರಕ್ಕೆ ಸರಿಯುತ್ತ ನಿಧಾನ

ಒಂದೊಂದೇ ಪದರನ್ನ ಕತ್ತರ್ಸ್ಕೊಂಡು, ನನ್ನನ್ ನಾನೇ ಹುಟ್ಟಿಸ್ಕೊಂಡ್ ಹೋಗೋಕೆ ಸಹಾಯಕ ಆಗೋ ನನ್ ಕೃತಿ ವಿಮರ್ಶೆ.

ಮುದುಕ : ಹಾಗಾದ್ರೆ ನಾನ್ ನಿನ್ ಕೃತೀ ಬಗ್ಗೆ ಮಾತ್ರೇ ಆಡಿಲ್ಲ ಅಂತೀಯೇನು ?

ನಾಟಕಕಾರ: ಬೇಕಾದಷ್ಟ್ ಮಾತಾಡಿದೀರ. ಯಾರಿಲ್ಲ ಅಂದ್ರು ? ಆದರೆ ನಾನ್ ನಿಂ ಮಾಗಿನ್ನೇರಕ್ ನಡಕೊಂಡದ್ದಕ್ಕೆ: ನೀವ್ ಹಾಕಿತ್ತಾಳಕ್ ಸರಿಯಾಗ್ ಕುಣ್ದದ್ದಕ್ಕೆ: ಹೃದಯಾ ಹಿಂಡೋ ಭಾವನೇಗಳ್ ಬಲಿದಾನ ಮಾಡಿ, ನಿಂ ಸಮಾಜ ರೂಪ್ಸಿರೋ ಕಟ್ಟುಕಟ್ಟಳೆಗಳಿಗ್ ಕಟ್‌ಬಿದ್ದು ಹೊಂದಾಣಿಕೆ ಮಾಡಿಕೊಂಡದ್ದಕ್ ತಾನೇ ನೀವ್ ಮೆಚ್ಚುಗೇ ಮಾತಾಡಿದ್ದು ? ನನ್ ಕೃತಿ ಆಕೃತಿ ಅಲ್ಲಾ, ಅದೊಂದ್ ವಿಕೃತಿ: ನಿಮ್ಮಂಥ ಯೂನಿವರ್ಸಿಟಿ ವಿಟ್‌ಗಳ್ ಮೆಚ್ಚುಗೇ ಪಡ್ಯೋಕೋಸ್ಕರ ಬಲವಂತವಾಗಿ ಹುಟ್ಟಿಕೊಂಡ ವ್ಯಭಿಚಾರದ್ ಕೂಸು. (ಸ್ವಲ್ಪ ತಡೆದು) ಇನ್ನೊಂದ್ಸಾರಿ ಆ ನಾಟಕಾ ನೋಡಿ. ನನ್ ನಾಚಿಗ್ಗೇಡಿನ್ ಹೊಂದಾಣಿಕೆ ನೋಡಿ. ನಾನದರಲ್ಲಿ ನನ್ ಆತ್ಮಹತ್ಯೆ ಮಾಡ್ಕೊಂಡಿದೀನೋ ಇಲ್ವೋ ಅಂತ ನಿಮಗ್ಗೊತ್ತಾಗುತ್ತೆ. (ಪ್ರೇಕ್ಷಕರ ಕಡೆ ನೋಡುತ್ತ.) ಹೌದು, ನಾನ್ ಆತ್ಮಹತ್ಯೆ ಮಾಡ್ಕೊಂಡಿದೀನಿ. ನಿಮಗೂ ಹೇಳ್ತೀನಿ. ನೀವೆಲ್ರೂ ನಾಟಕಾ ಆಡ್ತಿದೀರ. ನಿಂ ಜೀವನದ್ ಜತೆ, ನಿಂ ಹೆಂಡ್ತಿ ಮಕ್ಕಳ್ ಜತೆ, ಒಂದಲ್ಲ ಒಂದ್ ರೀತಿಯಿಂದ ನಿಂ ಜತೆ ವ್ಯವಹಾರ ಮಾಡ್ತಿರೋ ಪ್ರತಿಯೊಬ್ಬರ ಜತೆ ನೀವ್ ಹೊಂದಾಣಿಕೆ ಮಾಡ್ಕೊಂಡಿದೀರ, ಆತ್ಮಹತ್ಯೆ ಮಾಡ್ಕೊಂಡಿದೀರ.

ಪ್ರೇಕ್ಷಕರಲ್ಲೊಬ್ಬ : ಸುಳ್ಳು ಸುಳ್ಳು ಸುಳ್ಳು: ನಾನಾತ್ಮಹತ್ಯೆ ಮಾಡ್ಕೊಂಡಿಲ್ಲ.

ನಾಟಕಕಾರ: ಗುಂಪ್‌ನಲ್ ಗೋವಿಂದಾ ಆಗೋಂಥಾ ಮಾತ್ನ ಆಡ್ಬಿಂತಾ ಡೋದು ಸುಲಭ. ಇಲ್ಲಿಗ್ಬನ್ನಿ. ಈ ವೇದಿಕೇ ಮೇಲ್ನಿಂತು, ನೀವು ಹೇಳೋ ಮಾತ್ನ ಘಂಟಾಘೋಷವಾಗ್ ಹೇಳಿ.

ಪ್ರೇಕ್ಷಕ : ನಾನ್ಬಂದಿರೋದು ನಾಟಕ ನೋಡೋಕೆ, ಆಡೋಕಲ್ಲ.

ಇನ್ನೊಬ್ಬ ಪ್ರೇಕ್ಷಕ: ಹೌದು ಹೌದು ನಾಟಕ ನಾಟಕ.

ನಾಟಕಕಾರ: ಯಾಕೆ ನಾನ್ ಜನಗಳಿಗೆ ನಿಮ್ಮನ್ನೆಲ್ಲರೋದನ್ನ ಹೇಳೋಕ್ ಹೆದರ್ಕೆ ಆಗತ್ತೆ? ನಿಂಬ್ನೆಲ್ಲ ಬೇಜಾರಾಗತ್ತೆ ಅಂತ್ಲೇ?

ಪ್ರೇಕ್ಷಕ: ನಾವು ಬಂದಿರೋದು ನಾಟಕ ನೋಡೋಕೆ, ಅಳೋಕಲ್ಲ'ಂತ.

ನಾಟಕಕಾರ: ನಾಟಕ ಯಾಕ್ ನೋಡ್ಬೇಕೂಂತೀರಿ?

ಪ್ರೇಕ್ಷಕ: ಯಾಕ್ ನೋಡ್ಬೇಕೂಂದ್ರೆ, ಮನೋರಂಜನೆಗೆ, ಸಂತೋಷಾ ಆಗ್ಲೀ'ಂತ.

ನಾಟಕಕಾರ: ಕ್ಷಮಿಸಿ. ನನ್ನಾಟ್ಕ ಬ್ರೈನ್ ಟಾನಿಕ್ ಇದ್ದ್ಹಾಗೆ. ಮುಖತ್ತುಂಬ ಬಣ್ಣ ಬಳ್ಕೊಂಡು ಬಣ್ಬಣ್ಣದ್ ವೇಷ ಹಾಕ್ಕೊಂಡು ಫ್ಯಾನ್ಸಿ ಡ್ರೆಸ್ ತೋರ್ಸೊಲ್ಲ. ಅಥ್ವಾ ಹಾಡಿನ್ನೆಪ್ದಲ್ಲಿ ಸಂಗೀತ್ ಕಛೇರಿ ನಡ್ಸೊಲ್ಲ. ಒಟ್ನಲ್ಲಿ ನಿಂ ಬುದ್ಧಿಗ್ ಬ್ರೇಕ್ ಹಾಕೋವಂಥ ಗಾಂಜಾ, ಅಫೀಮು, ಹೆಂಡಾ ಸಾರಾಯಿ ಯಾವುದೂ ಆಗೊಲ್ಲ ನನ್ನಾಟ್ಕ.

೧. ಪ್ರೇ: ಯಾವ್ಪ್ಪಾ ಒಂದ್ ನಾಟ್ಕ. ಬೇಗ್ ಶುರೂ ಮಾಡ್ಬಾರ್ದೇ?

ನಾಟಕಕಾರ: ತಾನಾತ್ಮಹತ್ಯೆ ಮಾಡ್ಕೊಂಡಿಲ್ಲಾ'ಂತ ಹೇಳಿದ್ಜನ ವೇದಿಕೇ ಮೇಲ್ಬರದಿದ್ರೆ ನಾಟ್ಕ ಇಲ್ಲಿಗೇ ಮುಗ್ದುಹೋಯ್ತೂಂತ ಲೆಕ್ಕ.

ಪ್ರೇಕ್ಷಕರು: ಹೋಂ ಹೋಂ ಹೋಂ (ಎಂದು ಗದ್ದಲ ಮಾಡುತ್ತಾರೆ. ಪ್ರೇಕ್ಷಕ ಎದ್ದುನಿಂತು.)

ಪ್ರೇಕ್ಷಕ: ದಯವಿಟ್ಟು ಗಲಾಟೆ ಮಾಡ್ಬೇಡಿ. ನಾನೇ ನಾಟಕ್ಕಾರನ್ ಸವಾಲನ್ನ ಸ್ವೀಕರಿಸ್ತೀನಿ. (ಎಂದು ವೇದಿಕೆಯ ಮೇಲೆ ಬಂದು) ನಾನು, ಮಿಸ್ಟರ್ ಸತ್ಯ, ಈ ವೇದಿಕೆ ಮೇಲ್ನಿಂತು ಘಂಟಾ ಘೋಷ್ವಾಗ್ ಘೋಷಿಸ್ತೀನಿ: ನಾನು ಆತ್ಮಹತ್ಯೆ ಮಾಡ್ಕೊಂಡಿಲ್ಲ. ಯಾವಾಗ್ಲೂ, ಯಾರ್ದ್ಮೇಲೂ, ಯಾವ್ದೇ ಥರ ಹೊಂದಾಣಿಕೆ ಮಾಡ್ಕೊಂಡಿಲ್ಲ. ಅದ್ರಿಂದ್ಲೇ ಕೀರ್ತಿಯಾಗ್ಲೀ, ಹಣಾ ಆಗ್ಲಿ ನಾನ್ ಸಂಪಾದ್ನೆ ಮಾಡಿಲ್ಲ. ನನಗಿರೋ ಒಂದೇ ತೃಪ್ತಿ ಅಂದ್ರೆ: ನಾನ್ ಯಾವಾಗ್ಲೂ ಸತ್ಯ ಮಾತಾಡ್ತೀನಿ ಅನ್ನೋದು.

೧. ಪ್ರೇ: ಹರಿಶ್ಚಂದ್ರನ್ ತಲೆ ಮೇಲ್ ಹೊಡ್ದ್ಹಾಗೆ!

ಸತ್ಯಾನೇ ಹೇಳ್ತಾ ಬಂದೆ. ಯೂನಿವರ್ಸಿಟಿ ಒಳಗೂ ಹೋಗ್ದೆ ನಾನು ತಲೆ ಎತ್ತಬಾರದ ಹಾಗ್ಮಾಡಿದ್ರು. ಆದರೂ ತಲೆ ಎತ್ತಿ ನಡ್ಯೋ ಛಾತಿ ಉಳ್ಸ್ಕೊಂಡಿದೀನಿ.

ಶಾಂತಿ : ಏನುಳಿಸ್ಕೊಂಡಿದೀರೋ, ಯಾಕುಳಿಸ್ಕೊಂಡಿದೀರೋ ನಂಗಂತೂ ಅರ್ಥ ಆಗಲ್ಲ. ವರ್ಷಕ್ಕೊಂದ್ ಕಾಲೇಜು, ವರ್ಷಕ್ಕೊಂದ್ ಊರು. ಆರು ತಿಂಗಳು ಕೆಲಸ, ಇನ್ನಾರು ತಿಂಗಳು ಕೆಲಸ ಹುಡುಕೋ ಕೆಲಸ. ನೀವೂ ಎಲ್ಲರ ಹಾಗೇ ಇದ್ದಿದ್ರೆ........

ಸತ್ಯ : ಇದ್ದಿದ್ರೆ ನಾ ಯಾಕೇ ಹೋಗ್ತಿದ್ದೆ ಓರಿಯೆಂಟೇಷನ್ ಕೋರ್ಸ್‌ಗೆ? ಒಂದ್ ತಮಾಷೆ ಗೊತ್ತಾ: ಜಗತ್ನಲ್ಲಿ ಏನೂ ಮಾಡೋಕಾಗ್ದೋನು ಪಾಠ ಹೇಳ್ತಾನಂತೆ. ಪಾಠಾನೂ ಹೇಳೋಕಾಗ್ದೋನು ಪಾಠ ಹೇಳ್ಕೊಡೋದ್ ಹೇಗೇಂತ ಹೇಳ್ಕೊಡ್ತಾನಂತೆ! ಅವ್ನ ಕಲ್ಸೋದನ್ ಕಲ್ಯೋಕೆ ನಾನ್ ಹೋಗ್ತಿದೀನಿ.

ಶಾಂತಿ : ಆಮೇಲಾದ್ರೂ ಯೂನಿವರ್ಸಿಟಿ ಕೆಲ್ಸ ಸಿಗುತ್ತೇನ್ ನಿಮ್ಗ ?

ಸತ್ಯ : ಶಾಂತೂ, ನಿನ್ನೋಡಿದ್ರೆ ಅಯ್ಯೋ ಅನ್ಸುತ್ತೆ ಕಣೆ. ನೀನ್ ಅಂಥಾ ಹಗಲ್ಗನಸ್ನೆಲ್ಲ ಕಾಣ್ಬೇಡಮ್ಮಾ. ಈ ಜನ್ಮದಲ್ಲಿದ್ ಸಾಧ್ಯ ಇಲ್ಲ. ನನ್ ಸ್ವಂತ ಪ್ರಜ್ಞೇನ ಕತ್ರೀ ಕಾಲ್ಗೆತ್ತೇ ಇಡೋ ಕೆಲ್ಸ ನಾನ್ ಮಾಡ್ಲಾರೆ. ಕೆಲ್ಸ ಇರ್ಲಿ, ಇಲ್ದೆ ಇರ್ಲಿ, ಹೇಗೂ ನನ್ನಿನ್ಶೂರೆನ್ಸ್ ಪ್ರೀಮಿಯಂ ಕಟ್ತಿ ಇದೀನಿ. ಯಾಕ್ ಗೊತ್ತಾ? ನಿನ್ ಮೇಲಿನ್ ಕರುಣೆಯಿಂದ. ನಿಂಗ್ ಯಾವತ್ ನಂಜತೇ ಬದುಕೋದ್ ಕಷ್ಟಾ ಅನ್ಸುತ್ತೋ ಅವತ್ ಹೇಳ್ ಬಿಡು. ಇಪ್ಪತ್ ಸಾವಿರ್ರುಪಾಯ್ ನಿನ್ ಕಾಲಿನ್ ಬುಡಕ್ಕೆ ಬಂದ್ ಬೀಳೋ ಹಾಗ್ಮಾಡಿ, ಈ ಬದುಕೂ ಅನ್ನೋ ತಮಾಷೇನ ಮುಗ್ಸಿ ಬಿಡ್ತೀನಿ.

ಶಾಂತಿ : ಬಿಡ್ತೂ ಅನ್ನಿ.

ಸತ್ಯ : ಕಟ್‌ಕೊಂಡ್ತು. ಇಷ್ಟ್ ವರ್ಷ ನಂಜತೆ ಸಂಸಾರ ಮಾಡಿ........ ಹೋಗ್ಲಿ ಬಿಡು. ಮಗೂ ಏನ್ಮಾಡ್ತಿದಾನೆ? (ಎಂದು ತನ್ನ ಸೂಟ್‌ಕೇಸ್ ತೆಗೆದುಕೊಳ್ಳುವನು.)

ಶಾಂತಿ : ನಿದ್ದೆ ಮಾಡ್ತಿದಾನೆ. ಎಬ್ಬಿಸ್ಬೇಕಾ ?

ಸತ್ಯ : ಬೇಡ, ಗುಡ್ ಬೈ. (ಕತ್ತಲು).... ಆಮೇಲೆ ಓರಿಯೆಂಟೇಷನ್ ಕೋರ್ಸ್‌ನಲ್ಲೂ ಸತ್ಯಾನೇ ಹೇಳ್ದೆ.

(ಮತ್ತೆ ಬೆಳಕು ಬೀಳುವಾಗ ಕ್ಲಾಸ್ ರೂಂ. ಪ್ರೊಫೆಸರ್ ಪಾಠ ಮಾಡುತ್ತಿದ್ದಾರೆ. ಸತ್ಯ ಅಲ್ಲದೆ ಇನ್ನೂ ಮೂವರು ಶಿಕ್ಷಕ ವಿದ್ಯಾರ್ಥಿಗಳು ಶಾಸ್ತ್ರಿ, ಹೆಗ್ಡೆ, ಸೋಮು ಕೂತಿದ್ದಾರೆ.)

ಪ್ರೊಫೆಸರ್ : ಎಂಥ ಸುಂದರವಾದ ಸಾಲುಗಳು ! ಅದನ್ನು ಕೇಳುತ್ತಿದ್ದಂತೆಯೇ ನಾವು ನಮ್ಮ ಮರೆಯುತ್ತೇವೆ. ಲೌಕಿಕ ವ್ಯವಹಾರದಲ್ಲಿ ನೊಂದಕಿ ಕೊಂಡು ನೊಂದ ಮನಸ್ಸಿಗೆ ಅಮೃತ ಸೇಚನದಂತೆ ಕಾವ್ಯರಸಾಸ್ವಾದನೆ. ಕವಿಯ ಕಲ್ಪನಾ ಪ್ರಪಂಚದಲ್ಲಿ ನಾವೂ ನಮ್ಮ ಮರೆತು ಅವನೊಡನೆ ತಲೆದೂಗುತ್ತೇವೆ.

(ಪ್ರೊಫೆಸರನ ಪ್ರತಿ ವಾಕ್ಯಕ್ಕೂ ತಲೆಯಾಡಿಸುತ್ತ ಕೂತುಕೊಂಡಿದ್ದ ಸತ್ಯ, ಮುಂದಿನ ಮಾತು ಮುಗಿಯುತ್ತಿದ್ದಂತೆ, 'ಥತ್' ಎಂದು ಮುಖ ತಿರುಗಿಸುತ್ತಾನೆ. ಪ್ರೊಫೆಸರ್ ಅವನ ಕಡೆ ನೋಡಿ,)

ಏನದು ? ವಾಟೀಸ್ ರಾಂಗ್ ವಿಥ್ ಯೂ ?

ಸತ್ಯ : ನಥಿಂಗ್ ಸರ್, ಆದರೆ.... ನೀವು ಕವಿತೆ ಬಗ್ಗೆ ಮಾತಾಡದೆ ಶೈಕ್ಷಣಿಕ ಮನೋವಿಜ್ಞಾನ ಅಥ್ವಾ ಚೈಲ್ಡ್ ಬಿಹೇವಿಯರ್ ಬಗ್ಗೆ ಮಾತಾಡಿದ್ರೆ ಚೆನ್ನಾಗಿರತ್ತೇನೋ ಅಂತ........

ಪ್ರೊಫೆಸರ್ : ಬಿ ಕ್ವಯಟ್. ಐ ವಿಲ್ ಕಂ ಟು ದಟ್. ಕಾವ್ಯ ಯೂಸೀ.... ಆಯಾಮಿನ್ ಇಂಗ್ಲೀಷ್ ಎಂ.ಎ., ಯೂಸೀ.... ಕಾವ್ಯ ಈಸ್ ಮೈ ಫೇವರೇಟ್ ಸಬ್ಜೆಕ್ಟ್.

ಸತ್ಯ : ಆದರೆ ಕಾವ್ಯದ ವಿಷಯದಲ್ಲಿ, ನೀವಿನ್ನೂ ಯಾವುದೋ ಶತಮಾನದಲ್ಲಿದ್ದೀರಿ ಸರ್....

ಪ್ರೊಫೆಸರ್ : ಸಿಟ್ ಡೌನ್, ಸಿಟ್ ಡೌನ್, ಯೂನೋ.... ಪೋಯಟ್ರಿ ಈಸ್ ಸಮ್ಥಿಂಗ್....ಯೂನೋ.... ವಾಟೀಸ್ ಪೋಯಟ್ರಿ ?

ಸತ್ಯ : ಅದ್ನೇ. ಮನುಷ್ಯನ್ನ ಹೆಚ್ಚು ಮಾನವೀಯನನ್ನಾಗಿ ಮಾಡೋದೇ ಕಾವ್ಯ. ಐ ಮೀನ್, ಪೋಯಟ್ರಿ ಈಸ್ ದಟ್ ವಿಚ್ ಮೇಕ್ಸ್ ಎ ಮ್ಯಾನ್ ಮೋರ್ ಹ್ಯೂಮನ್.

(ಪ್ರೊಫೆಸರ್ ಕಾವ್ಯದ ವಿವರಣೆ ಸರಿಯಲ್ಲವೆನ್ನುವಂತೆ ತಲೆಯಾಡಿಸುತ್ತಾನೆ. ಸತ್ಯನಿಗೆ ಕೂತುಕೊ ಎಂಬಂತೆ ಸನ್ನೆ ಮಾಡುತ್ತಾನೆ. 'ನೋ....ನೋ....ನೋ....' ಎನ್ನುತ್ತ ಇತರರ ಕಡೆ ತಿರುಗಿ.)

ಪ್ರೊಫೆಸರ್ : ವೈ ಡು ಯು ರೀಡ್ ಪೋಯೆಟ್ರಿ ? ನೀವೆಲ್ಲರೂ ಕಾವ್ಯವನ್ನು ಓದುವುದೇತಕ್ಕೆ ?

(ಕೂತವರು ಮುಖ ಮುಖ ನೋಡಿಕೊಳ್ಳುತ್ತಾರೆ. ಪ್ರೊಫೆಸರ್, ಹೆಗ್ಡೆಯ ಕಡೆ ನೋಡಿದಾಗ)

ಹೆಗ್ಡೆ : ನಾನು....ನಾನು....ನಾನ್ ಪೋಯೆಟ್ರಿ ಓದೋದೇ ಇಲ್ಲ, ಸಾರ್.

(ಎಲ್ಲರೂ ನಗುತ್ತಾರೆ. ಸತ್ಯ ಒದ್ದಾಡುತ್ತಾನೆ ಪ್ರೊಫೆಸರ್ ಸೋಮುವಿನ ಕಡೆ ಬೆರಳು ಮಾಡಿ, 'ಯೂ' ಎನ್ನುತ್ತಾರೆ.)

ಸೋಮು : ನಾನಾ ಸಾ ?

ಪ್ರೊಫೆಸರ್ : ಯೆಸ್, ಯುವರ್ಸೆಲ್ಫ್.

ಸತ್ಯ : ನಾನ್ ಹೇಳ್ತೀನೆ ಸರ್, ಲೆಟ್ ಮಿ ಟೆಲ್ ಯೂ.

(ಎದ್ದು ಮೇಲೇಳಲು ಪ್ರಯತ್ನಿಸಿದಾಗ ಪ್ರೊಫೆಸರ್ ಕೂತುಕೊಳ್ಳಲು ಸನ್ನೆ ಮಾಡುತ್ತಾರೆ. ಸೋಮುವಿನತ್ತ ನೋಡುತ್ತ ಪ್ರೊಫೆಸರ್)

ಪ್ರೊಫೆಸರ್ : ಯೆಸ್, ವೈ ಡೂಯು ರೀಡ್ ಪೋಯೆಟ್ರಿ ?

ಸೋಮು : ಪೋಯೆಟ್ರಿ....ಪದ್ಯ ಸಾ....ನಾನ್ ಪದ್ಯ ಓದಲ್ಲ ಸಾ....ಆದ್ರೆ....

ಪ್ರೊಫೆಸರ್ : ಯೆಸ್....

ಸೋಮು : ಇಂದೆ ಓದಿಪ್ನಿ ಸಾ

ಪ್ರೊಫೆಸರ್ : ಏಕೆ, ವೈ ?

ಸೋಮು : ಎಸ್ಸೆಲ್ಸೀಲಿ, ಪೀಯೂಸೀಲಿ, ಬೀಯೆಸ್ಸೀಲಿ, ಇಂಗ್ಲೀಸ್ನಲ್ಲಿ, ಕನ್ನಡ್ದಲ್ಲಿ ಎಲ್ಲಾದ್ರಲ್ಲೂ ಪರೀಕ್ಸೆಗ್ ಪದ್ಯಗ್‌ಬುಟ್ಟಿದ್ರು ಸಾ. ಅವಾಗ, ಅದ್ಕೇನೇ, ಆನೋಟೇಸನ್‌ಗಳ್ ಬತ್ತಾವೇಂತ ಒಂದೊಂದ್‌ಕಿತ ಓದ್ಬುಟ್ಟು ಆಮ್ಯಾಲೆ ಗೈಡ್‌ಗಳ್ಳೋದ್ಕೊಂಬುಟ್ಟೆ ಸಾ.

(ಎಲ್ಲರೂ ಕೇಕೆ ಹಾಕಿ ನಗುವರು. ಸತ್ಯ ಜಂಗನೆ ಮೇಲೆದ್ದು.)

ಸತ್ಯ : ನಾನ್ ಹೇಳ್ತೀನಿ ಸರ್. ಐ ರೀಡ್ ಪೋಯೆಟ್ರಿ ಬಿಕಾಸ್ ಇಟ್

ಮೇಕ್ಸ್ ಮಿ ಥಿಂಕ್; ಥಿಂಕ್ ಎಬೌಟ್ ಪೀಪ್ಲ್, ದೇರ್ ಬಿಹೇವಿಯರ್, ದೇರ್ ವ್ಯಾಲ್ಯೂಸ್ ಅ್ಯಂಡ್....

ಸೋಮು : ಅಂಗಂದ್ರೇನು, ಕನ್ನಡ್‌ದಾಗೇಳ್ರಿ ?

ಸತ್ಯ : ಎಮ್ಮೆಸ್ಸಿ ಓದಿ ನಿಮಗಷ್ಟು ಇಂಗ್ಲೀಷ್ ಗೊತ್ತಾಗಲ್ವೆ ?

ಸೋಮು : ನಂಬಾಸೆ ಕನ್ನಡ. ಇಂಗ್ಲೀಸು ಪರ್ದೇಸಿ ಬಾಸೆ. ಎಮ್ಮೆಸ್ಸಿ ಆದ್ರೇನು, ಎಮ್ಮೆ ಆದ್ರೇನು; ಇಂಗ್ಲೀಸಿಂಗ್ಲೀಸೇ, ಕನ್ನಡಾ ಕನ್ನಡಾನೇ: ಅಲಾಲೀ ಇಸಾ ಇಸಾನೆ.

ಸತ್ಯ : ಅಬ್ಬಬ್ಬ ! ಅಗ್ಲಿ ಕನ್ನಡದಲ್ಲೀ ಹೇಳ್ತೀನಿ. ಜನರ ಬಗ್ಗೆ, ಅವರ ನಡವಳಿಕೆ ಬಗ್ಗೆ, ಅವರ್ ಮೌಲ್ಯಗಳ ಬಗ್ಗೆ ವಿಚಾರ ಮಾಡೋ ಹಾಗ್ಮಾಡುತ್ತೇ'ಂತ ನಾನ್ ಕಾವ್ಯ ಓದ್ತೀನಿ.

ಸೋಮು : ಕರೆಕ್ಟ್.

ಪ್ರೊಫೆಸರ್ : ವಿಚಾರ ಮಾಡುವುದಕ್ಕೆ ತತ್ವಶಾಸ್ತ್ರ ಓದಬೇಕು, ಕಾವ್ಯವನ್ನಲ್ಲ. ಕಾವ್ಯದಲ್ಲಿರುವುದು ಕಲ್ಪನೆ, ಇಮ್ಯಾಜಿನೇಷನ್; ಭಾವ, ಎಮೋಷನ್. ಕಾವ್ಯವನ್ನೋದಿದರೆ ಸಂತೋಷವಾಗುತ್ತದೆ. ಎಲ್ಲವೂ ಮರೆತು ಹೋಗುತ್ತದೆ. ಮೈ ಮರೆಯುತ್ತದೆ.

(ಎಂದು ಪ್ರೊಫೆಸರ್ 'ಕೇಳಿ ಈ ಸಾಲು'. ಎನ್ನುವಾಗಲೇ ಸತ್ಯ ಧ್ವನಿ ಏರಿಸಿ ಮಾತಾಡುತ್ತಾನೆ. ಪ್ರೊಫೆಸರ್, ಅವನಿಗೆ ಮಾತಾಡುವ ಅವಕಾಶ ನೀಡಲಾರ.... ಗೊಂದಲ)

ಸತ್ಯ : ಹೆಂಡಾ ಕುಡ್ದಾಗಾಗತ್ತಲ್ಲ ಹಾಗೇ....

ಪ್ರೊಫೆಸರ್ : ಪ್ಲೀಸ್ ಸಿಟ್ ಡೌನ್.

ಸತ್ಯ : ಕಾವ್ಯ ಅನ್ನೋದು ನಿಮಗೊಂದು ಅಮಲು ಪದಾರ್ಥ....

ಪ್ರೊಫೆಸರ್ : ಸಿಡೌನ್. ಐಸೇ ಸಿಡೌನ್.

ಸತ್ಯ : ಇಪ್ಪತ್ತೂ ಶತಮಾನಗಳ ಕಾಲ ಹಿಂದೆ ಇದೀರ, ಸಾರ್....

ಪ್ರೊಫೆಸರ್ : ಕೂತುಕೊಳ್ರೀ.... ನಾ ಹೇಳೋದು ಕೇಳಿ....

ಸತ್ಯ : ಎಲಿಯಟ್ ಕಾವ್ಯ ಓದ್ದಾಗ್ಲೂ ನಿಮಗಮಲು ಬಂತೆ ಸರ್....

ಪ್ರೊಫೆಸರ್ : ಕೂತುಕೊಳ್ಳಿ........ ಎಲಿಯಟ್ (ಒಂದು ಕ್ಷಣ ಸುಮ್ಮನಿದ್ದು) ಎಲಿಯಟ್.... ಐ ಡೋಂಟ್ ಲೈಕ್ ಹಿಂ....ಯೂಸೀ ....

ಸತ್ಯ : ಅಡಿಗರ ಕವಿತೆ ಓದಿದೀರ ?

ಪ್ರೊಫೆಸರ್ : ನಾರಾಯಣ ಅಡಿಗ ? ....ಯೆಸ್....ಫರ್ಗಾಟ್....

ಸತ್ಯ : ನಿಮಗೆ ಕಾವ್ಯಕ್ಕಿಂತ ರಾಜಕೀಯ ಹತ್ರ..ಅಡಿಗ ಅಂದ್ರೆ ಗೋಪಾಲ ಕೃಷ್ಣ ಅಡಿಗ ಅಂತ. ಅವರ ಕವಿತೆ ಓದಿದೀರಾ'ಂದೆ ?

ಪ್ರೊಫೆಸರ್ : ನೋ....ಯೂಸೀ....ಮಹಾಕವಿ ಕುವೆಂಪು....ಮಹಾಕವಿ ಕುವೆಂಪು ಅವರ ಕಾವ್ಯ.... (ಸತ್ಯನ ದನಿ ಏರಿ, ಪ್ರೊಫೆಸರ್ ದನಿ ಕುಗ್ಗುತ್ತದೆ.)

ಸತ್ಯ : ಅಡಿಗರ ಕಾವ್ಯ: ನಿದ್ದೆ ಮಾಡ್ತ ಕನಸು ಕಾಣ್ತಿದ್ದ ಕನ್ನಡ ಕಾವ್ಯಕ್ಕೆ ಚಾವಟಿಯೇಟ್ ಹೊಡೆದೆಬ್ಬಿಸಿದ ಅಡಿಗರ ಕಾವ್ಯ ಓದಿ....

ಪ್ರೊಫೆಸರ್ : ಪ್ಲೀಸ್ ಸಿಡೌನ್.

ಸತ್ಯ : ಅವರ ವರ್ಧಮಾನ, ಬೇಡ, ಭೂಮಿಗೀತ ಓದಿ, ಅದರಲ್ಲಿ....

ಪ್ರೊಫೆಸರ್ : ದಯವಿಟ್ಟು ಕೂತುಕೊಳ್ಳಿ.

ಸತ್ಯ : ಮೊದ್ಲು, 'ತೆಂಗು ಗರಿಗಳ ಬೀಸಿ ಕೈ ಚಾಚಿ ಕರೆದಳು....'

ಪ್ರೊಫೆಸರ್ : (ಮೇಜು ಗುದ್ದಿ) ಕೂತ್ಕೊಳ್ಳಿ.

ಸತ್ಯ : ನೆಲತಾಯಿ ಮಲತಾಯಿ....

(ಸೋಮು, ಶಾಸ್ತ್ರಿ ಸತ್ಯನನ್ನು ಕೂರಿಸಲು ಪ್ರಯತ್ನಿಸುತ್ತಾರೆ. ಪ್ರೊಫೆಸರ್., 'ಕೂತ್ಕೊಳ್ಳಿ' ಎನ್ನುತ್ತಲೇ ಇರುತ್ತಾನೆ. 'ಕುಂತ್ಕೊಂಬುಡಪ್ಪ ಪ್ರೊಫೆಸರ್ ಯೋಳ್ತಾವ್ರೆ' ಅನ್ನುತ್ತ ಶರಟಿನ ತುದಿ ಎಳೆಯುತ್ತಾನೆ, ಸೋಮು)

ಹೇಳವನ ಹೆಗಲ ಮೇಲೆ ಕುರುಡ ಕೂತಿದ್ದಾನೆ, ದಾರಿ ಸಾಗುವ ದೆಂತೊ ನೋಡಬೇಕು; — ಅಂದಾಗ ನಂ ವೈಚಾರಿಕ ಪ್ರಜ್ಞೆಗೆ ಎಂಥಾ....

(ಸೋಮು ಮತ್ತಿತರರು ಸತ್ಯನನ್ನು ಅನಾಮತ್ತಾಗಿ ಕೂರಿಸುತ್ತಾರೆ.)

ಪ್ರೊಫೆಸರ್ : ಇವರು ತುಂಬ ಎಮೋಷನಲ್. ಭಾವುಕ. ಇವರಿಗೆ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್, ಕಾಂಪ್ಲೆಕ್ಸ್ ಅಲ್ಲ ಫೀಲಿಂಗ್ ಇದೆ. ಹೀನ ನಾನು ಪ್ರಜ್ಞೆ, ಕೀಳರಿಮೆ ಇದೆ. ಇವರ ಆವೇಶ ಅದರ ಡಿಫೆನ್ಸಿವ್ ಮೆಕ್ಯಾನಿಸಂ: ಐ ಆ್ಯಮ್ ಎ ಸೈಕೋ ಅನಲಿಸ್ಟ್ ಯೂ ಸೀ: ಅಂದರೆ ಆದೋದು ರಕ್ಷಣಾಯಂತ್ರ. ಫ್ರಾಯ್ಡ್ ಗ್ರಂಥಿಯ

ಸ್ರಾವ ಹೆಚ್ಚಾದಾಗ ಇಂಥದೇ ಪರಿಸ್ಥಿತಿ. ಯೂಸೀ ಐ ನೋ ಹ್ಯೂಮನ್ ಫಿಸಿಯಾಲಜಿ. ಥೈರಾಯ್ಡ್....

ಸೋಮು : (ಎದ್ದು ನಿಂತು) ಥೈರಾಯ್ಡ್ ಅಲ್ಲ ಸಾ, ಅದೂ....

ಪ್ರೊಫೆಸರ್ : ಇಟೀಸ್ ಥೈರಾಯ್ಡ್, ಥೈರಾಯ್ಡ್.

ಸೋಮು : ಆಯಾಮ್ ಝುವಾಲಜಿ ಎಮ್ಮೆಸ್ಸಿ ಸಾ. ಇಟೀಸ್ ಥೈರಾಯ್ಡ್ ಅಲ್ಲ ಸಾ. ಆಡ್ರಿನಲ್ ಸಾ....

ಪ್ರೊಫೆಸರ್ : ನೋ ನೋ ನೋ...ಐಯಾಮ್ ಶೂರ್, ಇಟೀಸ್ ಥೈರಾಯ್ಡ್.

(ಸತ್ಯನಿಗೆ ಬೋರ್ ಆಗಿ ಸಿಗರೇಟು ಹಚ್ಚುತ್ತಾನೆ. ಪ್ರೊಫೆಸರ್ 'ಇಟೀಸಿಂಡೀಸೆಂಟ್' ಎಂದು ಚೀರಿ ಮೇಜನ್ನು ಗುದ್ದಿ.)

ಐ ಡೋಂಟ್ ಟಾಲರೇಟ್ ದಿಸ್ ಇನ್ ಮೈ ಕ್ಲಾಸ್ ರೂಂ. ಇಟೀಸ್ ಇಂಡೀಸೆಂಟ್, ಯೂ ಪ್ಲೀಸ್ ಗೆಟೌಟಾಫ್ ಹಿಯರ್.

ಸತ್ಯ : (ಗಂಭೀರವಾಗಿ ಎದ್ದು. ನಾಕಾರು ಹೆಜ್ಜೆ ಪ್ರೊಫೆಸರರ ಕಡೆ ನಡೆದು.) ನಾವೂ ನಿಂ ಹಾಗೇ ಕಾಲೇಜು ಅಧ್ಯಾಪಕರು. ಸಿಗರೇಟ್ ಸೇದ್ ಬಾರದೂಂತ ಹೇಳೋ ಕ್ರಮ ಇದಲ್ಲ. ನಾನು ಸಿಗರೇಟ್ ಸೇದಿದ್ ಅಸಭ್ಯ ಅಲ್ಲ, ಇಂಡೀಸೆಂಟಲ್ಲ. ಸೇದ ಬಾರದು ಅನ್ನೋದನ್ನ ನೀವ್ ತಿಳ್ಸಿದ್ರಲ್ಲಿ ಆ ಕ್ರಮ ಅದಸಭ್ಯ. ಅದು ಇಂಡೀಸೆಂಟ್. ನಿಮ್ಮ ಥೈರಾಯ್ಡ್ ಅಥ್ವಾ, ಎಮ್ಮೆಸ್ಸಿ ಹೇಳೋ ಹಾಗೆ ನಿಂ ಆಡ್ರಿನಲ್ ಗ್ರಂಥಿಗ್ಳ ಸ್ರಾವ ಪ್ರವಾಹ ಆಗ್ ಹರೀದಿರ್ಲಿ. ನಾನ್ ಹೊರಗ್ಹೋಗ್ ಸಿಗ್ರೇಟ್ ಸೇತ್ತೀನಿ.

(ರಂಗದಲ್ಲಿ ಕತ್ತಲೆ. ಬೆಳಗಿದಾಗ ನಾಟಕಕಾರ ಮತ್ತು ಮುದುಕ ಇದ್ದಾರೆ.)

ನಾಟಕಕಾರ: ಮೆಚ್ಕೊಂಡೆ ಅಪ್ಪಾ ಮೆಚ್ಕೊಂಡೆ. ಆದರೆ ಇವರ ಮುಖಾ ನೋಡು ಸುಟ್ಟ ಬದನೇಕಾಯಿ, ಅದೂ ಮಂಗಳೂರು ಗುಳ್ಳ ಆಗಿದೆ.

ಮುದುಕ : ಹೌದಪ್ಪಾ ಹೌದು, ಹಣ್ಣೆಲೆ ನೋಡಿ ಚಿಗುರೆಲೆ ನಗುತ್ತೆ.

ನಾಟಕಕಾರ: ಹಣ್ಣೆಲೆ ನೋಡಿ ಅಲ್ಲ, ಹಣ್ಣೆಲೆ ಉದುರೋವಾಗ ಚಿಗುರೆಲೆ ನಗುತ್ತೇಂತ ಆದರೆ ನಿಮ್ಮಂಥ ಹಣ್ಣೆಲೆಗಳು ಉದುರೋದು ಯಾವಾಗ ಅಂತ ? ಯಯಾತಿ ನಾಟ್ಕ ಓದಿದೀರ ? ನಿಮ್ಮಂಥಾ

ವ್ರಿಗೆ, ಇಲ್ಲೀ, ಈ ಲೌಕಿಕದ ಸ್ಥಾನಾಮಾನಾ ಮರ್ಯಾದೇ ಹಣಾ ಹೆಣ್ಣು ಅಂದ್ರೆ, ಒಳಗಿಂದೊಳಗೇ ಒಳಗಿಂದೊಳಗೇ ಆ ಯುವಾ ತಿಗೆ ತನ್ ಯವ್ವನದ್ ಬಗ್ಗೆ ಇದ್ ಅತ್ಯಾಶೇಗಿಂತ ಅಧಿಕಾಧಿಕ ಆಸಕ್ತಿ. ಆದ್ರೂ ಬಾಯ್ಲಿ ದಿವ್ಯ ನಿರ್ಲಕ್ಷ್ಯತೇ ಸೋಗು! ನಾವೂ ಇದೀವಿ ಯುವಕ್ರು; ಆಧುನಿಕ ಪುರುಗಳು. ನಂ ಯವ್ವನಾನ ನಿಮಗ್ ದಾನಾ ಮಾಡಿ, ನೀವ್ ಕಾಲು ಕುಣ್ಸಿದ್ ಕಡೆ ನಂ ತಲೇ ಮಣಿಸ್ತಿದೀವಿ. ಆದ್ರೆ ಇವೆಲ್ಲ ಹೆಚ್ ದಿನ ನಡ್ಯೊಲ್ಲ ಅನ್ನೋದು ಜ್ಞಾಪ್ಕ ಇರ್ಲಿ....ನನ್ನಾಟಕದೀ ಭಾಗಕ್ಕೆ ನಿಮ್‌ದೇ ನಾದ್ರೂ ವಿಮರ್ಶೆ ಇದ್ಯೆ?.... ಮೆಚ್ಚುಗೆ ಇದ್ಯೆ?.... ಯಾವ್ದೂ ಇಲ್ಲ. ಪೊದ್ಲ್ ಹಾಗೆ ನಮಗ್ ಬಾಯಿಲ್ದೆ ಬರೀ ಕಿವಿ ಇದ್ದಿದ್ರೆ ನನ್ ಜನ್ಮ ಜಾಲಾಡ್ತಿದ್ರಿ. ನನ್ ವಿಚಾರ, ವಿವೇಚ್ನೆ, ತರ್ಕ, ತತ್ವ ಎಲ್ಲಾನೂ ಹೊಳೇಲಿ ಹುಣ್ಸೇ ಹಣ್ ತೇದ್ಹಾಗೆ ಮಾಡ್ತಿದ್ರಿ.. ಮಾಡ್ತಿದ್ರಿ ಏನು, ನನ್ನಾಟಕ್ದಲ್ಲಾಗಿರೋದೇ ಅದು! ಅದಕ್ ನೀವೇ ಜವಾಬ್‌ದಾರ್ರು. (ವಿಚಾರ ಪರನಾಗಿ ಮೆಲ್ಲನೆ,) ಒಂದೊಂದೇ.... ಒಂದೊಂದೇ ಪರೆ ಕಳಚಿಕೊಂಡ್ ಬರ್ತಿದ್ದೆ ನಾನು....

(ಕತ್ತಲಾಗುತ್ತದೆ. ಬೆಳಕು ಬಂದಾಗ, ಸತ್ಯ ರಂಗದಲ್ಲೆಲ್ಲ ಕುಣಿದಾಡುತ್ತಿದ್ದಾನೆ. ಅವನ ಸಂತೋಷಕ್ಕೆ ಲಗಾಮಿಲ್ಲ. ಶಾಸ್ತ್ರಿ ಅರ್ಥವಾಗದೆ ನೋಡುತ್ತಿದ್ದಾನೆ. 'ಶಾಸ್ತ್ರಿ....ಶಾಸ್ತ್ರಿ' ಎಂದು ಆಗೊಮ್ಮೆ, ಈಗೊಮ್ಮೆ ಕರೆಯುತ್ತ ಅವನ ಹತ್ತಿರ ಬಂದು, ಅವನನ್ನು ಅಪ್ಪಿ ಮುದ್ದಿಟ್ಟು ನಲಿಯುತ್ತಾನೆ, ಸತ್ಯ.)

ಶಾಸ್ತ್ರಿ : ಏನಾಯ್ತಯ್ಯ ನಿಂಗೆ? (ಸತ್ಯ ಕುಣಿಯುತ್ತಾನೆ) ಏನಾಯ್ತಯ್ಯ? ('ಆಹ! ಆಹ!' ಎಂದು ಸತ್ಯನ ಕುಣಿತ ಮುಂದುವರಿಯುತ್ತೆ) ನಿಂದೊಳ್ಳೇ ಕತೆ ಆಯ್ತಲ್ಲ! ನಾ ಹೊರಟ್ಹೋಗ್ತೀನಪ್ಪ. ಏನಾಯ್ತು ಹೇಳು, ಇಲ್ದಿದ್ರೆ....

ಸತ್ಯ : ಏನೂ'ಂತ ಹೆಳ್ಲಿ ಶಾಸ್ತ್ರಿ?.... ಏನೇನೋ ಆಗ್ಹೋಯ್ತು. ನನ್ ಜಗತ್ತೆ ಝುಂಗ್ ಅಂತ ಹತ್ಕೊಂಡ್‌ಬಿಡ್ತು. ಶಾಸ್ತ್ರೀ ನನ್ ವ್ಯಕ್ತಿತ್ವಕ್ಕೇ ಒಂದ್ ಮಹಾ ವಿದ್ಯುತ್ ಸ್ಪರ್ಶ ಆಗ್ಹೋಯ್ತು.

(ಕುಣಿತ ಮುಂದುವರಿಯುತ್ತೆ.)

ಶಾಸ್ತ್ರಿ : ಒಗಟೆಲ್ಲ ಬೇಡಮ್ಮ ಸಂಗೆ....

ಸತ್ಯ : ಒಗಟಲ್ಲ ಶಾಸ್ತ್ರಿ.... ಸಂಜೀವನ್ದಲ್ಲಿ ಷೇಕ್ಸ್‌ಪಿಯರಾಗ್ಹೋಯ್ತು ಶಾಸ್ತ್ರೀ, ಷೇಕ್ಸ್‌ಪಿಯರಾಗ್ಹೋಯ್ತು; ಕಾಳಿದಾಸಾ ಆಗ್ಹೋಯ್ತು ಶಾಸ್ತ್ರೀ, ಕಾಳಿದಾಸಾ ಆಗ್ಹೋಯ್ತು !.... ನಾನು.... ನಾನೊಂದ್ ಹುಡುಗೀ ನೋಡ್‌ಬಿಟ್ಟೆ.

ಶಾಸ್ತ್ರಿ : (ಹಣೆ ಚಚ್ಚಿಕೊಂಡು) ಬಚಕೊಂಡ್ರು !

ಸತ್ಯ : ಮಾತಾಡಿಸ್ಬಿಟ್ಟೆ ಶಾಸ್ತ್ರಿ, ಮಾತಾಡಿಸ್ಬಿಟ್ಟೆ. ಹ್ಯಾಗಂತಿ? ನಾನೇ.... ನಾನೇ ಹೋಗಿ ಸೆಲ್ಫ್ ಇಂಟ್ರೊಡ್ಯೂಸ್ ಮಾಡ್ಕೊಂಡು ಮಾತಾಡಿಸ್ಬಿಟ್ಟೆ. ನಾನ್ ಕಣಯ್ಯ, ನಾನು! ಪ್ರೊಫೆಸರ್, ಎ ಮ್ಯಾರೀಡ್ ಮ್ಯಾನ್ ವಿಥ್ ಎ ಚೈಲ್ಡ್ ! ಗೊತ್ತಿದೆ ಶಾಸ್ತ್ರಿ —ನಂಗ್ ಮದ್ವೆ ಆಗಿ ಆರ್‍ವರ್ಷ ಆಯ್ತು: ಮಗೂ ಆಗ್ಮೂರ್‍ವರ್ಷ ಆಯ್ತು. ಸಂಜೀವಂದಲ್ಲಿ ಯಾರ್‍ನ್ನೂ ಯಾವಾಗ್ಲೂ ನಾನೇ ಮಾತಾಡಿಸ್ಕೊಂಡ್ ಹೋಗ್ಲಿಲ್ಲ. ಆದ್ರೀವಳ್ನ ? ಇವಳೀ ಲೋಕ್‌ದವಳಲ್ಲ ಶಾಸ್ತ್ರಿ. ಮಾತಾಡಿಸ್ದಾಗ್ಹೇಳಿದ್ಲು, ನಾನೀ ದೇಶ್‌ದವ್ಳಲ್ಲಾಂತ. ನಿಜಾ ಹೇಳ್ಬೇಕಂದ್ರೆ ಇವಳೀ ಲೋಕದವಳೇ ಅಲ್ಲ.... ಇಲ್ಲಾ ಶಾಸ್ತ್ರಿ....,ನಾನ್ ಹೇಳ್ತಿರೋದ್ರಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ನಿನ್ ಸಾಯ್ರಾಬಾನು, ಹೇಮಾಮಾಲಿನಿ, ಬಿಂದೂ, ರಾಖೀ ಎಲ್ರನ್ನೂ ಇವಳೊಂದು ಮುಗುಳ್ನಗೇ ಮುಂದೆ ನಿವಾಳಿಸ್ ತೆಗೀಬೇಕು: ಅಂಥಾ ಹೆಣ್ಣು. (ಸ್ವಲ್ಪ ಹೊತ್ತು ವಿಚಾರ, ಮೌನ) ಗೀತೇ ಎರಡ್ನೇ ಅಧ್ಯಾಯ ಓದೀ ಓದಿ, ನಾನೂ ಒಬ್ಬ ಸ್ಥಿತಪ್ರಜ್ಞ ಅನ್ನೋ ಭ್ರಮೆ ನಂಗ್ ಬಂದ್ಬಿಟ್ಟಿತ್ತು. ಪ್ರೀತಿ ಆಗ್ಲಿ, ಭಕ್ತಿ ಆಗ್ಲಿ, ಕೋಪಾ ಆಗ್ಲಿ ಯಾವ್ವ್ಯಕ್ತಿಯಾದ್ರೂ ಅದ್ ಸೆಂಟಿ ಮೆಂಟಲ್ ಅಂತ ಮೂಗ್ ಮುರೀತಿದ್ದೆ. ಈಗ್ ನನ್ ದೃಷ್ಟಿ, ಧೋರಣೆ, ಮೌಲ್ಯ ಮೀಮಾಂಸೆ ಎಲ್ಲಾ ತಲೆಕೆಳಗಾಗ್ಹೋಯ್ತು.... ಮೂರ್ತಿ ಹೇಳೋ ಮಾತು ನಿಜಾಂತನ್ಸ್ತೆ. ಈ ಜಗತ್ನಲ್ಲಿ ಎರಡು ವಸ್ತುಗಳ್ಗಾಗಿ ಎಲ್ಲಾ ಬಿಟ್ ನಿಲ್ಬಹುದಂತೆ. ಒಂದು,

ದೇವರು. ನನಗೂ ಅದಕ್ಕೂ ಸಂಬಂಧಾ ಇಲ್ಲ. ಇನ್ನೊಂದು, ಹೆಣ್ಣು. ಹೆಣ್ಣು ಅಂತ ಜನರಲೈಸ್ ಮಾಡ್ಬಾರ್ದು. ಆದರೆ ಇವ್ಳು ಈ ಪರದೇಶೀ ಹೆಣ್ಣು, ಜಾಕಲೀನ್, ಇಷ್ಟಾಗಾಗ್ ಏನ್ ಬೇಕಾದ್ರೂ ಮಾಡ್ಬೋದು. ಆಹಾ ಜಾಕಲೀನ್....ಜಾಕಲೀನ್!
(ಎಂದು ನಲಿಯುತ್ತಾನೆ.)

ಸೋಮು : (ಪ್ರವೇಶ) ಏನಣ್ಣ ಭಾಳ ರಂಗಾಗಿದೀಯ ? ಗುಂಡ್ ಗಿಂಡ್ ಆಕಿದೀಯೋ ಎಂಗೆ ?

ಸತ್ಯ : ಗುಂಡು! ಗುಂಡ್ಗೇ ಅಮ್ಲೇರ್ಸೋವಂಥಾ ಹೆಣ್ಣು, ಕಣಯ್ಯಾ.

ಸೋಮು : ಯಾರಪ್ಪ ಅದು!

ಶಾಸ್ತ್ರಿ : ಯಾರೋ ಪರದೇಶಿ ಅಂತೆ. ಬಿಳೀ ಚರ್ಮ ನೋಡಿ, ತಲೇ ಕೆಡಿಸ್ಕೊಂಡಿದಾನೆ.

ಸತ್ಯ : ಇಷ್ಟ್ ದಿವ್ಸ ನಂತರೇ ಕೆಟ್ಟಿತ್ತು: ಈಗ್ಸರಿಯಾಗಿದೆ.

ಸೋಮು : ನೀನ್ ಹೇಳೋದೇ ಕರೆಕ್ಟ್.... ಉಡ್ಗೀ ಯಾರು ಹೇಳಪ್ಪ.

ಸತ್ಯ : ಜಾಕಲೀನ್ ಅಂತ. ಹೆಣ್ಣಲ್ಲಿ ಅವ್ಳು; ಸೌಂದರ್ಯದ್ ಕಡೆ ಕುರುಡಾಗಿರೋ ನನ್ನಂಥಾವರ್ ಕಣ್ಣು.

ಸೋಮು : ಡ್ಯಾನ್ಸ್ ಕಲೀತಿದ್ಲಲ್ಲ, ಅವ್ಳಾ ?

ಸತ್ಯ : ಕಲೀತಿದ್ಲು ಅಲ್ಲ. ಈಗ್ಲೂ ಕಲೀತಿದಾಳೆ ಭರತ್‌ನಾಟ್ಯಾನ.

ಸೋಮು : ಅವ್ಳಾ! ಬುಡೂ ಬುಡು. ಈ ಊರ್ನಲ್ ಜಟಕಾ ಗಾಡಿ ಒಡ್ಯೋರೆಲ್ಲ ಅವಳತ್ರ ಓಗ್ ಬಂದವ್ರೆ. ನೀನೂ ಒಂದತ್ ರೂಪಾಯ್ ಬಿಸಾಕ್ಬುಟ್ಟು ಓಗ್ಬುಟ್ ಬರ್ಬೇಕಾಗಿತ್ತು.

(ಈ ಮಾತು ಕೇಳಿ ಸತ್ಯನ ಮುಖ ಕರ್ಕಶವಾಗುತ್ತದೆ. ಒಂದು ಕ್ಷಣ ಕಲ್ಲಿನಂತೆ ನಿಂತು, ಅವುಡುಗಚ್ಚಿ, ನಂತರ,)

ಸತ್ಯ : ನೀನ್ ಹೋಗಿದ್ಯ ಅವ್ಳ್ಹತ್ರ ?

ಸೋಮು : ನಾನೋಗಿಲ್ಲ. ಆದ್ರೂ ಗೊತ್ತು. ಅವಳತ್ರ ಓದ್ರೆ ಉಳಾ.... ಉಳಾ ಬಿದ್ದೋಯ್ತವೆ....

ಸತ್ಯ : ಥತ್ ಹಲ್ಕಾ ನನ್ಮಗ್ನೇ....

(ವಿಸ್ಮಿತ್ತ ಸತ್ಯ, ಸೋಮುವಿನ ಕಪಾಳಕ್ಕೆ ಬಾರಿಸುತ್ತಾನೆ. ಕತ್ತಲು. ದೀಪ

ಬಂದಾಗ ಹೆಗ್ಡೆ ಮತ್ತು ಶಾಸ್ತ್ರಿ ಶತಪಥ ಹಾಕುತ್ತಿದ್ದಾರೆ.)

ಹೆಗ್ಡೆ : ಶಾಸ್ತ್ರಿ, ಸತ್ಯ ಎಲ್ಹೋಗಿರ್ಬೋದು, ಕಾಣಿಸ್ತಾನೇ ಇಲ್ವಲ್ಲಾ !

ಶಾಸ್ತ್ರಿ : ಅವ್ನ ಮುಖಾ ನೋಡಿ ಮೂರ್ ದಿವ್ಸ ಆಯ್ತು, ಹೆಗ್ಡೆ.

ಸೋಮು : (ಹಾಡುತ್ತ ಪ್ರವೇಶ) ತೂ ನಹೀ ಔರ್ ಸಹೀ ಔರ್ ನಹೀ ಔರ್ ಸಹೀ....ಏನ್ರಯ್ಯಾ ಪೊಕಮ್ಮೇಲೆ ಗೂಬೆ ಕೂರಿಸ್ಕೊಂಡ್ ನಿಂತಿದೀರ! ಮಜಾ ಮಾಡೋ ವಯಸ್ನಲ್ಲಿ ಸೋಪ್ಹಾಗ್ಬುಟ್ಟಿದೀವಿ ಅಂತ ಬಿಕ್ಕೊಂಡಿದೀರ ?

ಹೆಗ್ಡೆ : ಮೂರ್ ದಿವ್ಸದಿಂದ ಸತ್ಯ ಕ್ಲಾಸ್ಗೂ ಬರ್ತಾ ಇಲ್ಲ, ರೂಮ್ನಲ್ಲೂ ಇಲ್ಲ !

ಸೋಮು : ಕ್ಲಾಸ್ಗ ಯಾಕ್ಬರ್ತಾನೇಳಿ. ಡ್ಯಾನ್ಸ್ ಕಲಿಯೋಕೋಯ್ತಾನ್ವೆ ಅವ್ನ ! ನೀವೂ ಇದೀರ ದಂಡಕ್ಕೆ. ಅದಾ ನಂ ಕ್ಲಾಸ್ನಲ್ಲಿದೋ ಉಡುಗೀರೋ!.... ಆ ಮಿಕ್ಸ್ನೋಳ್ನ ಸಿನ್ಮಾಕ್ ಬತ್ತೀಯಾಂದ್ರೆ ಉಲೀ ಆದೋಂಗಾರಾಡ್ ಬುಟ್ಳು! ಅವ್ಳಲ್ದೆ ಪ್ರೋದ್ರಿ ಸ್ನೊಬ್ಬು ಅಂತ ಎಕನಾಮಿಕ್ಸ್ನೋಳ್ನ ಕರ್ದೆ. ನುಂಗೋ ಆಂಗ್ ನೋಡ್ಕೊಂಡೋಂಟೋಯ್ತು. ಈ ಮುದೀ ಬ್ರಾಂಚ್ ಸಾವಾಸಾ ಬ್ಯಾಡಾಂತ ಪಂಟೀಕೊಪ್ಪ ಯೆಂಕ್ಟಮ್ಮನ್ ಮನೆಗೆ ಫೋನ್ ಮಾಡ್ಬುಟ್ಟೆ. ಓಬುಟ್ಟು ಪತ್ನಂತೇ ಬಂದ್ ಬುಡ್ತೀನಿ. ರಾಮಾ ಕಿಷ್ನಾಂತ ಮನೀ ಕಳಿ ಓಗಿ: ಇವತ್ತಲ್ಲ ನಾಳೆ ಬಂದೇ ಬತ್ತಾನ್ ಸತ್ಯ.

(ಇಂದು ಹೊರಡುವಾಗ ಎದುರಿನಿಂದ ವಾಚ್‌ಮನ್ ಬರುತ್ತಾನೆ. ಸೆಲ್ಯೂಟ್ ಹೊಡೆಯುತ್ತಾನೆ. ಸೋಮು ಜೇಬಿನಿಂದ ಒಂದು ರೂಪಾಯಿ ತೆಗೆದು ಅವನಿಗೆ ಕೊಟ್ಟು)

ಇವತ್ ಮೂರ್ ಗಂಟೇ ಆಫ್ಟ್ರುತ್ತಿಗ್ ಬತ್ತೀನಿ, ಗೊತ್ತಾಯ್ತು ?

ವಾಚ್‌ಮನ್: ಅಗ್ಲೀ ಸಾ. (ಸೋಮು ಹೋಗುತ್ತಾನೆ.)

ಶಾಸ್ತ್ರಿ : ನೀನೇ ಏನಯ್ಯ ರಾತ್ರಿ ವಾಚ್‌ಮನ್ ?

ವಾಚ್‌ಮನ್: ಹೌದು ಬುದ್ಧಿ.

ಹೆಗ್ಡೆ : ನೋಡು, ೭೪ನೇ ನಂಬರ್ ರೂಮ್ನೋರು, ತಕ್ಗ ಉದ್ದಕ್ಕಿದಾರಲ್ಲ..

ನಾಟಕಕಾರ: (ಪ್ರವೇಶಿಸಿ) ಏನೋ ಬಹಳ ಚಿಂತಾಕ್ರಾಂತನಾಗಿರೋ ಹಾಗಿದೆ?

ಮಾಲೀಕ: ಏನಿಲ್ಲವಲ್ಲ!

ನಾಟಕಕಾರ: ಸಿದ್ಧಾರ್ಥನಿಗೆ ಸಿಕ್ಕಿದ್ ಜೀವನ ದರ್ಶನ ಆಗಬೇಕಂತ ನಾನೂ ದಾರೀಲ್ ಹೋಗ್ತಿದ್ದೆ. ಮಳೆ ಸುರಿಯೋ ಹಾಗೆ, ಗಾಳಿ ಬೀಸೋ ಹಾಗೆ, ನದಿ ಹರಿಯೋ ಹಾಗೆ ಸ್ವತಂತ್ರವಾಗಿ, ಸ್ವೇಚ್ಛೆಯಿಂದ, ನಿರಾತಂಕವಾಗಿ ಮುಂದುವರೀತಿದ್ದೆ. ಆದರೆ ಈಗ, ಈ ಸಮಾಜ, ಈ ಸಂಪ್ರದಾಯ ಮುಖವಾಡಗಳಂತವುಗಳ್ ಅಡ್ಡ ಬಂದು........

ಸತ್ಯ: (ಉದ್ವೇಗದಿಂದ ಪ್ರವೇಶಿಸಿ) ಇಲ್ಲ: ಅದ್ಯಾವ್ದೂ ಕಣ್ಣ್ ನಾನ್ ಬಿಡಲ್ಲ. ಅವ್ರನ್ನೆಲ್ಲ ಒಂದಿನ್ನ ಅಂತ ನಾನ್ ಧಾವಿಸ್ತೀನಿ ಇಲ್ಲ. ಆದ್ರೆ.... ಆದ್ರೆ....

(ಸತ್ಯನ ಮೇಲೆ ಮಾತ್ರ ಬೆಳಕು. ನಾಟಕಕಾರ ಮಾಲೀಕ ಒಟ್ಟಿಗೆ ಸರಿಯುತ್ತಾರೆ. ಶಾಂತಿ ಪ್ರವೇಶಿಸುತ್ತಾಳೆ)

ಶಾಂತಿ.... ಶಾಂತಿ....

ಶಾಂತಿ: ನೀವು ನನ್ ಕೈ ಬಿಟ್ ಬಿಟ್ರಿ........

ಸತ್ಯ: ಇಲ್ಲ ಶಾಂತಿ, ಹಿಂದಿನ ನಿನ್ ಕಥೆ ಹೇಳು.

ಶಾಂತಿ: ಕೂತಾಗ, ನಿಂತಾಗ, ಆಡ್ತಾ ಇದ್ದಾಗ, ಊಟ ಮಾಡ್ತಾಗ ಅಪ್ಪ, ಅಮ್ಮ, ನಾಚಿಕೆ ಹಿಡಿದಾಗ ಕೂಡ ನಿಮ್ಮನ್ನೇ ನೆನೆದಿದ್ದೆ. ನೀವು ನನ್ ಬಿಟ್ಟು ಅವಳ ಜೊತೆ ಹೋಗ್ತಿದ್ದೀರೋ ಏನೋ ಅಂತ ನನಗೆ ಹೆದರಿಕೆ ಆಗುತ್ತೆ.

ಸತ್ಯ: ನಿನಗ್ಯಾಕೆ ಅವಳ ಭಯ? ಅವರೇನೂ ಅಪರಿಚಿತರಲ್ಲ. ನನ್ ಈ ಜನ್ಮದಲ್ಲಿ ಅವಳನ್ನೊಬ್ಬಳನ್ನೇ ಮಾಡ್ಕೋಬೇಕಾಗುತ್ತೆ.

ಶಾಂತಿ: ಅಪ್ಪ, ಅಮ್ಮನ್ನ ನೋಡಿ ನೋಡಿ: ಈ ದಿನ ನೀವು ನನ್ನ ಮರೆತು ಹೋಗ್ಬಿಟ್ರಿ ಅಂತ?

ಸತ್ಯ: ಆಗಲ್ಲ ನಾನು ಹೇಳ್ತೀನಿ ಕೇಳು. ಒಂದು ಅವಕಾಶ ಕೊಟ್ಟೆ. ಅವಳಿಗ್ ನಿಮ್ಮ ಕಥೆ ಹೇಳ್ತಿದ್ದೆ. ಕಾಪಾಡ್ತೀನಿ ಅಂತ ಕೊಟ್ ಒಬ್ಬ ಮಾತ್ನ ನನ್ ಮರೆತಿಲ್ಲ ನಾನು.

ಶಾಂತಿ : ಮತ್ತವಳಿಗೆ ಹೇಳಿರೋ ಮಾತು: ಯಾವತ್ತಾದ್ರೂ, ಹ್ಯಾಗಾದ್ರೂ ನೀನ್ ಬರೋದಾದ್ರೆ, ನನ್ ಮನೇ ಬಾಗ್ಲು ನಿನಗಾಗಿ ತೆರ್ದಿರುತ್ತೆ, ಅಂತ ?

ಸತ್ಯ : ಅದೂ ನಿಜ. ಆದರೆ ಅವಳು ಬರೋ ಹೆಣ್ಣಲ್ಲ.

ಶಾಂತಿ : ಅವಳು ನಿಮ್ಮನ್ ಪ್ರೀತಿ ಮಾಡಿದ್ದುಲ್ಲ.... ?

ಸತ್ಯ : ಹಾಗಂತ ಅಂದ್‌ಕೊಂಡಿದೀನಿ.

ಶಾಂತಿ : ಅವಳು ನಿಮ್ಗೆ ಕಾಗ್ದ ಬರೀತಾಳೆ ?

ಸತ್ಯ : ಬರೀಭೌದು.

ಶಾಂತಿ : ನೀವೂ ಅವಳಿಕ್ಕಾಗ್ದ ಬರೀತಿರಿ ?

ಸತ್ಯ : ಬರೀತಿನಿ.

ಶಾಂತಿ : (ದುಃಖ ಧ್ವನಿಯಿಂದ) ನೀವ್ ಕಾಗ್ದ ಬರ್‍ಯೋದ್ ಹೇಗೇ'ಂತ ನಂಗೊತ್ತಿಲ್ವೆ ? ....ನಿಂ ಕಾಗ್ದ ಓದಿದ್ ಯಾವ ಹುಡುಗೀ ತಾನೆ ನಿಂ ಹತ್ರ ಓಡಿಬರೋ ಮನಸ್ಸನ್ನ ತಡೆ ಹಿಡ್ಯೋಕ್ ಆಗುತ್ತೆ ?........

ಸತ್ಯ : ಅಳಬೇಡ ಶಾಂತೂ, ನಂಗಿದೆಲ್ಲ ಸೇರೊಲ್ಲ.

ಶಾಂತಿ : ಒಂದು.... ಒಂದೇ ಒಂದ್ಮಾತ್ ಕೊಡ್ತೀರ ನೀವು ?

ಸತ್ಯ : ಏನ್ಹೇಳು.

ಶಾಂತಿ : ನೀವಾಗಿ ಅವಳಿಗ್ ಕಾಗ್ದ ಬರೀಬೇಡಿ. ನೀವಾಗಿ ಈ ದೇಶ ಬಿಟ್ ಹೋಗೋ ಪ್ರಯತ್ನ ಮಾಡಬೇಡಿ.

ಸತ್ಯ : (ಚಿಂತಾಮಗ್ನನಾಗಿ, ವಿಹ್ವಲನಾಗಿ, ಕಡೆಗೆ ನಿರ್ಣಯಿಸಿದವನಂತೆ ನಿಟ್ಟುಸಿರಿನೊಡನೆ) ಫ್ಲೂ. ಸರಿ, ಹಾಗೇ ಆಗ್ಲಿ. ಆದರೆ, ಶಾಂತಿ, ಇದು ಎಂಥ ನರಕಯಾತನೆ ಅಂತ ನಿಂಗೊತ್ತೇನು ? ಚಿಂತೆಯಿಲ್ಲ, ಅನುಭವಿಸ್ತೀನಿ, ಆದರೊಂದ್ಮಾತು –ಅಗ್ನಿಸಾಕ್ಷಿಯಾಗ್ ಕಯ್ ಹಿಡಿದಿರೋ ನಿನ್ನನ್ನಡಸ್ಕೊಳ್ಳೋ ಹಾಗೆ , ನಾಳೆ ಒಂದ್ ಪಕ್ಷ ಅವ್ಳ್ ನನ್ ಹತ್ರ ಬಂದ್ರೆ ಅವಳ್ನೂ ನಡಸ್ಕೋಬೇಕಾಗುತ್ತೆ.

(ಕತ್ತಲಾಗುತ್ತದೆ. ಶಾಂತಿ ಬಿಕ್ಕಿ ಬಿಕ್ಕಿ ಅಳುವ ಸದ್ದು ಒಂದು ಕ್ಷಣ. ಮತ್ತೆ

ದೀಪ ಹತ್ತುವಾಗ ಮುದುಕ ಶಿಲಾಪ್ರತಿಮೆಯಂತೆ ನಿಂತಿರುತ್ತಾನೆ. ನಾಟಕಕಾರ ಚಿಂತಿಸುತ್ತ)

ನಾಟಕಕಾರ: ಪ್ಚ್........... ನಾಟಕ ಎಲ್ಲಿ ಶುರೂ ಆಗಬೇಕಾಗಿತ್ತೋ ಅಲ್ ಮುಗ್‌ದ್ಹೋಯ್ತು ! .... ಅಮೇಲೆ ಅಮೇರಿಕಾದವಳು ಕಾಗದ ಬರೀಲಿಲ್ಲ; ಇಂಡಿಯಾ ಕಡೆ ಮುಖ ಹಾಕ್ಲಿಲ್ಲ. ಅಂದ್ಮೇಲೆ ಸತ್ಯ–ಶಾಂತಿ, ಗಂಡ–ಹೆಂಡ್ತಿ ಇಬ್ರೂ ಸುಖವಾಗಿದ್ರು. ಅವನು ಕಯ್ ಒಡಿದವಳ್ನ ಕಡೇವರ್ಗೂ ಕಾಪಾಡ್ದ. ಅದ್ರಿಂದ ಅಂಥ ನಾಟಕ ಬರ್ದಿರೋ ನಾನು ನೀತಿವಂತ. ನನಗೆ ನೀತಿಪ್ರಜ್ಞೆ ಇದೇ'ಂತ ನಿಂ ಶಿಫಾರ್ಸು ! ನಿಜ, ಸತ್ಯ ಅಮೇಲೂ ಬದುಕಿದ್ದ. ಬಹಳ ಕಾಲ ಬದುಕಿದ್ದ. ಆದರದೆಂಥ ಬದುಕು! ಮನಸ್ನಲ್ಲಿ ಜಾಕಲೀನ್ ತುಂಬಿಕೊಂಡಿದ್ಲು. ಅವ್ನು ತನ್ನಾಸೇನ, ಬಯಕೇನ ಮುಚ್ಚಿಟ್ಕೊಂಡ. ಅಂದ್ರೇನರ್ಥ ? ಅವ್ನು ತನ್ ವ್ಯಕ್ತಿತ್ವಾನ ಹೊರಗ್ ತೋರ್‍ಸ್ಕೊಳ್ಳಿಲ್ಲ. ಸತ್ಯ ಸತ್ಯಾನೇ ಹೇಳ್ದ. ಆದ್ರೆ ಅವಂಗೆ ಸತ್ಯದ್ ಸಾಕ್ಷಾತ್ಕಾರ ಆಗ್ಲಿಲ್ಲ. ಅವ್ನ್ ಆ ಸತ್ಯದ್ ಕೊಲೆ ಮಾಡಿದ. ಆತ್ಮಹತ್ಯೆ ಮಾಡ್ಕೊಂಡ.

ಸತ್ಯ : (ಇದ್ದಕ್ಕಿದ್ದಂತೆ ಪ್ರವೇಶಿಸಿ) ಇಲ್ಲ, ಇಲ್ಲ, ನಾನ್ ಸತ್ಯದ್ ಕೊಲೆ ಮಾಡಿಲ್ಲ. ಆತ್ಮಹತ್ಯೆ ಮಾಡಿಕೊಂಡಿಲ್ಲ. ತಪ್ಪೆಲ್ಲ ನಿಂದು. ನೀನ್ನಾಟಕ್ಕಾರ. ನೀನ್ ಸೃಷ್ಟಿಕರ್ತ. ನೀನಾಡಿಸಿದ್ಹಾಗಾಡೋ ಸೂತ್ರದ್ ಬೊಂಬೆಗಳು ನಾವು. ನಿಂಗೆ ನನ್ ಸತ್ವಪರೀಕ್ಷೆ ಮಾಡಬೇಕೂಂತನ್ಸಿದ್ರೆ, ನಿಂಗ್ ನಿಜವಾದ್ ನೈತಿಕ ಧೈರ್ಯ ಇದ್ದಿದ್ರೆ ನೀನ್ ಪಲಾಯ್ನ ಮಾಡಿ, ತಪ್ಪಿಸ್ಕೋತಿರ್ಲಿಲ್ಲ.

ನಾಟಕಕಾರ: ನಾನ್ ಪಲಾಯ್ನ ಮಾಡಿದ್ನೆ !

ಸತ್ಯ : ಹೌದು.... ಮುಂದಿನ ಜನಾಂಗದ್ ಭವಿಷ್ಯ ನನ್ ಕಯ್ಲಿಟ್ಕೊಂಡಿರೋ ಮನುಷ್ಯ ನಾನು. ನನ್ ಸಾಮಾಜಿಕ ಸ್ಥಾನಮಾನಾ ದೊಡ್ದು. ಗಂಡ ಆದೋನು, ತಂದೆ ಆದೋನು ನಾನು. ಆದ್ರೂ ನಂಜಾತಿ, ಕುಲಗೋತ್ರ, ಹೆಂಡ್ತೀ ಮನೆಮಠ, ಬಂಧೂ ಬಳಗ, ಸ್ಥಾನಮಾನ ಎಲ್ಲಾ ಮರ್ತು ಆ ಹುಡುಗಿ ಜತೆ ಸುತ್ತಾಡ್ದೆ.

ಯಾರೇನ್ಹೇಳಿದ್ರೂ ಕೇರ್ ಮಾಡೊಲ್ಲ ಅಂದೆ. ಆದ್ರೆ ನೀನು, ಹೆನ್‌ಪೆಕ್ಡ್ ಸೂತ್ರಧಾರ; ಆ ಹುಡುಗೀನ ಅಮೆರಿಕಾದ್ ಹುಡುಗೀ ಮಾಡಿ, ಅವಳ್ಕೈಲಿ ಅಮೆರಿಕಾಗ್ ಹೋಗೋ ಏರ್ ಟಿಕೆಟ್ ಕೊಟ್ಟು ಆಮೇಲವಳ್ನ ನಂಗ್ ತೋರಿಸ್ದಿ.... ಹೋಗ್ಲಿ, ಅಪ್ಳ್ ಅಮೆರಿಕಾ ತಲ್ಪಿದ್ಮೇಲಾದ್ರೂ ನಂಗ್ ಕಾಗದಾ ಬರ್ದಿದ್ರೆ....ಇಲ್ಲಾ; ನೀನ್ ಎಲ್ಲಾ ಕಡೆ ತಪ್ಪಿಸ್ಕೊಂಡಿ.

(ಹೌದು ಎಂಬಂತೆ, ನಾಟಕಕಾರ ಮುಂದಿನ ಪ್ರತಿಯೊಂದು ಮಾತಿಗೂ ತಲೆ ಯಾಡಿಸುತ್ತಾನೆ. ಒಮ್ಮೊಮ್ಮೆ ಮೆಲ್ಲನೆ, 'ಹೌದು, ಹೌದು' ಎನ್ನುತ್ತಾನೆ.)

ನಿಜ್ವಾಗ್ಲೂ ನನ್ ಸತ್ವ ಪರೀಕ್ಷೆ ಮಾಡ್ಬೇಕಾಗಿದ್ದಿದ್ರೆ ಇದೇ ಊರವಳ್ನ ನನಗ್ ತೋರಿಸ್ಬೇಕಾಗಿತ್ತು. ನೀ ತೋರಿಸ್ಲಿಲ್ಲ. ಯಾಕಂದ್ರೆ.... ನಿಂಗ್ ಹೆದರ್ಕೆ, ನಿನ್ನಪ್ಪಾ ಅಮ್ಮನ್ ಹೆದರ್ಕೆ, ನಿನ್ ಕನಡಾ ಪಂಡಿತರ್ ಹೆದರ್ಕೆ, ನಿನ್ ತಾತನ್ ಕಾಲದ್ ಮೌಲ್ಯ ಗಳ್ ಹೆದರ್ಕೆ.... ಬಂಧೂ ಬಳಗದ್ದು.... ಪಾಪಾ ಪುಣ್ಯದ್ದು.... ತಂಟೇ ತಕರಾರಿದ್ದು.... ಒಂದೇ, ಎರಡೇ ? ಸಾವ್ರ ಹೆದರ್ಕೆ ನಿಂಗೆ.

ನಾಟಕಕಾರ: (ಬಹು ಮೆಲ್ಲನೆ) ಹೌದು.... ಹೌದು, ನಂಗ್ ಹೆದರ್ಕೆ !

ಸತ್ಯ : ನನ್ ಪಾತ್ರದ್ ಕೊಲೆ ಮಾಡಿದೋನು ನೀನು ! ನನ್ ಕೊಲೆ ಮಾಡೋದರ್ ಮೂಲ್ಕ ಆತ್ಮಹತ್ಯ ಮಾಡ್ಕೊಂಡೋನು ನೀನು! ಈ ಜನಜ್ಜತೆ, ಈ ಸಮಾಜಜ್ಜತೆ, ಹಳಸಿದ್ ಮೌಲ್ಯಗಳನ್ ಕೊಂಡಾಡೋ ಈ ಮೂದಿಗೂಬೆ ಜತೆ ಹೊಂದಾಣಿಕೆ ಮಾಡ್ ಕೊಂಡಿರೋನು ನೀನು !

ನಾಟಕಕಾರ: ಒಪ್ದೆ, ಒಪ್ದೆ.... ತಪ್ ನಂದೆ.... ನೀನ್ ಹೇಳಿದ್ ಸತ್ಯ; ನಿನ್ ಮಾತ್ಕೇಳ್ತೀನಿ.... ಏನ್ಮಾಡ್ಲಿ ಹೇಳು.... ಏನ್ ಮಾಡ್ಲಿ ?

ಸತ್ಯ : ಕುರುಕ್ಷೇತ್ರ ಯುದ್ಧದಲ್ಲಾದ್ ಕೊಲೇ ಪಾಪ ಪರಿಹಾರ ಮಾಡ್ ಕೊಳ್ಳೊಕೇನ್ಮಾಡ್ಬೇಕೂಂತ ಧರ್ಮರಾಯ ಕೇಳ್ದಾಗ, ವೇದವ್ಯಾಸ ಹೇಳಿದ್ನಂತೆ, ಅಶ್ವಮೇಧಯಾಗಾ ಮಾಡೂಂತ. ಹಾಗೇ ನೇವೇಯೇ. ನೀನೂ ನನ್ ಕೊಂದ್ ಪಾಪಾನ ಅರ್ಥಾತ್,

ನಿನ್ ಆತ್ಮಹತ್ಯೆ ಮಾಡಿಕೊಂಡ ಪಾಪಾನ ಹೊದ್ದು....(ಮುದುಕನ ಕಡೆ ಕ್ರೂರವಾಗಿ ನೋಡುತ್ತ,) ಆ ಸಂಪ್ರದಾಯದ್ ಹಳಸಿದ್ ಮೌಲ್ಯಗಳನ್ ಪ್ರತಿನಿಧಿಸೋ ಈ ಮುದಿಗೂಬೇನ್ ಕೊಂದು ಪರಿಹಾರಾ ಮಾಡ್ಕೊ....

ನಾಟಕಕಾರ: ಆತ್ಮಹತ್ಯೆ ಮಾಡಿಕೊಂಡ ಪಾಪಕ್ಕೆ....

ಸತ್ಯ : ಕೊಲೆ ಪರಿಹಾರ.... ಆತ್ಮಹತ್ಯೆ ಮಾಡ್ಕೊಂಡ್ ಪಾಪಕ್ಕೆ....

ನಾಟಕಕಾರ: ಕೊಲೆ ಪರಿಹಾರ....ಕೊಲೆ ಪರಿಹಾರ....

(ಎನ್ನುತ್ತ ಮುದುಕನ ಕತ್ತು ಹಿಸುಕುವವನಂತೆ ಧಾವಿಸುತ್ತಾನೆ.)

ಟಿ. ವಿ. ಹೆಗಡೆ

ಕೆಂಪು ಸೇನೆ

ಮೊನ್ನೆ,
ಅಪ್ಪ ಕಣ್ಮುಚ್ಚಿದಾಗ—
ಮುಂಡೆಯರ ದಂಡೊಂದು
ಸಂತೈಸಲೆಂದು ಬಂದು
ಅಮ್ಮ ಸಕೇಶಿಯಾಗಿರುವದ ನೋಡಿ,
ಹಾಗೆ ಹೀಗೆ ಮತ್ತೊಂದು
(ನಮಸ್ಕಾರಕ್ಕೆ ಯೋಗ್ಯಳಲ್ಲ) ಮಗುದೊಂದು
ಅಂದಾಗ—
ಊ
'ನಿಮ್ಮ ತಲೆ ಬೋಳಿಸ್ತು' ಅನ್ನಲಿಲ್ಲ
ಅಮ್ಮ.

ಎಚ್. ವಿ. ಶ್ರೀನಿವಾಸ ಶರ್ಮ

ಸಂಕ್ರಮಣ-೧೩ರಲ್ಲಿ ಬಂದ ಲೇಖನಕ್ಕೆ ಪ್ರತಿಕ್ರಿಯೆ

ಎಂ. ಜಿ. ಕೃಷ್ಣಮೂರ್ತಿಯವರ “ಐದು ವಚನಗಳು”

ಇತ್ತೀಚಿನ ವಿಮರ್ಶೆಯ ಧಾಟಿ ಎಂದರೇ ಹೀಗೆ :

(ಅ) ಇಲ್ಲಿ ನೋಡಿ ಇದು ಗಮನಾರ್ಹ, ಗಮನಿಸಬೇಕು, ಹೀಗೆ ಸೂಚಿಸುತ್ತದೆ. ಇಲ್ಲಿ ಕುತೂಹಲ ಕೆರಳಿಸುತ್ತದೆ. ಈ ಪದದ ಮೇಲೆ ಒತ್ತು ಬೀಳುತ್ತದೆ. ಇದು ವಿಚಾರಾರ್ಹವಾದುದು– ಇದು ಒಂದು ಬಗೆಯಲ್ಲಿ ಕವನವನ್ನು ಹತ್ತಿರಕ್ಕೆ ತಂದು ತೋರಿಸುವ ಮಾರ್ಗ.

(ಆ) ಸಾಲುಸಾಲುಗಳನ್ನು ಓದುವಾಗ, ಅಸಮಯಕ್ಕೆ, ಆಯಾಯ ಕೆಲವು ಸ್ವತಂತ್ರ ಪದಗಳಿಗೆ, ಇಡಿಯಾದ ಪದ್ಯಕ್ಕೆ ಹೊಂದಿಸಿ ಹೇಳುವ ವಿಧಾನ ಒಂದು ಜಾಣತನ. ಇದು ಒಂದು ರೀತಿ ತಂತ್ರದ ಬೆಳವಣಿಗೆ.

(ಇ) ಒಬ್ಬರ ಒಂದು ಕವನವನ್ನೋ, ಒಂದು ಕವನದ ಭಾಗವನ್ನೋ, ವಿಶ್ಲೇಷಿಸುತ್ತಾ ಮತ್ತೊಬ್ಬರ ಕವನವನ್ನೋ, ಅವರ ಧಾಟಿಯನ್ನೋ, ನಡುವೆ ನೆನಪು ಮಾಡಿಕೊಡುತ್ತಾ, ವಿಶ್ಲೇಷಿಸಬೇಕಾದ ಕವನ ಹಾಗೂ ಕವಿಯನ್ನೇ ಮರೆತು ತಮ್ಮ ವಿಮರ್ಶಾ ಬುದ್ಧಿಯ ವ್ಯಾಪಕತೆಯ ಪ್ರದರ್ಶನ ಚಿಪ್ಪಿನಲ್ಲಿ ಆ ಕವನದ ಬಗ್ಗೆ ತಮಗಿರುವ ಅಜ್ಞಾನ ಪ್ರಜ್ಞೆಯನ್ನು ಅಡಗಿಸಿಕೊಳ್ಳುವುದು.

(ಈ) ಹೇಳಬೇಕಾದ ಮಾತಿನಲ್ಲಿ ಇಲ್ಲದ ಸಲ್ಲದ ಕೆಲವೇ ಸಿಡಿಬಾಂಬಿನಂಥ ಅತ್ಯುತ್ತಮ ಉತ್ತೇಜಕದ ಮಾತುಗಳನ್ನು ಜೋಡಿಸಿ, ಇತ್ತೀಚಿನ ಬರಹಗಾರರಲ್ಲಿ ಇವರೊಬ್ಬರು ಗಮನಾರ್ಹರಾದವರೆಂದೋ, ಬೆಳೆಯುವ ಕವಿಯೆಂದೋ, ಮಾತು ಉಡಾಯಿಸಿ ಬೆನ್ನು ತಟ್ಟುವುದಕ್ಕೆ ಕಾರಣವಾದದ್ದು ಅವರ ಬಗ್ಗೆ ‘soft corner’ ಇರುವುದೂ, ‘nice gentleman’ ಆಗಿರುವುದೂ ‘ಗುಂಪುಗಾರಿಕೆ’ ಮನೋಭಾವ........ ಇತ್ಯಾದಿ.

ಇಷ್ಟಾದ ಮೇಲೆ ಈಗ (ಆ) ಭಾಗದ ಒಂದು ವಿಮರ್ಶನಾ ಧಾಟಿಯಿಂದ ಬರಬಹುದಾದ ಅಪಾಯವನ್ನು ತೋರಿಸುವುದೇ ಈ ಲೇಖನದ ಗುರಿ.

ಹಳಗನ್ನಡದ ಸಾಹಿತ್ಯವನ್ನು ಕುರಿತು ಚರ್ಚಿಸುವುದು, ಮಾತಾಡುವುದು, ವಿಮರ್ಶಿಸುವುದು, ಕೇವಲ ಕೆಲವೇ ಸಾಹಿತಿಗಳ ಹಕ್ಕೇನಲ್ಲದಿದ್ದರೂ, ಆಂಗ್ಲ ಸಾಹಿತ್ಯವನ್ನು ಅಭ್ಯಸಿಸಿದವರು ಆಯಾ ಕಾಲ ಕಾಲದ ಕನ್ನಡ ಕವಿ, ಹಳೇ ಸಾಹಿತ್ಯ ಹಾಗೂ ಯುಗಧರ್ಮ, ಪರಿಸರದ ಆಳಕ್ಕೆ ಮುಳುಗುವ ಅಭ್ಯಾಸ ವನ್ನು ಬಿಟ್ಟು, ಆಂಗ್ಲ ಸಾಹಿತಿಗಳ ವಿಮರ್ಶನ ಬುದ್ಧಿಯ ಕಪ್ಪು ಕನ್ನಡಕದಲ್ಲಿ ನಮ್ಮ ಹಳೇ ಕನ್ನಡ ಕವಿ ಹಾಗೂ ಸಾಹಿತ್ಯವನ್ನು ನೋಡುವುದು, ಜಗತ್ತೆಲ್ಲಾ ಕತ್ತಲೆನ್ನುವುದು, ದಡ ಹಿಡಿದು ಈಜು ಕಲಿಯುವುದು ಒಂದೇ ಕ್ರಿಯೆ ಎನ್ನ ಬಹುದು.

ಉದಾಹರಣೆಗೆ, ಪ್ರಾಯೋಗಿಕ ವಿಮರ್ಶೆಯಲ್ಲಿರುವ 'ಐದು ವಚನಗಳ ವಿಶ್ಲೇಷಣೆ' ಎಂ. ಜಿ. ಕೃಷ್ಣಮೂರ್ತಿಯವರ ಲೇಖನ (ಚಂದ್ರಶೇಖರ ಪಾಟೀಲರ ಕನ್ನಡ ಅನುವಾದ) ಸಾಕ್ಷಿ. ಅವರು ಆರಿಸಿರುವ ವಚನಗಳಲ್ಲಿ ಒಂದು:

ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು
ಶಶಿಯೊಳಗಣ ರಸದ ರುಚಿಯಂತೆ ಇದ್ದಿತ್ತು.
ನನೆಯೊಳಗಣ ಪರಿಮಳದಂತೆ ಇದ್ದಿತ್ತು.
ಕೂಡಲಸಂಗಮ ದೇವರ ನಿಲವು ಕನ್ನೆಯ ಸ್ನೇಹದಂತಿದ್ದಿತ್ತು.

ವ್ಯಾಕರಣದ ಅರ್ಥ ಸಂದಿಗ್ಧತೆಯೂ ಕವನದ ಅರ್ಥವನ್ನು ಹೇಗೆ ಹೆಚ್ಚಿಸುತ್ತದೆ ಎಂಬುದಕ್ಕೆ ಈ ವಚನವನ್ನು ನಮ್ಮ ಮುಂದೆ ಇಡುತ್ತಾರೆ. ಮೊದಲಿಗೆ ಅವರ ವಿಚಾರ ಸರಣಿ ನೋಡಬಹುದು.

(A) ಮೂರ್ತಿಯವರು ಇದರ ರಚನಾ ವಿನ್ಯಾಸವನ್ನು ಕುರಿತು ಹೇಳುತ್ತ

(೧) ಕವನವು ಯಾವ ನಾಮಪದವನ್ನೂ ನಿರ್ದೇಶಿಸುವುದಿಲ್ಲ.

(೨) ನಪುಂಸಕ ಲಿಂಗದ ಸೂಚಕವಾದ 'ಇದ್ದಿತ್ತು' ಎಂಬ ಕ್ರಿಯಾ ಪದದ ಪುನರುಕ್ತಿಯು ವ್ಯಾಕರಣದ ಅರ್ಥ ಸಂದಿಗ್ಧತೆಯ ಕಡೆಗೆ ಮತ್ತೆ ಮತ್ತೆ ಲಕ್ಷ್ಯ ಸೆಳೆಯುತ್ತದೆ.

(೩) 'ಅಂತೆ ಇದ್ದಿತ್ತು' ಹಾಗೂ 'ಇದ್ದಿತ್ತು' ಅವುಗಳ ನಡುವೆ ಬಹಳ ಅಂತರವಿದೆ.

—ಎಂಬುದರ ಕಡೆ ಲಕ್ಷ್ಯ ಎಳೆಯುತ್ತಾರೆ. ಈಗ ಈ ಅವಲೋಕನದ ಸಾರ್ಥಕ್ಯದ ಕಡೆ ಗಮನವಿಡಬಹುದು.

(೧) ವಚನದಲ್ಲಿ ನಡೆಯುವ ನಾಲ್ಕು ಸಾಲಿನ ನಾಲ್ಕು ಕ್ರಿಯೆಗಳೂ 'ದೇವರ ನಿಲುವು' ಎಂಬುದಕ್ಕೆ ಅನುಸರಿಸಿ ನಡೆಯುವುದರಿಂದ 'ನಿಲುವು' (ಇರುವ ಸ್ಥಿತಿ, ನೆಲೆ, ನಿಲುವಿಕೆ, existence) ಪದ ಆ ಕ್ರಿಯೆಗಳ ನಾಮಪದವಾಗಿ ನಿಲ್ಲುತ್ತದೆ. ಹಾಗೂ ನಾಮಪದವನ್ನೇ ನಿರ್ದೇಶಿಸುತ್ತದೆ.

(೨) 'ದೇವರ ನಿಲುವು' ಎಂಥದೆಂಬುದನ್ನು ನಾಲ್ಕು ಬೇರೆ ಬೇರೆಯಾದ ಆದರಲ್ಲೂ ತಮ್ಮ ಕಾಲದ ಅನುಭವಕ್ಕೆ ಸಮೀಪದ ಸರ್ವಸಾಮಾನ್ಯ ಬಳಕೆ ಉಪಮೆಗಳಿಂದ ತೋರಿಸುವುದಕ್ಕಾಗಿ 'ಇದ್ದಿತ್ತು' ಪದದ ಸಾರ್ಥಕತೆ ಪಡೆಯುವುದಲ್ಲದೆ 'ನಿಲುವು....ಇದ್ದಿತ್ತು.' ಎಂದು ಪುನರುಕ್ತಿ ಓದಿಕೊಂಡಾಗ ವ್ಯಾಕರಣದ ಅರ್ಥಸಂದಿಗ್ಧತೆಯ ಕಡೆಗೆ ಲಕ್ಷ್ಯ ಸೆಳೆಯಲಾರದು.

೩) 'ಇದ್ದಿತ್ತು' ಎಂಬುದು ಒಂದು ನಿರ್ದಿಷ್ಟತೆ ಹಾಗೂ ಸಾರೂಪ್ಯವನ್ನು ತೋರಿಸಿದರೆ, 'ಅಂತೆ ಇದ್ದಿತ್ತು' ಎಂಬುದು ಬರೀ ಸಾದೃಶ್ಯ ಅಥವಾ ಹೋಲಿಕೆಯನ್ನು ತೋರಿಸುತ್ತದೆ—ಈ ಹೇಳಿಕೆಯನ್ನು ವಿಚಾರಕ್ಕೆ ಒಳಗು ಮಾಡಬಹುದು.

ಇಲ್ಲಿಯ ಪದಗಳಿಗೆ ಅಂತರವನ್ನು ಕಲ್ಪಿಸಿ ನೋಡುವುದೇ ಮೊದಲ ತಪ್ಪು ಹೆಜ್ಜೆ. 'ಕಿಚ್ಚಿನಂತಿದಿತ್ತು' ಎಂಬುದಕ್ಕೆ 'ರುಚಿಯಂತೆ ಇದ್ದಿತ್ತು' ಎಂಬುದಕ್ಕೂ ಇರಬಹುದಾದ ಒಂದರ ನಿರ್ದಿಷ್ಟತೆ, ಸಾರೂಪ್ಯ ಕ್ರಿಯೆಗೂ, ಮತ್ತೊಂದರ ಸಾದೃಶ್ಯ, ಹೋಲಿಕೆ ಕ್ರಿಯೆಗೂ ಇದೇನು ಅಂತರ ಇರುವುದೋ ಅದು ಅಸ್ಪಷ್ಟ.

ಕಿಚ್ಚಿನಂತೆ ಇದ್ದಿತ್ತು— (1)
ರುಚಿಯಂತೆ ಇದ್ದಿತ್ತು
ಪರಿಮಳದಂತೆ ಇದ್ದಿತ್ತು
ಸ್ನೇಹದಂತೆ ಇದ್ದಿತ್ತು— (4)

ಒಂದು ಮತ್ತು ನಾಲ್ಕನೇ ಸಾಲನ್ನು ಜಿಡಿಸಿ ಬರೆದಾಗ ಅರ್ಥದಲ್ಲಿ ಅಂತರವೇ ಇರಬಹುದೆಂಬ ಯೋಚನೆ ಬರುತ್ತದೆ. ಈ ಎರಡು ಸಾಲುಗಳು ಉದ್ದವಾಗಿ, ಅವುಗಳ ಅಯುಕ್ತಾನುಸಾರವಾಗಿ ಎರಡು ಮತ್ತು ಮೂರನೆ ಸಾಲುಗಳನ್ನು

ಹಿಗ್ಗಲಿಸಿ, ಸೌಲಭ್ಯಕ್ಕಾಗಿ ಬಿಡಿಸಿ ಬರೆದಿರುವ ವಚನದ ಧಾಟಿಯೇ ಹೊರತು. ಈ ಪದಗಳ ಮೇಲೆ ಒತ್ತು ಕೊಟ್ಟು ನೋಡುವ, ವಿಶೇಷ ಅರ್ಥ ಇರುವ, ಕ್ರಿಯೆ ನಡೆದಿಲ್ಲ ಎಂಬುದು ಸುಲಭ ಗ್ರಾಹ್ಯ. ಇದಕ್ಕೆ ಬೇರೆಬೇರೆಯವರು ಸಂಪಾದಿಸಿ ಅಚ್ಚು ಹಾಕಿಸಿರುವ ವಚನ ಸಂಗ್ರಹಗಳನ್ನೂ ಅವುಗಳ ಪಾಠಾಂತರವನ್ನೂ ಗಮನವಿಟ್ಟರೆ ಸುಸ್ಪಷ್ಟ.

ಇದಕ್ಕೆ ಬಸವಣ್ಣನವರದೇ ಮತ್ತೊಂದು ವಚನವನ್ನು ನೋಡಬಹುದು:

ಮರೀಚಿಯೊಳಡಗಿದ ಬಿಸಿಲಿನಂತಿದ್ದಿತ್ತು,
ಕ್ಷೀರದೊಳಗಣ ತುಪ್ಪದಂತೆ ಇದ್ದಿತ್ತು,
ಚಿತ್ರಕನೊಳಡಗಿದ ಚಿತ್ರಪಟದಂತಿದ್ದಿತ್ತು,
ಅಲಿಯೊಳಗಣ ತೇಜದ ಗೋಪ್ಯದಂತಿದ್ದಿತ್ತು,
ನುಡಿಯೊಳಡಗಿದ ಅರ್ಥದಂತಿದ್ದಿತ್ತು,
ಕೂಡಲಸಂಗಯ್ಯಾ 'ನಿಮ್ಮ ನಿಲವು'.

B. ನನ್ನ ಲೇಖನದ ಮತ್ತೊಂದು ಭಾಗ.

"ಇದು ಉಪಮೆಯಾಗಿರುವುದರಿಂದ ಕೆಲಸಾರೆ ಹೋಲಿಕೆ ಅಸಮರ್ಪಕವಾಗಬಹುದೆಂಬುದನ್ನು ಸೂಚಿಸುತ್ತದೆ."— ಮೂರ್ತಿಯವರ ಈ ಮಾತಿನ ಸತ್ಯತೆಯನ್ನು ವಿಚಾರಮಾಡಬಹುದು.

(೧) " 'ಉದಕ' – 'ಕಿಚ್ಚು': ಪಂಚಭೂತಗಳಾಗಿ ಪರಸ್ಪರ ಸಂಬಂಧ ಹೊಂದಿವೆ. 'ಬೈಚಿಟ್ಟ' ಕ್ರಿಯಾಪದದಿಂದ ಅವು ಬಂಧಿಸಲ್ಪಟ್ಟಿವೆ. ಆದರೆ ಅವುಗಳ ಗುಣಧರ್ಮಮಾತ್ರ ಪರಸ್ಪರ ವಿರುದ್ಧ."

—ಇದು ಮೂರ್ತಿಯವರ ಆಧುನಿಕ ಆಂಗ್ಲವಿಮರ್ಶನ ಅನುಕರಣ ಧಾಟಿ ಇರಲಿ. ಇದೊಂದು ವಿರುದ್ಧಮಾರ್ಗದಲ್ಲಿ ತಿರುಚಿದ ಅಸಂಬದ್ಧ ಕಲ್ಪಿತ ಹಾಗೂ ವಚನಗಳ ಅಪರಿಚಿತತ್ವ. ಇಲ್ಲಿ ಪಂಚಭೂತಗಳ ಕಲ್ಪನೆ ಬರಬೇಕಾದುದಿಲ್ಲ. ಉದಕ–ಕಿಚ್ಚು ಈ ಪದಗಳ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸಿ ಅಬಾಧಿತ ಗಣಿತ ಶಾಸ್ತ್ರದ ಮೌಲ್ಯಪಟ್ಟಿ ನೋಡುವ ವಿಮರ್ಶನಾದೃಷ್ಟಿ ಸಾಲದು. ಇದಕ್ಕೆ ಸಾಕಷ್ಟು ಹಿಂದಿನ, ಸಮಕಾಲೀನರ ವಚನಗಳ ಅಳ ಪ್ರಸಂಗ ಬೇಕಾಗುತ್ತದೆ.

"ಸಾಗರದೊಳಗಣ ಕಿಚ್ಚಿನ ಸಾಕಾರದಂತೆ
ಸಸಿಯೊಳಗಣ ಫಲಪುಷ್ಪ ರುಚಿಯ ಪರಿಮಳದಂತೆ"

—ಬಸವಣ್ಣನಿಗಿಂತ ಪುರಾತನ ವಚನಕಾರ ದೇವರ ದಾಸಿಮಯ್ಯನ ವಚನದ ಸಾಲುಗಳಿವು. ಮೂರ್ತಿಯವರು ವಿಶ್ಲೇಷಿಸತೊಡಗಿರುವ ಮೊದಲೆರಡು ಸಾಲಿನ ಅರ್ಥಸಂದಿಗ್ಧತೆಯನ್ನು ದಾಸಿಮಯ್ಯನ ಈ ಎರಡು ಸಾಲು ತೊಡೆದು ಹಾಕಬಹುದು.

ಸಾಗರದೊಳಗೆ ಯಾರಿಗೂ ಅರಿಯದ ಕಿಚ್ಚು (ಅಗ್ನಿಪ್ರವಾಹ) ಅಡಗಿರುತ್ತದೆ. (ಒಂದು ಪ್ರತೀತಿ.) ಈ ಅಗ್ನಿ ಕ್ರಮೇಣ ಸಾಗರವನ್ನೇ ವ್ಯಾಪಿಸುವ, ಸಾಗರದ ಅಸ್ತಿತ್ವವನ್ನೇ ನುಂಗಿಬಿಡುವ, ತಾನೇ ತಾನಾಗಿ ಆವರಿಸುವ ಒಂದು ಕ್ರಿಯೆಯಾಗುತ್ತದೆ. 'ಬಯಕೆ'ಗೆ ಇಲ್ಲಿ ತುಡಿತ, ಆತುರ, ಆಸೆ, ಈ ಅರ್ಥವನ್ನಿಟ್ಟರೆ ಭಕ್ತನ ಹೃದಯದಲ್ಲಿ ಸುಪ್ತವಾಗಿರುವ ದೇವರ ನಿಲುವು ಮತ್ತು ಅದರ ವ್ಯಾಪಕತೆ, ಅದಕ್ಕಾಗಿ ದುಡಿತ ಈ ಅರ್ಥಗಳು ಹೊರಹೊಮ್ಮಿ ಅರ್ಥಸಂದಿಗ್ಧತೆಯ ಅರಿವನ್ನು ನುಂಗಿಬಿಡಬಹುದು.

(೨) "ಸಸಿಯೊಳಗಣ ರಸದ ರುಚಿ" —ಮೂರ್ತಿಯವರ ವ್ಯಾಖ್ಯಾನ ಹೀಗಿದೆ :

"ಚಂದ್ರರಸವನ್ನು ಮೊದಲು ಬೇರ್ಪಡಿಸಿ ಆಮೇಲೆ ಅದರ ರುಚಿ ನೋಡುವ ಸಾಮರ್ಥ್ಯವನ್ನು ನಿರೀಕ್ಷಿಸುವುದರಿಂದ ಅದು ಇಂದ್ರಿಯಗಳ ಮೂಲಕ ಸಾಕ್ಷಾತ್ಕಾರಗೊಳ್ಳದ ಅನುಭವ".

ಇಲ್ಲಿ ಮೊದಲಿಗೆ 'ಶಶಿ' ಪದಕ್ಕೆ 'ಚಂದ್ರ' ಎಂಬ ಅರ್ಥವನ್ನಿಟ್ಟು ತಪ್ಪು ಮಾಡಿ, ನಂತರ ಚಂದ್ರರಸವನ್ನು ಬೇರ್ಪಡಿಸಲು ತೊಡಗಿರುವುದು ಮೂರ್ಖತನ. ಆಮೇಲೆ ಆ ರಸವನ್ನು ರುಚಿ ನೋಡಲು ಹೋಗಿ ಸಾಮರ್ಥ್ಯವನ್ನು ಕಳೆದುಕೊಂಡು ಇದು ಇಂದ್ರಿಯಗಮ್ಯವಾದ ಅನುಭವವಲ್ಲ ಎಂಬ ನಿಲುವಿಗೆ ಬಂದಿರುವುದು ಅರ್ಥ ಸಂದಿಗ್ಧತೆಯ ಪರಿಸ್ಥಿತಿಯನ್ನು ತಂದುಕೊಂಡಿರುವುದಕ್ಕೆ ಸಾಕ್ಷಿ.

ಸಸಿ ಬೆಳೆದ ಮರದ ಪೂರ್ವರೂಪ. ಸ್ವಸ್ವರೂಪದಲ್ಲಿ ಸುಪ್ತವಾಗಿರುವ ಹೂವು, ಎಲೆ, ಕಾಯಿ, ಹಣ್ಣು ಒಮ್ಮೆಲೆ ಹೊರಹೊಮ್ಮಿ ಬರುವ ಕ್ರಿಯೆ ಅದರ ಪರಿಣಾಮ ಈ ಸಾಲಿನ ಭಾವಾಭಿವ್ಯಕ್ತಿ.

(೩) 'ಕನ್ನೆ' ಮತ್ತು 'ಸ್ನೇಹ' ಶಬ್ದಗಳು ಹತ್ತಿರ ಹತ್ತಿರ ಬರುವಾಗ ಕವನದಲ್ಲಿ ಯಾವುದೋ ಅಗಾಧವೊಂದು ಸಂಭವಿಸುತ್ತಿರುವುದು ಗಮನಕ್ಕೆ ಬರುತ್ತದೆ– ?? ಗಂಡು ಗಂಡಿನ ಸ್ನೇಹ ಭಾವನಾತ್ಮಕ ಆದರೆ ಕನ್ನೆಯೊಂದಿಗೆ ಅದು ಅತ್ಯಂತ ಸೂಕ್ಷ್ಮವಾದ ಪ್ರತಿಸ್ಪಂದನ........ ಮೊದಲ ಮೂರು ಸಾಲುಗಳ 'ಒಳಗೆ' 'ಒಳಗಣ' ಹಾಗೂ ಕೊನೆಯದರ 'ಕನ್ನೆಯ' —ಇವುಗಳ ನಡುವಿನ ಅಂತರವೂ ಗಮನಾರ್ಹ........'ಕನ್ನೆ' ಎಂಬುದು 'ಉದಕ' 'ಶಶಿ' 'ಸನೆ'ಗಳನ್ನು ನೆನಪಿಗೆ ತರುತ್ತದೆ'' –ಮೂರ್ತಿಯವರ ಈ ಮಾತುಗಳ ಈ ಮಾತುಗಳ ಅರ್ಥಸಂಬಂಧ ಕೇವಲ ಸಂದಿಗ್ಧತೆಯ ಪರಮಾವಧಿ.

ಕನ್ನೆಯಲ್ಲಿ (ಹತ್ತುವರುಷದ ಬಾಲೆ) ಅಂತರ್ಗತವಾಗಿರುವ ಸುಪ್ತಪ್ರೇಮ ಪ್ರೀತಿ, ಪುರುಷರಂತೆ ಪ್ರಕಟವಾದುದಲ್ಲ. ಆದರಲ್ಲೂ ಈ ವಯಸ್ಸಿನಲ್ಲಿ ಮುಗ್ಧ ಸ್ವರೂಪದಲ್ಲಿ ಅಡಗಿರುವ ಕಾಮ, ಕ್ರಮೇಣ ಅವಳ ಶರೀರವನ್ನೇ ವ್ಯಾಪಿಸಿಬಿಡುವ ಒಳಗೊಳಗೆ ಸಂತಸ ತಂದುಕೊಡುವ ಒಂದು ಅನುಭವ ಇಲ್ಲಿ ವ್ಯಕ್ತ.

ಹೀಗೆ ನಾಲ್ಕು ಕ್ರಿಯೆಗಳಲ್ಲಿ ಮೂರು ಪ್ರಕೃತಿಯನ್ನೂ, ಒಂದು ಮನುಷ್ಯನನ್ನೂ ಒಳಗೊಂಡು ಚಿತ್ರಿತವಾಗಿದೆ. ಶಿವಾಂಶ ಭಕ್ತನ ಅಂತರಂಗದಲ್ಲಿ ಸುಪ್ತವಾಗಿ ನೆಲಸಿರುವ, ಸ್ಥಾನಗೊಂಡಿರುವ, ಕ್ರಮೇಣ ಅವನ ಅಸ್ತಿತ್ವವನ್ನೇ ಇಲ್ಲೆನಿಸಿ ವ್ಯಾಪಕಗೊಂಡು ಶಿವಮಯಮಾಡಿ ಸಾಕ್ಷಾತ್ಕಾರಗೊಳಿಸುವ ಬಗೆ ಬಸವಣ್ಣನವರ ಭಾವ. ಶಿವಾಂಶ ಮತ್ತು ಭಕ್ತ ಇವರ ಸಂಬಂಧ ಎಂತು ಎಂಬುದರ ಸ್ಪಷ್ಟ ಚಿತ್ರಣವಿದು.

(೪) 'ಕೂಡಲ ಸಂಗಮದೇವ' ಪದಪುಂಜಕ್ಕೆ ಮೂರ್ತಿಯವರು ಕೊಟ್ಟಿರುವ ಹೊಂದಾಣಿಕೆ ವ್ಯಾಖ್ಯಾನ ಸರಿಯೆಂದು ಒಪ್ಪುವುದಾದರೆ, ಸಾವಿರಾರು ವಚನಗಳಲ್ಲಿ ಬರುವ 'ಕೂಡಲ ಸಂಗಮದೇವ' ಅಂಕಿತಕ್ಕೆಲ್ಲಾ ಒಂದೊಂದೂ ಹೊಂದುವ ವ್ಯಾಖ್ಯಾನವನ್ನು ಕಟ್ಟಿ ಹೇಳಬೇಕಾಗುತ್ತದೆ. "ಅದು ಸಾಮಾನ್ಯವಾಗಿ ನದಿಗಳು ಕೂಡುವಲ್ಲಿ ಇರುವ ದೇವರು'' ಎಂಬ ಪ್ರೈಮರಿ ಅರ್ಥಕೊಡುತ್ತಾ "ಈ ಊಹೆ ಸಾಧ್ಯವಿರಬಹುದು" ಎನ್ನುವ ಮಾತಿಗೆ ಇತಿಹಾಸಕ್ಕೂ ನಗೆ ಬರದೇ ಇಲ್ಲ.

C. ಮತ್ತೊಂದು ವಚನದ ಸೂಕ್ಷ್ಮ ಪರಿಚಯ ಮಾಡಿ ಈ ಲೇಖನ ಮುಗಿಸುತ್ತೇನೆ. ಇದೇ ಕೃತಿಯಲ್ಲಿ "ಅತ್ತಲಿತ್ತ ಹೋಗದಂತೆ ಹೇವನ ಮಾಡಯ್ಯ ತಂದೆ" ಆರಿಸಿಕೊಂಡಿರುವ ವಚನ.

ಶ್ರೀಯುತ ಚನ್ನಯ್ಯನವರು, ಶ್ರೀಯುತ ಎಂ. ಜಿ. ಕೆ. ಮೂರ್ತಿಯವರೂ ಈ ವಚನವನ್ನು ವಿಮರ್ಶೆಗೆ ಒಳಪಡಿಸಿದ್ದಾರೆ. ಚನ್ನಯ್ಯನವರ ವಿಮರ್ಶೆಯಲ್ಲಿ ಕಾಣಬರುವ ಅರ್ಥಸಂಲಗ್ನತೆ, ಭಕ್ತನ ಆಕಾಂಕ್ಷೆಯ ತೀವ್ರತೆ ಹಂತ ಹಂತವಾಗಿ ತೋರಿಬರುವಂತೆ, ಮೂರ್ತಿಯವರ ಪದ ಪದ ವಿಶ್ಲೇಷಣೆಯಲ್ಲಿ ಕೃತಕವಾಗಿ ತೋರುತ್ತದೆ.

ಎಂ.ಜಿ.ಕೆ.ಯವರು ಪದ್ಯವನ್ನು ಅದರಲ್ಲೂ ಬಿಡಿವಚನಗಳನ್ನು ಎದುರಿಗೆ ಇಟ್ಟು, ಪದಪದಗಳಿಗೆ, ಪದಪುಂಜಗಳಿಗೆ ಅರ್ಥೈಸುತ್ತಾ ಹೊಂದಾಣಿಕೆ ತರುತ್ತಾ ಎಲ್ಲರ ಗಮನವನ್ನು ಸೆಳೆಯಲು ಪ್ರಯತ್ನಿಸುವ ಧಾಟಿ ಗಮನಾರ್ಹ. ಯಾವುದೋ ಭಾಷೆಯ ಯಾವುದೋ ನಾಲ್ಕು ಇಲ್ಲವೆ ಆರು ಸಾಲುಗಳನ್ನು ಕೊಟ್ಟಾಗ ಬಿಡಿ ಬಿಡಿಯಾಗಿ ಹೀಗೆ ಅರ್ಥೈಸುವುದು ವಿಮರ್ಶಕ ದೃಷ್ಟಿಯಲ್ಲಿ ಸರಿ ಎಂದು ತೋರಿದರೂ ಕೆಲವು ವೇಳೆ ಅಪಾಯಕಾರಿಯಾದ ತಂತ್ರವಾಗಿ ಪರಿಣಮಿಸಬಹುದು.

ಇನ್ನೂ ಇತರ ವಚನಗಳೂ ಇಂತಹ ಒಂದು ತಂತ್ರಕ್ಕೆ ಒಳಗಾಗಿರುವುದೆಂದು ಹೇಳಲು ಇಲ್ಲಿ ಸ್ಥಳಾಭಾವವಿದೆ. ■

ರಾಮಚಂದ್ರ ಶರ್ಮ

ಪ್ರೀತಿ

ಅವಳ ಕಣ್ಣಿನ ಹಸಿರು ನೀಲಿಗೆ ಕಡಲಿನಾಳ.
ತೊಳೆದ ಆಕಾಶಕ್ಕೆ ಬಂದು ತುಂಬಿದ ಚಂದ್ರ
ಹುಣ್ಣಿಮೆಯ ರಾತ್ರಿ ಬೇಗುವ ಕಿರಣವೇ ಅವನ
ಪ್ರೀತಿ; ನೀರ್ಗತ್ತಲಿನ ಸಾವಿರ ಪದರ ದಾಟಿ
ತಳ ಮುಟ್ಟಿ ತಡಕಾಡಿ ಹೆಡೆಮಣಿ ಹುಡುಕಿ
ನೆಲಕ್ಕೆ ಸಿಡಿದು ಬರುವ ಛಾತಿ ಇಲ್ಲದ ಪ್ರೀತಿ.

ಅಂಗಾತ ಮಲಗಿರುವ ಕಡಲು ಮೈಯೆತ್ತಿ ಎತ್ತಿ
ಬಿಚ್ಚಿ ಕಚ್ಚಿ ಒಳಕ್ಕೆ ಸೆಳೆದರೂ ಹೆಬ್ಬೆರಳ
ಗಾತ್ರ ಮೀನಿನ ಕಿಬ್ಬೊಟ್ಟೆ ಬೆಳಗಿ ಚಕ್ಕಂದ
ಮುಗಿಸುವ ಮಾಣಿ ಅವನಿಗಷ್ಟಕ್ಕೆ ಸಂತೃಪ್ತಿ.

ಎಂಥೆಂಥ ಪ್ರಾಣಿ ವಿಶೇಷ ಸಸ್ಯ ವಿನ್ಯಾಸ
ಹವಳ ದ್ವೀಪದ ತುಂಬ ? ಮುತ್ತು ರತ್ನದ ಹಾಸೆ
ನೆಲಕ್ಕೆ ?

ಅರ್ಥವಿಲ್ಲದ ಪ್ರಶ್ನೆ–ಕ್ಷುಲ್ಲತನ
ಪರಕಾಯ ಪ್ರವೇಶಕ್ಕೆ ಮಿತಿ ಆರಂಗುಲ.

ದಿನಚರಿ

ಚಂದ್ರಶೇಖರ ಪಾಟೀಲ

ಸಮಕಾಲೀನ ವಿಮರ್ಶೆ, ಹೊಟ್ಟೆಕಿಚ್ಚು, ಪರಸ್ಪರ ಗೌರವ ಇತ್ಯಾದಿ

ನಿನ್ನೆ ಭಾರತದಿಂದ ಬಂದ ಪತ್ರವೊಂದು ಅನೇಕ ವಿಷಯಗಳ ಬಗ್ಗೆ ಗಾಢವಾಗಿ ವಿಚಾರ ಮಾಡಲು ಪ್ರೇರೇಪಿಸಿದೆ. ಪತ್ರ ಬರೆದವರು ಕನ್ನಡದ ಆಗು-ಹೋಗುಗಳ ಬಗ್ಗೆ ಅತ್ಯಂತ ಕಳಕಳಿ ಹೊಂದಿದವರು. ಕನ್ನಡ ಸಾಹಿತ್ಯದ ಅದರಲ್ಲೂ ನಾಟಕದ ವಿಮರ್ಶೆಯ ಕ್ಷೇತ್ರದಲ್ಲಿ ಇತ್ತೀಚೆಗೆ ನಡೆದಿರುವ ಚಟುವಟಿಕೆಗಳ ಬಗ್ಗೆ ಅವರು ಬರೆದ ಅನೇಕ ಮಾತುಗಳು ಉಲ್ಲೇಖನೀಯವಾಗಿವೆ.

ಭಾರತದ ಇತರ ಯಾವ ಭಾಷೆಯಲ್ಲೂ ಕಂಡುಬರದ ಲವಲವಿಕೆ, ಜೀವಂತಿಕೆ ಕನ್ನಡದಲ್ಲಿ ಸದ್ಯ ಕಂಡುಬರುತ್ತಿದೆ; ಇದನ್ನು ನೆನೆದು ನನಗೆ ತುಂಬ ಅಭಿಮಾನವೆನಿಸುತ್ತಿದೆ– ಎಂದು, ಕೆಲ ವಾರಗಳ ಹಿಂದೆ, ನಾನು ಬರೆದ ಕಾಗದಕ್ಕೆ ಸ್ನೇಹಿತರ ಪ್ರತಿಕ್ರಿಯೆ ಇದು :

"ನೀವು ಭಾವಿಸಿರುವಂತೆ ಇಲ್ಲಿ........ ಸಾಹಿತ್ಯ ವಾತಾವರಣ ಏನೂ ಚೆನ್ನಾಗಿಲ್ಲ, ವಿಷಭರಿತವಾಗಿದೆ. ವಿಚಾರದ, ಸಜ್ಜನಿಕೆಯ, ವಿವೇಕದ ಹಾದಿಯನ್ನು ಬಿಟ್ಟು ಕೇವಲ ಸ್ವಾರ್ಥಪೂರಿತವಾದ ಚಟುವಟಿಕೆಗಳಿಂದ ಸಾಹಿತ್ಯಕ್ಷೇತ್ರ ರಾಜಕೀಯಕ್ಕಿಂತಲೂ ಹೊಲಸಾಗಿಬಿಟ್ಟಿದೆ. ನನಗಂತೂ ತುಂಬ ದುಃಖವಾಗಿದೆ. ವಿವರವಾಗಿ ಬರೆಯಲು ಇಷ್ಟವಿಲ್ಲ. ನೀವು ಬಂದ ಬಳಿಕ ತಿಳಿಯುತ್ತದೆ. ನಿರ್ದಾಕ್ಷಿಣ್ಯವಾಗಿ, ನಮ್ಮ ನಿಜವಾದ ಅಭಿಪ್ರಾಯವನ್ನು ನಿರ್ಭಯವಾಗಿ ವ್ಯಕ್ತಪಡಿಸುವುದು ಅಗತ್ಯ; ಆದರೆ ಮಾನ ಮರ್ಯಾದೆ, ಸತ್ಯ ಸೌಜನ್ಯಗಳನ್ನೆಲ್ಲ ಗಾಳಿಗೆ ತೂರಿ ಸಿಕ್ಕಾಪಟ್ಟೆ ಹೊಟ್ಟೆಕಿಚ್ಚನ್ನು ವ್ಯಕ್ತಪಡಿಸುವ ರೀತಿ ಈಗ ಕಂಡುಬರುತ್ತಿದೆ."

ಸ್ನೇಹಿತರ ('ಕ್ಷ' ಅನ್ನೋಣ) ಪತ್ರದ ಈ ಮೊದಲ ಸಾಲುಗಳನ್ನು ಎರಡನೆಯ ಸಲ ಓದಿದಾಗ ಅವುಗಳ ಹಿಂದೆ ಅನೇಕ ಆಕೃತಿಗಳು ಕಂಡವು. ಒಮ್ಮೆಲೇ ಅದಕ್ಕೆ ಕಣ್ಣು ಮೂಗು ಮೂಡಿ ಇವೇ ವ್ಯಕ್ತಿಗಳು ಅಂತ ಗೊತ್ತಾಯಿತು. ಉಳಿದ ಅನೇಕ ಸ್ನೇಹಿತರ ಮೂಲಕ ಮೈಸೂರು-ಬೆಂಗಳೂರು-ಧಾರವಾಡದ ಸಮಾಚಾರ ನನಗೆ ಬರುತ್ತಿರುವುದರಿಂದ, ಪರಿಸ್ಥಿತಿಯ ಸಂಪೂರ್ಣ ಅಲ್ಲದಿದ್ದರೂ, ಸಂದಿಗ್ಧವಲ್ಲದ ಚಿತ್ರವನ್ನು, ಈ ದೂರದ ದೇಶದಲ್ಲೂ, ನಾನು ಕಲ್ಪಿಸಿಕೊಳ್ಳುವಂತಾಗಿದೆ.

ಯಾವುದೋ ನಾಟಕ ಪ್ರಯೋಗ........ ಅದರ ಬಗ್ಗೆ ಮೊದಲೇ ವಿಪರೀತ ಜಾಹೀರಾತು. ಪ್ರಯೋಗದ ನಂತರ ಅನೇಕ ಪ್ರತಿಕ್ರಿಯೆಗಳು........ ಪತ್ರಿಕಾ ವಿಮರ್ಶೆಗಳು........ ನಂತರ ವಾಚಕರ ವಾಣಿಗಳು........ಸಾಹಿತಿಗಳು, ಹುಸಿಸಾಹಿತಿಗಳು ಕೂಡಿದಲ್ಲೆಲ್ಲ ಚರ್ಚೆ........ ನಂತರ ಸಾಕ್ಷಿ, ಸಂಕ್ರಮಣಗಳಲ್ಲಿ ದೀರ್ಘ ವಿಮರ್ಶೆಗಳು........ ಅವಕ್ಕೆ ಪ್ರತಿಕ್ರಿಯೆಗಳು........

ಇದಕ್ಕೇ ನಾನು ಲವಲವಿಕೆ ಅನ್ನುವುದು. ಯಾವ ಪಟ್ಟಭದ್ರನೂ ತನ್ನ ಕುರ್ಚಿ ಗಟ್ಟಿ ಇದೆ ಅಂದುಕೊಳ್ಳುವಂತಿಲ್ಲ. ಪ್ರತಿಯೊಂದರ ಬಗ್ಗೆಯೂ ಚರ್ಚೆ, ವಾದ, ವಿವಾದ ವಿಮರ್ಶೆಯ 'ರೀತಿ' ಬೇರೆ ಬೇರೆಯಾಗಿರಬಹುದು. ಆದರೆ ಎಲ್ಲ ಬಗೆಯ ಪ್ರತಿಸ್ಪಂದನಗಳನ್ನೂ ವ್ಯಕ್ತಪಡಿಸುವ ಸ್ವಾತಂತ್ರ್ಯವಿದೆಯಲ್ಲ, ಅದು ಮುಖ್ಯ. ಕೆಲವು ಪ್ರಮುಖ ಪತ್ರಿಕೆಗಳು ಒಂದೇ ಗುಂಪಿನ ಮುಖವಾಣಿಯಾಗಿ ಎದುರು ಗುಂಪಿನ ಲೇಖಕರನ್ನು ಹೆಸರಿಸಿ ಅವರ ತೇಜೋವಧೆ ಮಾಡುತ್ತಿರಬಹುದು.... ಕೆಲವರು ಹ್ಯಾಂಡ್‌ಬಿಲ್ ವಿಮರ್ಶೆಯನ್ನು ಪ್ರಚಾರ ಮಾಡುತ್ತಿರಬಹುದು.... ಅಂಚಿನಲ್ಲಿ ನಿಂತವರು ಈ ಅಸಂಬದ್ಧ ನಾಟಕ ನೋಡಿ ನಗುತ್ತಿರಬಹುದು.... ಇಷ್ಟಿದ್ದರೂ ನಮ್ಮ ವಿಮರ್ಶಾರಂಗ ಜೀವ ತುಂಬಿ ಸ್ಪಂದಿಸುತ್ತಿದೆ. ಇದು ನನ್ನ ಅನಿಸಿಕೆ.

* * *

'ಕ್ಷ' ರ ಪತ್ರದ ಮುಂದಿನ ಸಾಲುಗಳು ನಮ್ಮ ಕೆಲವು ಲೇಖಕರ ಮನೋಧರ್ಮಕ್ಕೆ ಕೈಗನ್ನಡಿಯಾಗಿವೆ :

"ಗಿರೀಶ ಹೆಚ್ಚು ಪ್ರಸಿದ್ಧರಾಗಿರುತ್ತಾರೆ; All India figure ಆಗಿದ್ದಾರೆ. ಎಲ್ಲ ಬಹುಮಾನಗಳೂ ಮರ್ಯಾದೆಗಳೂ ದೊರೆಯುತ್ತಿವೆ. ನಾವು

ಸಂತೋಷಪಡಬೇಕಲ್ಲವೆ ? ಅತನ ಕೃತಿಗಳಲ್ಲಿರುವ ದೋಷಗಳನ್ನು ತೋರಿಸಬಹುದು— ಬೇಕು—ಕನ್ನಡ ನಾಟಕ ಪ್ರಪಂಚದ ಆರೋಗ್ಯ ರಕ್ಷಣೆಗಾಗಿ. ಆದರೆ ಆ ಕೆಲಸವನ್ನು ಮಾಡುವಾಗ ನಮ್ಮಲ್ಲಿನ ಹೊಟ್ಟೆಕಿಚ್ಚಿನ ಅಂಶ ನಮ್ಮ ಲೇಖನದಲ್ಲಿ ಬಾರದಂತೆ ನೋಡಿಕೊಳ್ಳುವುದು ಅವಶ್ಯವಲ್ಲವೆ ?"

ಈ ಮಾತುಗಳನ್ನು ಪ್ರಚೋದಿಸಿದ ಸಂದರ್ಭ ಇದು : ಐರಿಶ್ ನಾಟಕಕಾರ ಸಿಂಜ್‌ನ Riders to the Seaವನ್ನು ಅಶೋಕ ಕುಲಕರ್ಣಿ ಎಂಬುವರು ಇತ್ತೀಚೆಗೆ ಕನ್ನಡಿಸಿದ್ದಾರೆ. ನಾಟಕದ ಭಾಷಾಂತರದ ಬಗ್ಗೆ ನನ್ನ ತೀವ್ರ ಅತೃಪ್ತಿಯನ್ನು ವ್ಯಕ್ತಪಡಿಸಿ ನಾನು "ಭಾಷಾಂತರದ ಸಮಸ್ಯೆಗಳು" ಎಂಬ ಲೇಖನ ಬರೆದೆ. ಆ ಲೇಖನದಲ್ಲಿ ನಮ್ಮ ಸಮಕಾಲೀನ ನಾಟಕಕಾರರ ಬಗ್ಗೆ ಉಲ್ಲೇಖವಿದೆ; ಗಿರೀಶರ ಬಗ್ಗೆಯೂ ಕೆಲವು ಮಾತುಗಳಿವೆ. 'ಕ್ಷ' ರ ಪ್ರಶ್ನೆ ಈ ಸಂದರ್ಭಕ್ಕೆ ಸಂಬಂಧಿಸಿದೆ.

ಸಾಹಿತ್ಯ ವಿಮರ್ಶೆ ಮತ್ತು ಹೊಟ್ಟೆಕಿಚ್ಚು : ತುಂಬ fascinating ವಿಷಯ. ಗಿರೀಶರ ಬಗ್ಗೆ ಬರೆಯುವವರೆಲ್ಲ ಅವರ ಬಗ್ಗೆ ಇರುವ ಹೊಟ್ಟೆಕಿಚ್ಚಿನಿಂದ ಬರೆಯುವರೆ ? ಅದಕ್ಕಿಂತ ಹೆಚ್ಚಿನ justification ಯಾವುದೂ ಇಲ್ಲವೆ ? ಗಿರೀಶರ ಬಗ್ಗೆ ಕಟುವಾಗಿ ಬರೆಯುವವರೆಲ್ಲ ಉತ್ತರಿಸಬೇಕಾದ ಪ್ರಶ್ನೆ ಇದು. (ಹೊಗಳಿ ಬರೆಯುವವರ ಬಗ್ಗೆ ನನ್ನ ಸ್ನೇಹಿತರ ತಕರಾರು ಏನೂ ಇದ್ದಂತಿಲ್ಲ.)

'ಕ್ಷ' ರಿಗೆ ನಾನು ಬರೆದ ಉತ್ತರದ ಕೆಲವು ಸಾಲುಗಳಿವು :

"The theory that all criticism stems from a feeling of 'envy' is rather cheap and narrow-minded. This theory is resorted to when one attains a particular stage of reputation and becomes touchy about contrary remarks about oneself by others. Most of our elderly writers have reached this stage now and they want to be accepted as they are made out to be. This, I fear, is the most disastrous aspect of the whole drama. I can't just breathe a word against writers like Adiga, Ananthamurthy and now–Karnad. If I do, the whole Establishment is down on me."

ನಮ್ಮ ಪ್ರಸಿದ್ಧರಿಗೆ ಏನಾಗಿದೆ ? ವಿಮರ್ಶೆ ಅಂದರೆ ಅವರೇಕೆ ಗಡಗಡ ನಡುಗುತ್ತಾರೆ ? ವಿಮರ್ಶಕ ಬಾಯಿ ತೆರೆದರೆ ಹೊಗಳಿಕೆಯ ಮುತ್ತೇ ಉದುರಬೇಕು ಎಂದೇಕೆ ಅವರು ಬಯಸುತ್ತಾರೆ ?

"ಸಾಹಿತ್ಯ ವಿಮರ್ಶೆಯಲ್ಲು ತಕ್ಕಷ್ಟು ಔದಾರ್ಯ, ಸೌಜನ್ಯ, ಪರಸ್ಪರ ಗೌರವ ಅಗತ್ಯ ಎಂದು ನನ್ನ ಅಭಿಪ್ರಾಯ."

—'ಕ್ಷ'ರ ಮಾತುಗಳಿವು.

ಎರಡು ದಶಕಗಳ ಹಿಂದೆ ಕನ್ನಡದಲ್ಲಿ ನವ್ಯತೆಯ ಧಾಂಧಲೆ ಸುರು ವಾದಾಗ ನಮ್ಮ ನವ್ಯ ಪ್ರವರ್ತಕರು ಕನ್ನಡದ ರೊಮ್ಯಾಂಟಿಕ್ ಯುಗದ ವಿಮ ರ್ಶೆಯಲ್ಲಿ ಕಂಡುಬಂದ ಇದೇ 'ಔದಾರ್ಯ, ಸೌಜನ್ಯ, ಪರಸ್ಪರ ಗೌರವ' ಗಳ ವಿರುದ್ಧ ಕಹಳೆ ಊದಿದರು. ಅನೇಕ ಸಮರ್ಥ ಕವಿಗಳನ್ನು 'ರೊಮ್ಯಾಂಟಿಕ್' ಎಂಬ ಲೇಬಲ್ಲಿನಿಂದ ಕರೆದು, ಹಳೆಮನೆಯ ಮಂದಿ ಎಂದು ಹೀಯಾಳಿಸಿ, ಅವರು ಮತ್ತೆಂದೂ ತಲೆ ಎತ್ತದಂತೆ ಹತ್ತಿಕ್ಕಿದರು. ಹನ್ನೆರಡನೆಯ ಶತಕದ ಶರಣ ಸಾಹಿತ್ಯ—ಹಾಗೂ ಇಪ್ಪತ್ತನೆಯ ಶತಕದ ನವ್ಯ ಸಾಹಿತ್ಯ—ಇವೆರಡರ ನಡುವಿನ ಒಂಬತ್ತು ನೂರು ವರ್ಷಗಳ ಸಾಹಿತ್ಯ ಸೃಷ್ಟಿಯೆಲ್ಲ ಕೆಲಸಕ್ಕೆ ಬಾರದ್ದು, ಎಂದು ಸಾವಿರ ಬಾಯಿಂದ ಸಾರಿ, ಸಾರಿಸಿ ಸುಳ್ಳನ್ನು ಸತ್ಯವನ್ನಾಗಿ ಪರಿವರ್ತಿ ಸಿದರು.

ವಿಚಿತ್ರವೆಂದರೆ, ಅದೇ ನವ್ಯ ಪ್ರವರ್ತಕರು — ಕ್ರಾಂತಿವೀರರು — ಈಗ ವಯಸ್ಸಿನ ಭಾರದಿಂದಲೋ, ಪದವಿ - ಮರ್ಯಾದೆಗಳ ಭಾರದಿಂದಲೋ ಜಡವಾಗಿದ್ದಾರೆ. ಯಾರಾದರೂ ತಮ್ಮನ್ನು ಟೀಕಿಸಿದರೆ ಅದಕ್ಕೆ ಹೊಟ್ಟೆಕಿಚ್ಚು ಕಾರಣ ಎಂಬ ಭ್ರಮೆ ಹೊಂದಿದ್ದಾರೆ. ಪರಸ್ಪರ ಗೌರವ, ಸೌಜನ್ಯಗಳ ಬಗ್ಗೆ ಮಾತಾಡುತ್ತಾರೆ. "ಗೋಕಾಕರು ಬರೆದದ್ದು ಕಾವ್ಯವಾಗಿದ್ದರೆ ನನ್ನದು ಕಾವ್ಯ ವಲ್ಲ." —ಎಂದು ನಮ್ಮ ಕವಿಗಳೊಬ್ಬರು ಸಾರಿದಾಗ ಈ 'ಸೌಜನ್ಯ' ಎಲ್ಲಿ ಅಡಗಿ ಕುಂತಿತ್ತು ?

ಇದಕ್ಕೆಲ್ಲ ಮೂಲಪ್ರವೃತ್ತಿ – ಸ್ವಾರ್ಥಸಾಧನೆ. Develop the habit of self-criticism; but don't criticise me.—ಎಂಬ ಮಾವೋ ಸಿದ್ಧಾಂತಕ್ಕೂ ಈ ಪಟ್ಟಭದ್ರರ ಸಿದ್ಧಾಂತಕ್ಕೂ ಯಾವ ಅಂತರವಿದೆ ?

*　　　*　　　*

ಗಿರೀಶ್ ಕಾರ್ನಾಡ್ : ಮತ್ತೊಂದು fascinating ವಿಷಯ. 'ಕ್ಷ'ರು ಹೇಳುವಂತೆ, ಗಿರೀಶರ ಸಾಧನೆ ಅದ್ಭುತವಾಗಿದೆ. ಕನ್ನಡಕ್ಕೆ ಅಖಿಲ ಭಾರತ

ಪ್ರಸಿದ್ಧಿಯನ್ನು ತಂದವರು ಅವರು. ಅನೇಕ ಬಹುಮಾನಗಳನ್ನು, ಪದವಿಗಳನ್ನು ಪಡೆದಿದ್ದಾರೆ. ಅವರ ಸಾಧನೆಯಿಂದ ನಾವೆಲ್ಲ – ಕನ್ನಡಿಗರೆಲ್ಲ— ಸಂತೋಷಪಡಬೇಕು.

ಬರೋಬರಿ. ಗಿರೀಶರನ್ನು ಉತ್ಸವಮೂರ್ತಿಯಾಗಿ ಮೆರೆಸೋಣ. ಅವರನ್ನು ಕನ್ನಡದಲ್ಲಿ ಬೈದರೂ ಇಂಗ್ಲಿಷಿನಲ್ಲಿ ಮಾತ್ರ ಹೊಗಳೋಣ.

ಆದರೆ, ಈ ಮೆರವಣಿಗೆಯ ಅಬ್ಬರದಲ್ಲಿ ಒಂದು ಕ್ಷಣ ನಿಂತು ಒಂದು ಪ್ರಶ್ನೆ ಕೇಳಿಕೊಳ್ಳುವುದರಲ್ಲಿ ಯಾವ ತಪ್ಪಿದೆ?– "ಕನ್ನಡ ನಾಟಕ ಪ್ರಪಂಚದ ಆರೋಗ್ಯ ರಕ್ಷಣೆಗಾಗಿ ?"

ಪ್ರಶ್ನೆ : ಈ ಉತ್ಸವಮೂರ್ತಿ ಮುಕ್ಕಾಗಿದೆಯೆ ?

'ಕ್ಷ' ರಿಗೆ ನಾನು ಬರೆದೆ :

"I'm proud of Girish. He's the only writer who has given an All India glamour to Kannada. But does it mean that he must be treated like a glorious exception and presented on each occasion as the brilliant young spark of the family ? That is the psychology of snobbish parents. I think a huge defence mechanism is being built around him against mounting pressure from all sides. He has become a property of the Establishment—to be guarded by all means, foul and fair."

ನನ್ನ ಲೇಖನದಲ್ಲಿ ಗಿರೀಶರ ಉಲ್ಲೇಖ ಅಪ್ರಸ್ತುತವಾಗಿತ್ತು– ಎಂಬ 'ಕ್ಷ' ರ ಧಾಟಿಯ ಬಗ್ಗೆ ನಾನು ಬರೆದೆ :

"I had to mention Girish in my article. Any talk about the use of language in drama is incomplete without reference to his plays- that are negative model examples. I see no difference between Ashok Kulkarni and Girish Karnad in so far as the use of language is concerned. It's a pity that even (Mr.——), who rebelled against intellectual dishonesty of any kind, has turned into a trusted custodian -out to guard little angels! ike Girish.

I'm afraid he's being pushed behind a glass-pane like a museum piece—to be seen and praised, but not to be touched ! ”

ಇದು ಇದ್ದ ಮಾತು. ನಿಜವಾದ ಕಲಾವಿದನಾದವನು ಹೊಗಳು ಭಟ್ಟರ ಚಕ್ರವ್ಯೂಹದಲ್ಲಿಂದ ಹೊರಬಂದು ತನ್ನ ಮಾಧ್ಯಮದ ಹೊಸ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾನೆ. ಒಂದು ಕೃತಿಯಿಂದ ಮತ್ತೊಂದಕ್ಕೆ ಸಹಜವಾಗಿ ಬೆಳೆಯುತ್ತ ಹೋಗುತ್ತಾನೆ. ತನ್ನ ಸುತ್ತಲೂ ಬೆಳೆಯುವ ಹುತ್ತದ ಅರಿವು ಅವನಿಗೆ ಇರದಿದ್ದರೆ ಆ ಹುತ್ತದಲ್ಲಿಯೇ ಅವನ ಸಮಾಧಿಯಾಗುತ್ತದೆ.

'ಕ್ಷ' ರಿಗೆ ಬರೆದ ಸಾಲುಗಳಿವು : “ Dear Mr. X, you must accept one thing : too much is made of Karnad. He's puffed up into a balloon which can be exploded at the mere mention of a needle. He's an artist; but the gigantic reflection in the mirror placed before him has killed the artist in him and he cannot grow. It's good that he turned to film-making. That's what a genuine artist would do— change the medium. I admire his honesty, which he himself may not be aware of. ”

* * *

“ನಮ್ಮ ಸಮಕಾಲೀನರ ಬಗ್ಗೆ, ನಮ್ಮ ಜೊತೆಗೇ ಬರೆಯುತ್ತಿರುವವರ ಬಗ್ಗೆ ಬರೆಯುವಾಗ ಅತ್ಯಂತ ಜಾಗರೂಕತೆ ಅಗತ್ಯವಲ್ಲವೆ ? ಸಾಹಿತ್ಯ ಕ್ರಿಯೆಯಲ್ಲಿ ತೊಡಗಿದವನು ತನ್ನ ಜೊತೆಯ ಸತ್ತ್ವವುಳ್ಳ ಲೇಖಕರ ಬಗ್ಗೆ ವಿಮರ್ಶೆ ಮಾಡದೆ ಇರುವುದೇ ಒಳ್ಳೆಯದು ಎಂದು ನನಗೆ ತೋರುತ್ತದೆ.”

—ಇವು 'ಕ್ಷ' ರ ಮಾತುಗಳು.

ನನಗನಿಸುವ ಮಟ್ಟಿಗೆ, ಇಂಥ ಸಾಜಾ ಮಾತುಗಳ ಹಿಂದೆ ಯಾವುದೋ ಒಂದು ರೀತಿಯ ಭಯ ಧ್ವನಿತವಾಗುತ್ತದೆ. ನಾನು ನಿನ್ನನ್ನು ವಿಮರ್ಶಿಸಿದರೆ, ನೀನೂ ಹೊರಳಿ ನಿಂತು ನನಗೆ ಏಟು ಕೊಟ್ಟರೆ ? ನನ್ನ ಕಾಜಿನ ಮನೆ ಒಡೆದು ಹೋದರೆ ? ಎಂಬ ಭಯ.... Live and let live ಎಂಬ ಸಿದ್ಧಾಂತದ hypocritical version ಇದು. ನಾವು ನೀವು ಅಪ್‌ಸಾತ್ ಮಾತಾಡು

ವಾಗ ಬೇಕಾದ ಶಬ್ದ ಬಳಸೋಣ; ಬಯಲಿಗೆ ಬಂದಾಗ ಮಾತ್ರ ಸಭ್ಯಗೃಹಸ್ಥರಾಗೋಣ.... ದಾರಿಯಲ್ಲಿ ಕೂಡಿದಾಗ ಪರಸ್ಪರ ಗೌರವದಿಂದ ನಡೆದುಕೊಳ್ಳೋಣ.

" ನಿಮ್ಮ ಕವನ ಚೆನ್ನಾಗಿದೆ. "

" ಓಹ್, ನಿಮ್ಮದಂತೂ ಅದ್ಭುತವಾಗಿದೆ. "

" Thanks. "

" Thanks. "

–ಹೀಗೆ ಇದೆಲ್ಲಾ 'ಕ್ಷೌರವರು ಹೇಳುವಂತೆ– 'ಮನಸ್ಸಿನ ಆರೋಗ್ಯದ ರಕ್ಷಣೆಗಾಗಿ.' !

ಅವರ ಮಾತಿನ ಎಳೆ ಹಿಡಿದು ಹೋದರೆ– ಸಮಕಾಲೀನರ ಬಗ್ಗೆ ಏನಾದರೂ ಬರೆಯುವುದಿದ್ದರೆ ಅವರನ್ನು ಮೊದಲು ಕೊಲ್ಲುವ ಏರ್ಪಾಡು ಮಾಡಬೇಕು. ಏಕೆಂದರೆ ಸತ್ತ ಹಾವನ್ನು ಬಡಿದರೆ ಅದು ತಿರುಗಿ ಕಡಿಯುವ ಹೆದರಿಕೆ ಇಲ್ಲವಲ್ಲ!

* * *

ಇತ್ತೀಚಿನ ವರ್ಷಗಳಲ್ಲಿ ಕನ್ನಡ ವಿಮರ್ಶೆಯ ರೀತಿ ಬದಲಾಗುತ್ತಿದೆ. Academic ಮಾದರಿಯ ಜಡ ವಿಮರ್ಶೆಯ ಬದಲಾಗಿ ಬಹಳ ವೈಯುಕ್ತಿಕವೆನಿಸುವ, ಹಗುರುಮಾತಿನ ವಿನೋದದ–ವ್ಯಂಗ್ಯದ ಶೈಲಿ ಬಳಕೆಯಾಗುತ್ತಿದೆ. ಕೆಲವರು ಒಂದು ಹೆಜ್ಜೆ ಮುಂದೆ ಹೋಗಿ ವಿಮರ್ಶೆಯಲ್ಲಿ ಜೋಕು ಕೂಡ ಹೊಡೆಯುತ್ತಿದ್ದಾರೆ.

ಈ ಬಗೆಯ ಸಾಹಿತ್ಯಿಕ ಹರಟೆ ಅನಂತಮೂರ್ತಿಯವರಿಂದ 'ಸಾಕ್ಷಿ'ಯಲ್ಲಿ ಸುರುವಾಯಿತು. ಅನಂತರ ಲಂಕೇಶ್ ಬರೆದರು. ಆಮೇಲೆ ಪಾಟೀಲರು– ಅಂದರೆ ನಾನು– ಸೇರಿದರು. ಬರಿ ಗುಸುಗುಸು ಮಾತಿನಲ್ಲೇ ಗಿರಕಿ ಹೊಡೆಯುತ್ತಿದ್ದ ವಿಮರ್ಶೆ ಬಹಿರಂಗಕ್ಕೆ ಬರತೊಡಗಿತು. ಕೆಲವು ಲೇಖಕರು ತಮ್ಮ ತಮ್ಮ ಭಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದರು.

ಇನ್ನೊಂದು ಬಗೆಯ ವಿಮರ್ಶೆ prophetic ಮಾದರಿಯದು. ಒಂದು ಕೃತಿ ಪ್ರಕಟವಾಗುವ ಮೊದಲೇ ಅದರ ಬಗ್ಗೆ ವಿವರವಾಗಿ ಬರೆದು ನೂರೆಂಟು ನಿರೀಕ್ಷೆಗಳನ್ನು ಹುಟ್ಟಿಸಿ ಆಗಾವಾಗಿ ಮೌಲ್ಯ ನಿರ್ಣಯ ಮಾಡಿ ಬಿಡುವುದು.

ದುರ್ದೈವದಿಂದ ಸಾಕ್ಷಿ-ಸಂಕ್ರಮಣದಂಥ ಪತ್ರಿಕೆಗಳು ಇಂಥ ಹರಿಕಾರರ ಸಂದೇಶ ವಾಹಕಗಳಾಗಿವೆ. ಲಂಕೇಶರ 'ಸಂಕ್ರಾಂತಿ' ನಾಟಕದ ಬಗ್ಗೆ ಅನಂತಮೂರ್ತಿ ಬರೆದರು : 'ತುಘಲಕ ನಂತರದ ಅತ್ಯಂತ ಮಹತ್ವದ ನಾಟಕ ಇದು'. ಅಂತೆ. ನಾಟಕ ಪ್ರಯೋಗ ಅಯಶಸ್ವಿಯಾಯಿತು. ಇದಕ್ಕೆ ನಿರ್ದೇಶಕರು ಹೊಣೆಯೋ ನಾಟಕವೇ ಹೊಣೆಯೋ ಎಂಬ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಅಂತೂ ಅನಂತ ಮೂರ್ತಿಯವರ oracle ಸುಳ್ಳಾದದ್ದು ಮಾತ್ರ ಖರೆ.

ಪ್ರಕಟಿತ ನಾಟಕದೊಡನೇ ಬರುವ ಹಿನ್ನುಡಿ ಮುನ್ನುಡಿಗಳ ವಿಮರ್ಶೆ ಇನ್ನೊಂದು ಬಗೆಯದು. ಚದುರಂಗರು ಪ್ರೀತಿಯಿಂದ ಕಳಿಸಿದ 'ಇಲಿಬೋನು' ಓದಿದೊಡನೆ, ಜಿ. ಎಚ್. ನಾಯಕರ ಹಿನ್ನುಡಿಯನ್ನೂ ಓದಬೇಕಾಯಿತು. ನಾಟಕದ ಸನ್ನಿವೇಶ, ಸಂಕೇತಾರ್ಥ, ಧ್ವನಿಪೂರ್ಣತೆಗಳನ್ನು ಸಾವಕಾಶ ಅರಿತು ಕೊಳ್ಳುವ ಅರಗಿಸಿಕೊಳ್ಳುವ ಅವಕಾಶವೇ ನನಗೆ ದೊರೆಯಲಿಲ್ಲ. ನಾಯಕರು ತುಂಬ ಅಚ್ಚುಕಟ್ಟಾಗಿ ವಿಶ್ಲೇಷಣೆ ಮಾಡಿದ್ದಾರೆ. ಆದರೆ ಅವರು ನನ್ನ—ಅಂದರೆ ಓದುಗನ—ಸ್ವಾತಂತ್ರ್ಯವನ್ನು ಕಸಿದುಕೊಂಡ ಅನುಭವವಾಯಿತು. ನಾಟಕಕ್ಕೆ ಅವರು ಒದಗಿಸಿದ ಚೌಕಟ್ಟು ನಾಟಕಕಾರನಿಗೆ ಅನ್ಯಾಯ ಮಾಡಿದಂತೆ ಅನಿಸಿತು.

ಕನ್ನಡದಲ್ಲಿ 'ಓದುಗ' ಎಂಬ ವ್ಯಕ್ತಿಯ ಅಸ್ತಿತ್ವದ ಬಗ್ಗೆಯೇ ನನಗೆ ಸಂದೇಹವಿದೆ. ಒಂದು ಒಳ್ಳೆಯ ಕೃತಿ ಪ್ರಕಟವಾಗುವುದೇ ತಡ, ಅದರ ಪ್ರಿಂಟು ಒಣಗುವುದರೊಳಗೇ ಅದರ ದೀರ್ಘ ವಿಮರ್ಶೆ ತಯಾರಾಗಿರುತ್ತದೆ. ನಮ್ಮ ಕೆಲವು ವಿಮರ್ಶಕರು ಪೆನ್ನು—ಪೇಪರು ಹಿಡಿದುಕೊಂಡು ಹಸಿದ ಹುಲಿಯ ಹಾಗೆ ಕಾಯುತ್ತಾರೆ — ಹೊಸ ಕೃತಿಯ ಆಗಮನಕ್ಕಾಗಿ. ಅದು ಬಂದೊಡನೆ ಚಕಚಕಚಕ ಎಂದು ಯಂತ್ರದಂತೆ ಕೆಲಸ ಮಾಡಿ ಮುಗಿಸುತ್ತಾರೆ. ಅವರ ವಿಮರ್ಶಾ ವಿಧಾನ ಅಭಿನಂದನೀಯವಾಗಿದೆ. ಆದರೆ—

ಪಠ್ಯ ಪುಸ್ತಕ ಹಾಗೂ ಬಜಾರ್ ನೋಟ್ಸ್‌ಗಳ ನಡುವೆ ಸ್ವಲ್ಪವಾದರೂ ಟೈಮಿನ ಅಂತರವಿದ್ದರೆ, ಬಡ ವಿದ್ಯಾರ್ಥಿಗೆ ತಾನಾಗಿಯೇ ಏನಾದರೂ ಕಲಿಯುವ ಚಾನ್ಸ್ ದೊರೆಯುವುದಿಲ್ಲವೇ ?

* * *

'ಕ್ಷ'ರವರು ಅನುಭವದ ಅನೇಕ ಹಂತಗಳನ್ನು ದಾಟಿ ಬಂದವರು. ಅವರ ಮಾತುಗಳಲ್ಲಿಯ ಪ್ರಾಮಾಣಿಕತೆಯನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಅವರು ತಮ್ಮ ಪತ್ರದಲ್ಲಿ ಎತ್ತಿದ ಅನೇಕ ಸಮಸ್ಯೆಗಳನ್ನು ನಮ್ಮ ಸಾಹಿತಿಗಳು, ವಿಮರ್ಶಕರು, ರಿವ್ಯೂಕಾರರು ಬಿಚ್ಚು ಮನಸ್ಸಿನಿಂದ ಆಲೋಚಿಸಬೇಕು.

ಮುಖ್ಯ ಪ್ರಶ್ನೆಗಳೆಂದರೆ : ಸಾಹಿತ್ಯ ವಿಮರ್ಶೆಯ – ಅವೈಯಕ್ತಿಕತೆ ಹಾಗೂ hypocrisy ಆಗದ ಪರಸ್ಪರ ಗೌರವ–ಇವೆರಡರ ನಡುವೆ ಗೆಳೆತನ ಹೇಗೆ ಸಾಧಿಸುವುದು ? ಮತ್ತು, ಕಾಜಿನ ಮನೆಯೊಳಗಿದ್ದವನು ಹೊರಗಿನವರಿಗೆ ಕಲ್ಲು ಹೊಡೆಯಬಹುದೆ ? ಬೇಕೆ ? –ಬಾರದೆ ?

ಹೊಡೆಯುವುದೇ ಆದರೆ ಹೇಗೆ ಹೊಡೆಯಬೇಕು ?

*　　　*　　　*

ಮೊನ್ನೆ ಕೊಂಡ Bumper Book of Jokesನಲ್ಲಿ ಒಂದು ಜೋಕಿದು: ರಾಜಕಾರಣಿಯೊಬ್ಬ ಅನುಯಾಯಿಗಳಿಗೆ ಹೀಗೆ ಉಪದೇಶ ಮಾಡುತ್ತಾನೆ:

'Don't do as I do; do as I say.' ■

ಲೀಡ್ಸ್ (ಇಂಗ್ಲಂಡ್)
೧೯. ೩. ೭೩

ಡಿ. ವಿ. ಗುರುಪ್ರಸಾದ್

ಗ್ರಹಣ

ಕಳ್ಳಚಂದ್ರನಂತೆ
ಮೆಲ್ಲಮೆಲ್ಲನೆ
ನೀ ಬಂದು
ನನ್ನನಾವರಿಸಿದಾಗ
ಜಗವೆಲ್ಲ ಕತ್ತಲೆ.

ನಿನ್ನ ಕಪಿಮುಷ್ಟಿಯಿಂದ
ಹೊರಬರಲು ಯತ್ನಿಸಿದಾಗ
ನನ್ನ ಸತ್ವವೆಲ್ಲ ಕುಂದಿಹೋದಂತೆನಿಸಿ
ನಾನೂ
ನಿನ್ನಲ್ಲಿ ಒಂದಾಗಿ ಬಿಡುತ್ತೇನೆ.

ನಾಟ್ಯಾಲಾಪ

ಮುರಳೀಧರ ಉಪಾಧ್ಯ

ಬಿ.ವಿ.ಕಾರಂತ, ನಾಟಕಶಾಲೀಮು, ಅಲ್ಕಾಜಿ ಸಂದರ್ಶನ, ಜೈನ್ ಭಾಷಣ ಇತ್ಯಾದಿ

"ಊ ಓ ಆ ಐ ಈ"

"ಊ....ಓ....ಆ....ಐ....ಈ"

ಸ್ಥಳ– ಉಡುಪಿಯ ಎಂ. ಜಿ. ಎಂ. ಕಾಲೇಜಿನ ರವೀಂದ್ರ ಮಂಟಪ. ಮೂವತ್ತು ಮಂದಿ ವರ್ತುಲಾಕಾರದಲ್ಲಿ ನಿಂತು "ಊ....ಈ" ಹಾಡುತ್ತಿದ್ದಾರೆ. ಸ್ವರ ಲಹರಿ ಮೇಲೇರುತ್ತದೆ, ಕೆಳಗಿಳಿಯುತ್ತದೆ. ರವೀಂದ್ರ ಮಂಟಪ ಭೂತ ಬಂಗಲೆಯಾದಂತೆ ಭಾಸವಾಗುತ್ತದೆ. ಈ ಮಂದಿ ಒಮ್ಮೆ ನಗುತ್ತಾರೆ, ಇನ್ನೊಮ್ಮೆ ಅಳುತ್ತಾರೆ, ಮತ್ತೊಮ್ಮೆ ಚಿಕ್ಕಮಕ್ಕಳಂತೆ ಆಟವಾಡುತ್ತಾರೆ, ಜಗಳಾಡುತ್ತಾರೆ, ಓಡುತ್ತಾರೆ, ಕುಣಿಯುತ್ತಾರೆ. ಇವರೆಲ್ಲ ಗಡ್ಡ-ಗುರುಶರ್ಟ್‌ಧಾರಿ ವ್ಯಕ್ತಿಯೊಬ್ಬ ಹೇಳಿದಂತೆ ಕೇಳುತ್ತಿದ್ದಾರೆ.

ಇದೇನು ಹಿಪ್ನೋಟಿಸಮ್ಮೋ ಎಂದು ಕೇಳಬೇಡಿ. ಆ ಗಡ್ಡಗುರುಶರ್ಟ್‌ಧಾರಿ ವ್ಯಕ್ತಿ ಬಿ. ವಿ. ಕಾರಂತ. ನಡೆಯುತ್ತಿದ್ದುದು ನಾಟಕ ನಿರ್ದೇಶನ ತರಬೇತಿ.

ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ತಾ. ೧೦–೧–೭೩ ರಿಂದ ೪–೨–೭೩ರ ವರೆಗೆ ನಡೆದ ನಾಟಕ ನಿರ್ದೇಶನ ತರಬೇತಿ ಶಿಬಿರದಲ್ಲಿ ಭಾಗವಹಿಸಿದ ಮೂವತ್ತು ಮಂದಿಯಲ್ಲಿ ನಾನೂ ಒಬ್ಬ. (ಭಾಗವಹಿಸಿದವರಲ್ಲಿ ಹೆಚ್ಚಿನವರು ಕಾಲೇಜು ಪ್ರಾಧ್ಯಾಪಕರು.) ಅಭ್ಯರ್ಥಿಗಳನ್ನು ಬಿ. ವಿ. ಕಾರಂತರೇ ಇಂಟರ್‌ವ್ಯೂ ಮಾಡಿ ಆಯ್ಕೆ ಮಾಡುತ್ತಾರೆ ಎಂದು ಪ್ರೊ|| ಕು. ಶಿ. ಹರಿದಾಸ ಭಟ್ಟರು 'ಉದಯವಾಣಿ'ಯಲ್ಲಿ ಪ್ರಕಟಿಸಿದಾಗ ಹೆದರಿಕೊಂಡೇ ಹೋಗಿದ್ದೆ. ಸಂದರ್ಶನದಲ್ಲಿ ನಾವು ಮಾತನಾಡಿದ ರೀತಿ, ಸ್ವರ ಕೇಳಿಯೇ ನಮ್ಮ ಯೋಗ್ಯತೆ ನಿರ್ಧರಿಸಿದರು ಕಾರಂತರು. ಅವರು ಹೇಳಿದ ಶಿಬಿರದ

ನಿಯಮಗಳನ್ನು ಕೇಳಿ ಆಯ್ಕೆಯಾದವರಲ್ಲಿ ಕೆಲವರು ಮರುದಿನದಿಂದ ಬರಲೇ ಇಲ್ಲ !

ತರಬೇತಿ ಪ್ರತಿದಿನ ಸಂಜೆ ಐದು ಗಂಟೆಯಿಂದ ಹತ್ತರ ವರೆಗೆ ನಡೆಯುತ್ತಿತ್ತು. ಕಾರಂತರು ಮೊದಲ ಕೆಲವು ದಿನ ತಳ ಸ್ವರ (Base Voice) ತರಬೇತಿ, ಆಂಗಿಕ ತರಬೇತಿ ನೀಡಿ, ರಂಗಭೂಮಿಯ ಬಗ್ಗೆ ಉಪನ್ಯಾಸ ನೀಡಿದರು. ಕಾರಂತರು ಬೇಸ್ ವಾಯಿಸ್‌ಗೆ ಯಾಕೆ ಅಷ್ಟು ಮಹತ್ವ ಕೊಡುತ್ತಾರೆಂದು ಕೊನೆಗೂ ಕೆಲವರಿಗೆ ಅರ್ಥವಾಗಲಿಲ್ಲ. ನಾಟಕದಲ್ಲಿ ಸಣ್ಣ ಸಣ್ಣ ವಿಷಯಗಳು (ನಗು, ಅಳು, ಕೆಮ್ಮು, ನಡೆಯುವ ರೀತಿ, ಕಣ್ಣು ತಿರುಗಿಸುವುದು) ಎಷ್ಟು ಮುಖ್ಯವಾಗುತ್ತವೆ ಎಂಬುದನ್ನು ಕಾರಂತರು ಸ್ವಾರಸ್ಯಪೂರ್ಣವಾಗಿ ವಿವರಿಸಿದರು. ಒಂದು ಕುರ್ಚಿಯನ್ನು ಎಷ್ಟು ರೀತಿಯಲ್ಲಿ ಉಪಯೋಗಿಸಬಹುದು ಎಂದು ಅವರು ಕಲಿಸಿದಾಗ ನನಗೆ ಆಶ್ಚರ್ಯವಾಯಿತು.

ನಿರ್ದೇಶಕನ ಸ್ಥಾನ, ಪಾತ್ರ ಹಂಚುವ ಮುಂಚೆ ನಾಟಕವನ್ನು ಅಭಿನಯಿಸುವವರಿಗೆ ಓದಿ ಹೇಳುವುದರ ಪ್ರಯೋಜನ, ನಿರ್ದೇಶಕನ ಇಂಟರ್‌ಪ್ರಿಟೇಶನ್‌ನ ಮಹತ್ವ, ಮ್ಯಾನರಿಸಮ್ (ಆಂಗಿಕ ಚಟ) ಗಳಿಂದ ನಟರಿಗಾಗುವ ತೊಂದರೆಗಳು, ರಂಗಭೂಮಿಯ ವಿನ್ಯಾಸ, ಇವನ್ನೆಲ್ಲ ಕಾರಂತರು ತಮ್ಮ ಉಪನ್ಯಾಸಗಳಲ್ಲಿ ವಿವರಿಸಿದರು. 'Direction is an institution' ಎಂಬುದು ಕಾರಂತರ ವಾದ. ನಿರ್ದೇಶಕನ ಅರ್ಥೈಸುವಿಕೆ (interpretation) ಯ ಮಹತ್ವವನ್ನು ಮತ್ತೆ ಮತ್ತೆ ಒತ್ತಿ ಹೇಳುತ್ತಿದ್ದರು ಕಾರಂತರು. (ದೆಹಲಿಯಲ್ಲಿ ಶಿವಪುರಿಯವರ ನಿರ್ದೇಶನದ ತುಘಲಕ್ ಭಾವಜೀವಿಯಾಗಿ ಕಂಡುಬಂದರೆ ಅಲ್ಕಾಜಿಯವರ ತುಘಲಕ್ ಕ್ರೂರಿಯಾಗಿ ತೋರಿದನಂತೆ. ಕೆಲವು ಸಂಭಾಷಣೆಗಳನ್ನು ತೆಗೆದುಹಾಕುವ ಮೂಲಕ ಇದನ್ನು ಸಾಧಿಸಲಾಯಿತಂತೆ. 'ನಾನು ಒಮ್ಮೆ 'ತುಘಲಕ್' ನಿರ್ದೇಶಿಸಿದಾಗ ತುಘಲಕ್‌ನ counterpart ಅಜೀಜ್‌ನಿಗೆ importance ನೀಡಿದೆ' ಎಂದರು ಕಾರಂತರು. ನಿರ್ದೇಶಕನ ವ್ಯಾಖ್ಯೆಯಿಂದಾಗಿ ಬೇಂದ್ರೆಯವರ 'ಸಾಯೋ ಆಟ' ದಂಥ ಹಳೆಯ ನಾಟಕಕ್ಕೂ ಹೊಸ ಅರ್ಥ ಬರಬಹುದು, ಇಂದಿರಾ ಗಾಂಧಿ ಯುಗದಲ್ಲಿ 'ಸದಾರಮೆ' ನಾಟಕಕ್ಕೂ ಹೊಸ ಅರ್ಥ ಕೊಡಬಹುದು ಎಂದರು. 'ಹಯವದನ' ದ ಭಾಗವತರ ಪದ್ಯದಲ್ಲಿರುವ ಕೊನೆಯ ಶಬ್ದ 'ಗಣೇಶ'

ಮತ್ತು ಹಾಡುವಾಗ '....ಣೇಶ' '....ಶ' 'ಶ' ಹೀಗೆ ತುಂಡು ಮಾಡುವುದು ಮುಂದಿನ ಕಥೆಯನ್ನು ಹೇಗೆ ಧ್ವನಿಸಬಲ್ಲುದು ಎಂದು ಕಾರಂತರು ತಿಳಿಸಿದರು.) ಉಪನ್ಯಾಸದ ಅನಂತರ ನಾವು ಕೇಳಿದ ಪ್ರಶ್ನೆಗಳಿಗೆ ಕಾರಂತರು ಉತ್ತರ ಕೊಡುತ್ತಿದ್ದರು. ಥಿಯರಿ ಹೇಳುವಾಗ ಕಾರಂತರು ತಮ್ಮ ಪ್ರಾಯೋಗಿಕ ಅನುಭವಗಳನ್ನೂ ಹೇಳುತ್ತಿದ್ದುದರಿಂದ ಲೆಕ್ಚರ್ ಕುತೂಹಲ ಹುಟ್ಟಿಸುತ್ತಿತ್ತು. ಆದರೂ ಕಾರಂತರು ಉತ್ತಮ ಒರೇಟರ್ ಅಲ್ಲ ಎಂಬ ನಿರ್ಣಯಕ್ಕೆ ನಾನು ಬಂದೆ. ಕನ್ನಡ ಉಪನ್ಯಾಸದಲ್ಲಿ ಶೇಕಡ ನಲ್ವತ್ತು ಇಂಗ್ಲಿಷ್ ಶಬ್ದಗಳೇ ಇರುತ್ತಿದ್ದವು. ಅನೇಕ ವೇಳೆ ಕಾರಂತರು ಶಬ್ದಗಳಿಗಾಗಿ ತಡವರಿಸಿದಂತೆ ಅನಿಸುತ್ತಿತ್ತು. ('ನನ್ನ ಮಾತು ಕೇಳಿ ಕೇಳಿ ನನಗೇ ಬೋರ್ ಆಗುತ್ತಿತ್ತು' ಎಂದು ಕೊನೆಗೆ ಕಾರಂತರೆ ಹೇಳಿದರು. ನಾನಂತೂ ಅನೇಕ ಸಾರಿ ಅವರು ಪಾಠ ಮಾಡುವಾಗ, ಅಂದು ಅವರು ಧರಿಸಿದ್ದ ಗುರುಶರ್ಟ್ ಎಷ್ಟನೆಯದು ಎಂದು ಲೆಕ್ಕ ಹಾಕುತ್ತಿದ್ದೆ.) ದೆಹಲಿಯ 'National School of Dramatics' ನ ಪ್ರೊ. ಅಲ್ಕಾಜಿ ಮತ್ತು ಪ್ರೊ. ನೇಮಿಚಂದ್ರ ಜೈನ್ ಅವರೂ ನಮ್ಮ ಶಿಬಿರದಲ್ಲಿ ಉಪನ್ಯಾಸ ನೀಡಿದರು.

ಶಿಬಿರದ ಎರಡನೆಯ ವಾರದಲ್ಲಿ ಧರ್ಮವೀರ ಭಾರತಿಯವರ ಹಿಂದೀ ನಾಟಕ 'ಅಂಧಯುಗ' ದ (ಕನ್ನಡ ಭಾಷಾಂತರ : ಎಚ್. ವ್ಹಿ. ರಾಮಚಂದ್ರ ರಾವ್) ತಾಲೀಮು ಆರಂಭವಾಯಿತು. ಪಾತ್ರಗಳನ್ನು ಹಂಚುವ ಮೊದಲು ಕಾರಂತರು ಪ್ಲಾಟ್ ಓದಿ ಹೇಳಿದರು ಅನಂತರ ಎಲ್ಲರಿಗೂ ನಾಟಕದ ಯಾವುದಾದರೂ ಪಾತ್ರದ ಕೆಲವು ಸಾಲುಗಳನ್ನು ಕಲಿತು ಬಂದು ಅಭಿನಯಿಸಲು ಹೇಳಿದರು. ಆ ಮೇಲೆ ಪಾತ್ರಗಳನ್ನು ಹಂಚಿದರು. ಜನ ಹೆಚ್ಚಿಗೆ ಇದ್ದುದರಿಂದ ಹನ್ನೆರಡು ಮಂದಿಯನ್ನು ಮೇಳಕ್ಕೆ (chorus) ಆರಿಸಿದರು. (ನಾನು ಮೇಳದವರಲ್ಲಿ ಒಬ್ಬನಾದೆ.) ಮೊದಲ ದೃಶ್ಯದ ಅಭ್ಯಾಸ ತಮಗೆ ತೃಪ್ತಿ ನೀಡಿದ ಅನಂತರವೇ ಮುಂದಿನ ದೃಶ್ಯಕ್ಕೆ ಹೋಗುತ್ತಾರೆ ಕಾರಂತರು. ಎರಡು ರಿಹರ್ಸಲ್‌ಗಳ ಅನಂತರ ಬಾಯಿಪಾಠಕ್ಕೆ ಮಹತ್ವ ನೀಡುವುದು, ಅಭಿನಯದೊಂದಿಗೇ ತಾಲೀಮು ಆರಂಭಿಸುವುದು, ಪ್ರವೇಶಗಳ ಬಗ್ಗೆ ಜಾಗ್ರತೆ ವಹಿಸುವುದು, ಪ್ರತಿ ಪಾತ್ರದ ಪ್ರತಿಯೊಂದು ಮಾತನ್ನೂ ತಾನು ಆಡಿ ತೋರಿಸಿ ತಿದ್ದುವುದು— ಇವು ಕಾರಂತರ ನಿರ್ದೇಶನದ ವೈಶಿಷ್ಟ್ಯಗಳು. ತಾಲೀಮು

ಮುಂದುವರಿದಂತೆ ಅನಾವಶ್ಯಕವೆಂದು ಕಂಡುಬಂದ ಸಂಭಾಷಣೆಗಳನ್ನು ಕಿತ್ತು ಹಾಕಿದರು. ತಾಲೀಮಿನ ದಿನಗಳಲ್ಲಿ ಕಾರಂತರು ಕಲ್ಪನೆಯ ಗುಂಗಿನಲ್ಲೇ ಇರುತ್ತಿದ್ದರು. ರಿಹರ್ಸಲ್ ನಡೆಯುವಾಗ ನಡುವೆ ಯಾರಾದರೂ ಪ್ರಶ್ನೆ ಕೇಳಿದರೆ, ಅಭಿನಯಿಸುವವರು ಸಕ್ಕರೆ ಕಾರಂತರು ಖಾರಂತರಾಗುತ್ತಿದ್ದರು. ಅವರು ಸೀರಿಯಸ್ಸಾಗಿ ಕಂಡರೂ ತಾಲೀಮಿನ ವೇಳೆ ಅನಿರೀಕ್ಷಿತವಾಗಿ ಹಾಸ್ಯ ಚಟಾಕಿ ಹಾರಿಸುತ್ತಿದ್ದರು.

'Go to the script' ಎಂಬುದು ಕಾರಂತರು ಪಾತ್ರಧಾರಿಗಳಿಗೆ ಆಗಾಗ್ಗೆ ನೀಡುತ್ತಿದ್ದ ಎಚ್ಚರ. 'ಆಡಿಯನ್ಸ್ ಇದ್ದಾರೆ ಎಂಬುದನ್ನೇ ನಟ ಮರೆಯ ಬೇಕು' ಎಂದು ಅವರು ಹೇಳುವಾಗ ನಮಗೆ ಆಶ್ಚರ್ಯ. ಸ್ಟೇಜಿನ ಯಾವ ಭಾಗವೂ ಖಾಲಿ ಉಳಿಯಬಾರದೆಂದು ಕಾರಂತರ ಅಭಿಪ್ರಾಯ, 'ಖಾಲಿ ಸ್ಟೇಜ್ ತುಂಬಿದಾಗ ನನಗೆ ವಿಚಿತ್ರ ಆನಂದವಾಗುತ್ತದೆ' ಎನ್ನುತ್ತಾರೆ. 'ನಾಟಕ ಪ್ರಯೋಗದ ವೇಳೆ ನಿರ್ದೇಶಕ ಸ್ಟೇಜ್‌ನಲ್ಲಿರಲೆಬಾರದು. ಅವನು ಪ್ರೇಕ್ಷಕ ರಲ್ಲೊಬ್ಬನಾಗಬೇಕು' ಎಂದ ಕಾರಂತರು ಮುಂದೆ ಹಾಗೆಯೇ, ಮಾಡಿ ತೋರಿಸಿದರು, ನಾಟಕದ ಕೊನೆಯ ರಿಹರ್ಸಲ್ ಪೂರ್ತಿ ಮೇಕಪ್, ದೀಪ ವ್ಯವಸ್ಥೆಯೊಂದಿಗೆ ನಡೆಯಿತು.

* * *

ಮಹಾಭಾರತ ಯುದ್ಧದ ಅನಂತರದ ದುರಂತವನ್ನು ಚಿತ್ರಿಸುತ್ತದೆ– ಧರ್ಮವೀರ ಭಾರತಿ ಅವರ 'ಅಂಧಯುಗ'. ಅಶ್ವತ್ಥಾಮ, ಸಂಜಯ, ಯುಯುತ್ಸು, ಧೃತರಾಷ್ಟ್ರ, ಗಾಂಧಾರಿ, ವಿದುರ, ಕೃಪಾಚಾರ್ಯ ಕೃತವರ್ಮ, ವೃದ್ಧಯಾಚಕ, ಪ್ರಹರಿಗಳು–ಈ ನಾಟಕದ ಮುಖ್ಯಪಾತ್ರಗಳು. "ನಮ್ಮ ಅಸ್ತಿತ್ವಕ್ಕೆ ಅರ್ಥವೇ ಇಲ್ಲ............ಚಲಿಸುತ್ತಿದ್ದೇವೆ ನಾವು ಎಡದಿಂದ ಬಲಕ್ಕೆ.... ಬಲದಿಂದ ಎಡಕ್ಕೆ...." ಎನ್ನುವ ಪ್ರಹರಿಗಳು ಶ್ರೀ ಸಾಮಾನ್ಯರ ಪ್ರತಿನಿಧಿಗಳಾಗಿ ನಾಟಕದುದ್ದಕ್ಕೂ ಪ್ರೇಕ್ಷಕರ ಗಮನ ಸೆಳೆಯುತ್ತಾರೆ. ಕೃಷ್ಣನನ್ನು ವಂಚಕ ಎಂದು ಕರೆಯುವ ಗಾಂಧಾರಿ ಮೊದಲ ಅಂಕದಲ್ಲಿ ಪ್ರಾಧಾನ್ಯತೆ ವಹಿಸುತ್ತಾಳೆ. ಎರಡನೆಯ ಅಂಕವಲ್ಲಿ ಸೇಡಿಗಾಗಿ ಹಾತೊರೆಯುವ–ಅಂಧ ಬರ್ಬರ ಪಶು ಅಶ್ವತ್ಥಾಮ ಕಾಣಿಸುತ್ತಾನೆ. ಸುಳ್ಳು ಭವಿಷ್ಯ ಹೇಳಿದ ವೃದ್ಧಯಾಚಕನನ್ನು ಕೊಲೆ ಮಾಡಿ 'ನಾನೇನು ಮಾಡಿದೆ ಮಾವ?' ಎಂದು ಪ್ರಶ್ನಿಸುವಷ್ಟು ಪಶುವಾ

ಗಿದ್ದಾನೆ ಅವನು. 'ಧೃತರಾಷ್ಟ್ರನ ಬಳಿ ಸತ್ಯಹೇಳುವುದಕ್ಕಿಂತ ಸಾಯುವುದು ಮೇಲು' ಎನ್ನುತ್ತಾನೆ ಸಂಜಯ. ಮೂರನೆಯ ಅಂಕದಲ್ಲಿ 'ನನ್ನ ಅಪರಾಧ ಏಷ್ಟೆ—ನಾನು ಸತ್ಯವನ್ನು ಬಿಡಲಿಲ್ಲ' ಎನ್ನುವ ಯುಯುತ್ಸುವಿನ ಪ್ರವೇಶವಾಗುತ್ತದೆ. ಗಾಂಧಾರಿ ಅವನನ್ನು ಕ್ಷಮಿಸುವುದಿಲ್ಲ. ಅಶ್ವತ್ಥಾಮ ಸೇನಾಪತಿಯಾಗುತ್ತಾನೆ. ರಾತ್ರಿಯಲ್ಲಿ ಗೂಬೆ-ಕಾಗೆ ಕಾಳಗ ನೋಡಿ ಹೊಸ ಉಪಾಯ ಹೊಳೆದು ಪಾಂಡವರ ಶಿಬಿರದತ್ತ ಹೋಗುತ್ತಾನೆ. ನಾಲ್ಕನೆಯ ಅಂಕದಲ್ಲಿ 'ಅಶ್ವತ್ಥಾಮ ಸೇಡು ತೀರಿಸಿದ ರೀತಿಯನ್ನು ನಾನೂ ಕಾಣಬೇಕಿತ್ತು' ಎಂದು ಹಂಬಲಿಸುವ ಗಾಂಧಾರಿಯನ್ನು ಕಾಣುತ್ತೇವೆ. ತನ್ನ ದಿವ್ಯದೃಷ್ಟಿಯನ್ನು ಕಳೆದುಕೊಂಡು 'ಗೋಡೆಗಳೇ ಸರಿಯಿರಿ' ಎಂದು ಹಲುಬುತ್ತಾನೆ ಸಂಜಯ. ಅಶ್ವತ್ಥಾಮ ಅರ್ಜುನನ ಮೇಲೆ ಬ್ರಹ್ಮಾಸ್ತ್ರ ಹೂಡುತ್ತಾನೆ. ವ್ಯಾಸ ಬಂದು "ಇದರಿಂದಾಗಿ ಭೂಮಿ ಬಂಜರಾಗುವುದು, ಹುಟ್ಟುವ ಮನುಷ್ಯರು ರೋಗಗ್ರಸ್ತರು, ವಿಕಲಾಂಗಿಗಳಾಗುವರು" ಎಂದಾಗ ಬ್ರಹ್ಮಾಸ್ತ್ರವನ್ನು ಉತ್ತರೆಯ ಗರ್ಭ ಘಾತಿಸಲು ಕಳುಹಿಸುತ್ತಾನೆ. ಕೃಷ್ಣ ಉತ್ತರೆಯ ಗರ್ಭವನ್ನು ರಕ್ಷಿಸುತ್ತಾನೆ. ಅಶ್ವತ್ಥಾಮ ರೋಗಗ್ರಸ್ಥನಾಗುತ್ತಾನೆ. ಗಾಂಧಾರಿ ಕೃಷ್ಣನಿಗೆ ಶಾಪ ಕೊಡುತ್ತಾಳೆ. ಐದನೆಯ ಅಂಕದಲ್ಲಿ ಅಪಮಾನ ಸಹಿಸಲಾರದೆ ಯುಯುತ್ಸು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. 'ಈ ಆತ್ಮಹತ್ಯೆ ಇಡೀ ಸಂಸ್ಕೃತಿಯಲ್ಲಿ ಪ್ರತಿಧ್ವನಿತವಾಗುತ್ತದೆ' ಎನ್ನುತ್ತಾನೆ ಕೃಪಾಚಾರ್ಯ. 'ಅರಸರು ಬದಲಾದರೂ ಪರಿಸ್ಥಿತಿ ಬದಲಾಗಿಲ್ಲ' ಎನ್ನುತ್ತಾರೆ ಪ್ರಹರಿಗಳು. ಕೊನೆಯಲ್ಲಿ ಧೃತರಾಷ್ಟ್ರ ಗಾಂಧಾರಿ ಕಾಡ್ಗಿಚ್ಚಿನಲ್ಲಿ ಸಿಕ್ಕಿ ಬೆಂದು ಹೋಗುತ್ತಾರೆ. ಸಂಜಯ ಹೇವನಾಗುತ್ತಾನೆ. ಜರವಾಗಿ ಬಂದ ವೃದ್ಧ ಯಾಚಕನಿಂದ ಕೃಷ್ಣನ ಕೊಲೆಯಾಗುತ್ತದೆ. ಸಂಜಯ ಅಶ್ವತ್ಥಾಮ ಬದುಕಿಯೂ ಸತ್ತಿದ್ದಾರೆ. 'ಪ್ರಭುವಿನ ಅವಸಾನ ಸಮಸ್ತರ ಅವಸಾನ' ಎಂಬ ಮೇಳಗೀತದೊಡನೆ ಕೊನೆಯಾಗುತ್ತದೆ ನಾಟಕ. 'ಜಯ ಯಾರಿಗೂ ಇಲ್ಲ. ಇದೆಂಥ ಯುದ್ಧ?' ಎಂದು ಪ್ರಶ್ನಿಸುತ್ತದೆ 'ಅಂಧಯುಗ'. ಯುದ್ಧ ಯಾವುದೇ ಆಗಿರಲಿ ಅದರ ಪರಿಣಾಮ ಭೀಕರವಾಗಿರುತ್ತದೆ ಎಂಬುದನ್ನು 'ಅಂಧಯುಗ' ಧ್ವನಿಸುತ್ತದೆ. ಪ್ರೊ. ಜೈನ್ ಹೇಳುವಂತೆ 'ಮಾನವ ಜೀವನದ ಮೂಲವನ್ನೇ ಪ್ರಶ್ನಿಸಲು ಪ್ರಯತ್ನಿಸುವ ನಾಟಕ—ಅಂಧಯುಗ.'

* * *

ಆಧುನಿಕ ಭಾರತೀಯ ನಾಟಕಗಳಲ್ಲಿ ಪ್ರಸಿದ್ಧವಾಗಿರುವ 'ಅಂಧಯುಗ'ದ ಮೊದಲ ಕನ್ನಡ ಪ್ರಯೋಗ ತಾ. ೪-೨-೬೩ ರಂದು ಉಡುಪಿಯ ನಾಟಕ ನಿರ್ದೇಶನ ತರಬೇತಿ ಶಿಬಿರದಲ್ಲಿ ನಡೆಯಿತು. ಅಶ್ವತ್ಥಾಮ (ಲಕ್ಷ್ಮೀನಾರಾಯಣ ಸಾಮಗ ಎಂ.), ಸಂಜಯ (ಕೃಷ್ಣಮೂರ್ತಿ ಆಚಾರ್ಯ), ವಿದುರ (ಶಶಿಧರ ಹೆಗ್ಡೆ ಕೆ.), ಧೃತರಾಷ್ಟ್ರ (ಉದ್ಯಾವರ ಮಾಧವ ಆಚಾರ್ಯ), ವೃದ್ಧಯಾಚಕ ಜರ (ರಾಮದಾಸ್), ಯುಯುತ್ಸು (ಪ್ರೇಮಾನಂದ ಶೆಟ್ಟಿ)- ಈ ಪಾತ್ರಗಳನ್ನು ವಹಿಸಿದವರ ಅಭಿನಯ ತೃಪ್ತಿಕರವಾಗಿತ್ತು. ಚಿಕ್ಕ ಪಾತ್ರಗಳಾದರೂ ಚೊಕ್ಕ ವಾಗಿ ಅಭಿನಯಿಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು ಪ್ರಹರಿಗಳು. (ಸುಬ್ರಹ್ಮಣ್ಯ ಕೆದಿಲಾಯ, ಗೋವಿಂದ ಭಟ್, ಎಂ. ವಿ.) ಗಾಂಧಾರಿ ಪಾತ್ರ ವಹಿಸಿದವರು (ಶ್ರೀಮತಿ ಅಲ್ಬರ್ಟಿನ್ ಮೆಂಡೋನ್ಸ್) ಭಾವಪೂರ್ಣವಾಗಿ ಅಭಿನಯಿಸಿದರೂ ಮಾತುಗಳ ಪರಿಳಿತ ಸರಿಯಾಗಿರಲಿಲ್ಲ. ಮೇಳ ತನ್ನ ಉದ್ದೇಶ ಸಾಧಿಸುವುದ ರಲ್ಲಿ ಸಂಪೂರ್ಣ ಸೋತಿತು. ಗೂಬೆ ಕಾಗೆಗಳ ನೃತ್ಯವನ್ನು ಯಕ್ಷಗಾನ ವೇಷ ಗಳ ಮೂಲಕ ಅಭಿನಯಿಸುವ ಕಾರಂತರ ಕಲ್ಪನೆ ಯಶಸ್ವಿಯಾಯಿತು. ಉಡು ಪಿಯ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಗಳು ಅಭಿನಯಿಸಿದ ಈ ನೃತ್ಯ ನಾಟಕದ ಟೆಂಪ್ಪೋಕ್ಕೆ ಅಡ್ಡಿಯುಂಟುಮಾಡಲಿಲ್ಲ. ('ನಾಟಕದಲ್ಲಿ ನೃತ್ಯ ಇದ್ದರೆ, ಇಮ್ಯಾಜಿ ನೇಶನ್ ಇದ್ದರೆ ನನಗೆ ಪ್ರಿಯ' ಎಂದು ಕಾರಂತರು ಹೇಳುತ್ತಿದ್ದರು.)

ರಂಗಭೂಮಿಯ ವ್ಯವಸ್ಥೆ, ದೀಪದ ವ್ಯವಸ್ಥೆ ಚೆನ್ನಾಗಿದ್ದವು. ನಾಟಕದ ಎಲ್ಲಾ ವಸ್ತ್ರಗಳನ್ನು ಖಾದಿ ಸೀರೆಗಳಿಂದ ತಯಾರಿಸಿದ್ದರಲ್ಲೂ ಹೊಸತನವಿತ್ತು. (ಮರುದಿನದ 'ತುಘಲಕ್' ನಾಟಕದ ವಸ್ತ್ರಗಳನ್ನು ಬೆಡ್ ಶೀಟ್‌ಗಳಿಂದ ತಯಾ ರಿಸಲಾಗಿತ್ತು.) ಒಟ್ಟಿನಲ್ಲಿ 'ಅಂಧಯುಗ' ದ ಪ್ರಥಮ ಪ್ರಯೋಗ ಪೂರ್ತಿ ಸಕ್ಸೆಸ್ ಎನ್ನುವಂತಿರಲಿಲ್ಲ. ನಿರ್ದೇಶಕ ಕಾರಂತರಿಗೆ ಪ್ರಯೋಗ ತೃಪ್ತಿ ನೀಡ ಲಿಲ್ಲ. 'ನಾಟಕ ಸ್ಲಿಕ್ ಆಗಲಿಲ್ಲ. ಡ್ರ್ಯಾಗಿಂಗ್ ಆಯಿತು' ಎಂದರು ಕಾರಂತರು. ಮರುದಿನ ಕಾರಂತರ ನಿರ್ದೇಶನದಲ್ಲಿ ಎಂ. ಜಿ. ಎಂ. ಕಾಲೇಜಿನ ವಿದ್ಯಾರ್ಥಿಗಳು ಅಭಿನಯಿಸಿದ 'ತುಘಲಕ್' ತಕ್ಕಮಟ್ಟಿಗೆ ಯಶಸ್ವಿಯಾಯಿತು.

* * *

ನಾಟಕ ನಿರ್ದೇಶನ ತರಬೇತಿ ಶಿಬಿರ ನಮಗೆಲ್ಲ ಹೊಸ ಅನುಭವವಾಗಿತ್ತು. ಕಾರಂತರ ಸಹವಾಸ, ಪಾಠ, ಪ್ರೊ. ಅಲ್ಕಾಜಿ, ಪ್ರೊ. ಜೈನ್ ಅವರ ಉಪನ್ಯಾಸ,

'ಅಂಧಯುಗ' ಪ್ರಯೋಗ ನಮಗೆಲ್ಲ ತೃಪ್ತಿ ನೀಡಿತು. ಶಿಬಿರದಲ್ಲಿ ದೀಪದ ವ್ಯವಸ್ಥೆಯ ಬಗ್ಗೆ ತರಬೇತಿ ನೀಡಬೇಕು, ನಾಟಕ ಸಾಹಿತ್ಯ ಕುರಿತ ಪ್ರದರ್ಶನ ವೊಂದನ್ನು ಏರ್ಪಡಿಸಬೇಕು ಎಂದು ಕಾರಂತರಿಗೆ ಆಸೆಯಿತ್ತು. ಆದರೆ ಸಮಯದ ಅಭಾವದಿಂದ ಅದು ಸಾಧ್ಯವಾಗಲಿಲ್ಲ. ಶಿಬಿರದ ಕಾಫಿ, ತಿಂಡಿ, ಊಟ, ಕಷಾಯಗಳ ಜೊತೆಗೆ ಡೈರೆಕ್ಟರ್ ಕು. ಶಿ. ಮತ್ತು ಮೇಲ್ವಿಚಾರಕರಾಗಿದ್ದ ಎಂ. ಜಿ. ಎಂ.ನ ಇತಿಹಾಸ ಪ್ರಾಧ್ಯಾಪಕ ಶ್ರೀ ಬಾಲಚಂದ್ರರ ಸೌಜನ್ಯವನ್ನು ನಾನು ಮರೆಯುವಂತಿಲ್ಲ. ಶಿಬಿರದಿಂದಾಗಿ ನನಗೆ ಮತ್ತು ಇತರ ಹಲವರಿಗಾದ ಇನ್ನೊಂದು ಲಾಭವನ್ನು ನಾನಿಲ್ಲಿ ಬರೆಯಬೇಕು. 'ಲಂಕೇಶ-ಮುಕ್ತ ಎಪಿ ಸೋಡ್'ನಿಂದಾಗಿ ಕಾರಂತರ ಕುರಿತು ನನ್ನಲ್ಲಿ ಉಂಟಾಗಿದ್ದ ಸಂಶಯ ಪೂರ್ವ ಗ್ರಹಗಳೆಲ್ಲ ಶಿಬಿರದಲ್ಲಿ ಕಾರಂತರ ಒಡನಾಟದ ಅನಂತರ ದೂರವಾದುವು.

ಶಿಬಿರದ ಸಮಾರೋಪ ಸಮಾರಂಭ ೬–೨–೭೩ರಂದು ನಡೆಯಿತು. ಪ್ರೊ. ಹರಿದಾಸ ಭಟ್ಟರು ಶಿಬಿರದಲ್ಲಿ ಭಾಗವಹಿಸಿದವರಿಗೆಲ್ಲ ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಿದರು. ಬಿ. ವಿ. ಕಾರಂತರು ತಮ್ಮ ಭಾಷಣ ದಲ್ಲಿ ಶಿಬಿರದ ಗೆಲವು–ಸೋಲುಗಳನ್ನು ಸ್ಪಷ್ಟವಾಗಿ ತಿಳಿಸಿದರು– "ಶಿಬಿರದಲ್ಲಿ ನಾನು ಯೋಚಿಸಿದ್ದೆಲ್ಲ ಸಾಧಿಸಲು ಸಾಧ್ಯವಾಗಲಿಲ್ಲ. ಸಮಯ ಕಡಮೆ ಯಾಯಿತು. ಮೇಳದವರಲ್ಲಿ ತಾವು ಒಂದು ಎಂಬ ಫೀಲಿಂಗ್ ಬರಲಿಲ್ಲ. ಆದ್ದರಿಂದ ಕೋರಸ್ ವಿಫಲವಾಯಿತು. ಪಾತ್ರವಹಿಸಿದವರಲ್ಲಿ ಕೆಲವರು ರಿಹರ್ಸಲಿನ ಕೊನೆಯ ದಿನಗಳಲ್ಲಿ ಸ್ಕ್ರಿಪ್ಟ್ ಓದುವುದನ್ನು ಬಿಟ್ಟರು. ಇದರಿಂದಾಗಿ ನಾಟಕದ ಯಶಸ್ಸಿಗೆ ತೊಂದರೆಯಾಯಿತು. ಒಬ್ಬರು ಯಾವಾಗಲೂ ಒಂದೇ ರೀತಿಯ ಪಾತ್ರಗಳನ್ನು ಮಾಡಬಾರದು. ನಾಟಕ ಮುಗಿದ ಮೇಲೆ ಅವರ ಮಾತುಗಳನ್ನು ಮರೆತುಬಿಡಬೇಕು. ಇಂತಹ ಶಿಬಿರಗಳು ಆಗಾಗ ನಡೆಯ ಬೇಕು. ಹೆಚ್ಚು ಹೆಚ್ಚು ಜನ ಅದರಲ್ಲಿ ಭಾಗವಹಿಸಬೇಕು. ನಾಟಕವನ್ನು ನಾವು ಹಾಬಿಯಾಗಿ ತೆಗೆದುಕೊಂಡಾಗ ಅದರಲ್ಲಿ ದಿಸ್ಕೋರ್ಶನ್ ಹೆಚ್ಚು ಇರಬೇಕು." ಎಂದರು.

'ಅಂಧಯುಗ' ನಾಟಕದ ಕೊನೆಯಲ್ಲಿ ಜರ "ನಾನು ಪ್ರಭುವಿನ ಸಂದೇಶ ತಂದಿದ್ದೇನೆ. ಯಾರಾದರೂ ಕೇಳಿಸಿಕೊಳ್ಳುವಿರಾ ? ಯಾರಾದರೂ ಕೇಳಿಸಿ

[illegible]
[illegible]
[illegible]

* * *

[illegible]
[illegible] :

* [illegible] National School of Dramatics [illegible]
[illegible] ?

"[illegible]"

* [illegible] ?

"[illegible]"

* [illegible] ?

"[illegible]"

* ನಾಟಕದಲ್ಲಿ ಆಧುನಿಕತೆ ಅದರ ಸಾಹಿತ್ಯಾಂಶಕ್ಕೆ ಸಂಬಂಧಿಸಿದ್ದೇ ಅಥವಾ........ ?

"ಆಧುನಿಕತೆ ಇಂದು ಜೀವನ ಧರ್ಮವಾಗಿದೆ. ನಮ್ಮ ಸಮಾಜ ವ್ಯವಸ್ಥೆ ಇಂದು ಬದಲಾಗುತ್ತಿದೆ. ಸಮಾಜ ಜೀವಿಯಾದ ಮನುಷ್ಯನ ಕಲ್ಪನೆ ಈಗ ಪೂರ್ತಿ ಬೇರೆಯಾಗಿದೆ. ಬೆಕೆಟ್‌ನಂಥ ನಾಟಕಕಾರ ಆಧುನಿಕ ಜೀವನದ ಗೊಂದಲವನ್ನು ಚಿತ್ರಿಸುವುದರಲ್ಲಿ ಯಶಸ್ವಿಯಾಗುತ್ತಾನೆ."

* ನೀವು ರಂಗಭೂಮಿಯ ಉದ್ಯೋಗವನ್ನೇ ಕೈಗೊಳ್ಳಲು ಕಾರಣ ವೇನು ?

"........ನಾಟಕಗಳ ಸಾಮಾಜಿಕ ಮಹತ್ವವನ್ನು ತಿಳಿದಿದ್ದರಿಂದ ನಾನು ಈ ಕಸುಬಿನಲ್ಲಿದ್ದೇನೆ."

* * *

ಶಿಬಿರದಲ್ಲಿ ನ್ಯಾಶನಲ್ ಸ್ಕೂಲ್ ಆಫ್ ಡ್ರಾಮಾದ ಪ್ರಾಧ್ಯಾಪಕ ಮತ್ತು 'ನಟರಂಗ್' ದ ಸಂಪಾದಕ ಪ್ರೊ. ನೇಮಿಚಂದ್ರ ಜೈನ್ ಅವರು 'ಆಧುನಿಕ ನಾಟಕಗಳು' ಮತ್ತು 'ಕನ್ನಡ ನಾಟಕಗಳ' ಕುರಿತು ಉಪನ್ಯಾಸ ನೀಡಿದರು. ಅವುಗಳ ಸಾರಾಂಶ ಇದು :

"ನಾಟಕಗಳ ಪರಿಸ್ಥಿತಿ ಹತ್ತು ವರ್ಷಗಳ ಹಿಂದಿನಂತೆ ಈಗಿಲ್ಲ. ಒಂದು ಹೊಸ ದೃಷ್ಟಿ ಈಗ ಉಂಟಾಗಿದೆ. ಮಾನವನ ಜೀವನದ ಮೂಲವನ್ನೇ ಪ್ರಶ್ನಿಸುವ ಧರ್ಮವೀರ ಭಾರತಿಯವರ 'ಅಂಧಯುಗ'ಕ್ಕೆ ಆಧುನಿಕ ನಾಟಕಗಳಲ್ಲಿ ಮಹತ್ವದ ಸ್ಥಾನವಿದೆ. ಇಂದು ಮಾನವನ ಜೀವನ ಯಾಂತ್ರಿಕವಾಗುತ್ತಿದೆ. ಒಬ್ಬನಿಗೂ ಇನ್ನೊಬ್ಬನಿಗೂ ವ್ಯತ್ಯಾಸ ಕಡಿಮೆಯಾಗುತ್ತಿದೆ. ವ್ಯಕ್ತಿತ್ವ, ವೈಯಕ್ತಿಕತೆ ನಾಶವಾಗುತ್ತಿದೆ. ಈ ಸಮಸ್ಯೆಯ ಚಿತ್ರಣ ಬಂಗಾಲಿಯ ಬಾದಲ್ ಸರ್ಕಾರ್ ಅವರ 'ಬಾಕಿ ಇತಿಹಾಸ' ಮೊದಲಾದ ನಾಟಕಗಳಲ್ಲಿದೆ. ಇಂದಿನ ಮಾನವನ ಜೀವನದಲ್ಲಿ ಹಿಂಸೆಗೆ ಹೆಚ್ಚಿನ ಸ್ಥಾನವಿದೆ. ಅವನು ಪಶುವಾಗುತ್ತಿದ್ದಾನೆ– ಎಂಬುದನ್ನು ಮರಾಠಿಯ ತೆಂಡೂಲ್ಕರ್ ತಮ್ಮ ನಾಟಕಗಳಲ್ಲಿ ಚಿತ್ರಿಸಿದ್ದಾರೆ. ಅವರ 'ಸಖಾರಾಮ್ ಬೈಂಡರ್' ನಾಟಕದಲ್ಲಿ ಗಂಡು–ಹೆಣ್ಣಿನ ಸಂಬಂಧದ ಚಿತ್ರಣವಿದೆ. 'ತುಘಲಕ್' ನಲ್ಲಿ ಗಿರೀಶ ಕಾರ್ನಾಡರು ತುಘಲಕ್‌ನ ದುರಂತವನ್ನು ಇಂದಿನ ರಾಜಕೀಯ ದುರಂತಕ್ಕೆ ಸಂಕೇತವಾಗಿ ಚಿತ್ರಿಸುತ್ತಾರೆ.

ಮಾನವ ಮನಸ್ಸು ಮತ್ತು ದೇಹದ ಸಮತೂಕ ಬಯಸಿ ಹೋರುವ ಚಿತ್ರ
ಕಾರ್ನಾಡರ 'ಹಯವದನ'ದಲ್ಲಿದೆ. ಹಿಂದಿಯ ಮೋಹನ್ ರಾಕೇಶರ
'ಆಧೇ ಅಧೂರೆ', 'ಆಷಾಢ್ ಕಾ ಏಕ್ ದಿನ್', ಕನ್ನಡದ ಕಂಬಾರರ 'ಜೋಕು
ಮಾರ ಸ್ವಾಮಿ', ಶ್ರೀರಂಗರ 'ಕೇಳು ಜನಮೇಜಯ' ಯಶಸ್ವಿ ಆಧುನಿಕ ನಾಟಕ
ಗಳು. ಮರಾಠಿಯ ಖಾನೋಲ್ಕರ್, ಬಂಗಾಲಿಯ ಉತ್ಪಲದತ್, ಮೋಹಿತ
ಚಟರ್ಜಿ ಮತ್ತು ಗುಜರಾತಿಯ ಹೊಸ ನಾಟಕಕಾರರ ಕೊಡುಗೆಗಳೂ ಮಹತ್ವ
ದವು. ಈ ಆಧುನಿಕ ನಾಟಕಗಳು ಭಾಷೆಯ ದೃಷ್ಟಿಯಿಂದಲೂ ಮಹತ್ವ
ಪೂರ್ಣವಾಗಿವೆ. ಕಳೆದ ಇಪ್ಪತ್ತು ವರ್ಷಗಳ ಭಾರತೀಯ ರಂಗಭೂಮಿಯಲ್ಲಿ
ಎದ್ದು ಕಾಣುವ ಎರಡು ನಾಟಕಗಳು– 'ಅಂಧಯುಗ' ಮತ್ತು 'ತುಘಲಕ್'.

ಇಂದಿನ ಕನ್ನಡ ರಂಗಭೂಮಿಯ ಹೊಸ ಪ್ರಯೋಗಸಾಧನೆಗಳು ಇತರ
ಭಾಷೆಗಳ, ಸಾಹಿತ್ಯಗಳ ಮೇಲೆ ಪ್ರಭಾವ ಬೀರುತ್ತಿವೆ. ಭಾರತೀಯ ನಾಟಕ
ಸಾಹಿತ್ಯಕ್ಕೆ ಗಿರೀಶ ಕಾರ್ನಾಡ್ ಮತ್ತು ಶ್ರೀರಂಗರ ಕೊಡುಗೆ ಮಹತ್ವಪೂರ್ಣ
ವಾಗಿದೆ. ಪಿ. ಲಂಕೇಶ ಮತ್ತು ಚಂದ್ರಶೇಖರ ಪಾಟೀಲರೂ ಉತ್ತಮ ನಾಟಕ
ಗಳನ್ನು ನೀಡಿದ್ದಾರೆ. ಇನ್ನೂ ಹಲವು ಕನ್ನಡ ನಾಟಕಗಳು ಹಿಂದೀ ಮತ್ತು
ಇತರ ಭಾಷೆಗಳಿಗೆ ಭಾಷಾಂತರವಾಗಬೇಕು. ಕನ್ನಡದ ಅಸಂಗತ ನಾಟಕಗಳೂ
ಅನೇಕರಲ್ಲಿ ಆಸಕ್ತಿ ಹುಟ್ಟಿಸಿವೆ."

ಎಚ್. ಎಸ್. ಭೀಮನಗೌಡರ

ಹೆಣ್ಣು

ಹೆಣ್ಣೆ,
ನೀನೇ ಮಾಡಿದ್ದು ನನ್ನ ಖೂನಿ.
ನೋಡಿಲ್ಲಿ ಈ ರುಂಡ–ಮುಂಡ ಬೇರೆ,
ಈ ಕೈ–ಕಾಲು ಬೇರೆ, ಈ ರಕ್ತ ಮಾಂಸ ಬೇರೆ;
ರಕ್ತ ಹರಿಯುತ್ತಿದೆ ಎತ್ತೆತ್ತಲೂ.

ಹಡೆದಿ ಉಣಿಸಿದಿ
ಪ್ರೇಮಿಸಿದಿ
ಆದರೆ ತಣಿಸಲಿಲ್ಲ, ಕರುಣೆಯಿಲ್ಲದೆ ಖಡ್ಗ ಚುಚ್ಚಿದಿ.

ಹುಚ್ಚಿ, ದೇಹ ತುಂಡಾದರೆ ದೇಹದೊಳಗಿನ
ಆಶೆ ತುಂಡಾಗಿಲ್ಲ.
ನಾನೀಗ ಬದುಕಬೇಕು
ನಿನ್ನ ಬಿಟ್ಟರೆ ಮತ್ತಾರು
ಬದುಕಿಸಬೇಕು ನನ್ನ ?

ಹೀಗೆ ದಾರಿಯ ಮೇಲೆ
ಬೀಳುವದು ಒಳಿತಲ್ಲ ಹೆಣ್ಣೆ.
ಇತ್ತ ಮುಕ್ತಿಯೂ ಇಲ್ಲ
ಮತ್ತೆ ಜೀವವೂ ಇಲ್ಲ.

ತುಳಿಯುತ್ತಾರೆ ಜನ
ಮೂಗು ಮುಚ್ಚುತ್ತಾರೆ ಗಬ್ಬು ವಾಸನೆಗೆ
ಹೇಸಿಕೊಳ್ಳುತ್ತಾರೆ, ದೂರ ಸರಿಯುತ್ತಾರೆ.

ನನ್ನ ಬದುಕಿಸಿಯಾರೆ ಇವರು ?

ಈ ಗಾಳಿಯೊ, ಮಾತನಾಡದೆ ಸಾಗಿದೆ
ಈ ಮರವೊ, ನಿಂತಿದೆ ದೂರ ಸುಮ್ಮನೆ
ಈ ನೆಲವೊ, ಮಲಗಿದೆ ಶಿಸ್ತು.
ಯಾರು ಬದುಕಿಸಬೇಕು ನನ್ನ ?

ಹೆಣ್ಣೆ, ನಾ ಬದುಕಬೇಕು
ನಾ ನಡೆಯಬೇಕು
ಇದಕೆಲ್ಲ ನಿನ್ನ ಗಾರುಡಿಯೆ ಬೇಕು.
ಏಳಬೇಕು ಕುಣಿಯಬೇಕು
ನಿನ್ನ ಪುಂಗಿಗೆ ಹೆಡೆಯೆತ್ತಬೇಕು
ಆಡಬೇಕು,
ಆಡುತ್ತ ಆಡುತ್ತ ಎಲ್ಲರ ತಣಿಸಬೇಕು.

ಬಾ ನನ್ನ ಬದುಕಿಸು ಹೆಣ್ಣೆ,
ನೀನು ವ್ಯಕ್ತಿಯೇ ಅಥವಾ ಶಕ್ತಿಯೇ
ಅಥವಾ ಪ್ರಕೃತಿಯೇ ಅಥವಾ ಸಮಷ್ಟಿಯೇ
ಏನೇ ಇದ್ದರೂ ಬಾ ನನ್ನ ಬದುಕಿಸಿ
ಬಾರಿಸು ಪುಂಗಿ.

ತಪ್ಪಿದೆಯೊ ನೋಡು
ದೆವ್ವವಾಗುವೆ, ನಿನ್ನ ಮನೆ ಮುರಿಯುವೆ
ನೀನು ತಾಯಿಯೊ, ಮಾಯ ಮಾಡುವೆ
ತಂಗಿಯೊ, ಕಣ್ಣ ಮೀಟುವೆ
ಹೆಂಡತಿಯೊ, ರುಂಡ ಹಾರಿಸುವೆ
ಮಗಳೊ, ಕೊರಳ ಕೊಯ್ಯುವೆ.

ಬಾ ಬೇಗ ಬದುಕಿಸಿ
ಬಾರಿಸು ನಿನ್ನ ಪುಂಗಿ.

SANKRAMANA

CREATIVE AND CRITICAL WRITINGS IN KANNADA

•

•

ರಚನಾತ್ಮಕ
ಹಾಗೂ
ವಿಮರ್ಶಾ
ಲೇಖನಗಳು

ಸಂಕ್ರಮಣ